
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE


ಸಂಪುಟ–18 | ಸಂಚಿಕೆ–42 | ಅಕ್ಟೋಬರ್ 14–20, 2024 | ಪುಟ 16 | ರೂ.10/–
Volume-18 | Issue-42 | October 14-20, 2024 | Pages:16 | Price: 10/-



ಎರಡು ಚುನಾವಣೆಗಳು

ಹರ್ಯಾಣ ಜಾತ್ಯತೀತ ಶಕ್ತಿಗಳಿಗೆ ಎಚ್ಚರಿಕೆ

ಜಮ್ಮು ಕಾಶ್ಮೀರ ಆಶಾಕಿರಣ




ಸ್ಯಾಮ್ ಸಂಗ್ ಕಾರ್ಮಿಕರ ಮುಷ್ಕರ: ಸಂಘ ಕಟ್ಟುವ ಸಾಂವಿಧಾನಿಕ ಹಕ್ಕಿಗಾಗಿ ಹೋರಾಟ

ಒಳ ಮೀಸಲಾತಿ ಒಳ ಸಂಘರ್ಷ ಆಗಬಾರದು

ಕೋವಿಡ್ ಅಕ್ರಮಗಳ ತನಿಖೆ: ಸರ್ಕಾರದ ಹೊಣೆಗಾರಿಕೆ

ಕಾಶ್ಮೀರ ಸಿಪಿಐ(ಎಂ): ಐದನೆಯ ಬಾರಿ ಹಾರಿದ ವಿಜಯ ಪತಾಕೆ



ವಿಶೇಷ ಸಂಚಿಕೆ

ಟಾಟಾ ಸಾಮ್ರಾಜ್ಯದ ಬೆಳವಣಿಗೆ: ಬೆವರು, ರಕ್ತ ಸುರಿಸಿದ ಕೋಟ್ಯಾಂತರ ಜನ

ಬನ್ನಿ ಹಬ್ಬದ ಬಹುರೂಪಗಳು

ಡಾ.ಅರುಣ್ ಜೋಳದಕೂಡ್ಲಿಗಿ

ದಸರಾ ಹಬ್ಬದ ಐತಿಹಾಸಿಕ ಹಿನ್ನೆಲೆ ಮತ್ತು ಸಾಂಸ್ಕೃತಿಕತೆಯ ಕುರಿತು ತಮ್ಮದೇ ಒಳ ನೋಟವುಳ್ಳ ಸಾಂಸ್ಕೃತಿಕ ಚಿಂತಕರಾದ ಡಾ. ಅರುಣ ಜೊಳದ ಕೂಡ್ಲಿಗಿ ಯವರ ವಿಶ್ಲೇಷಣಾ ಬರಹ ಇಲ್ಲಿದೆ. ಸುಧಾ ವಾರ ಪತ್ರಿಕೆಯ ವಿಶೇಷ ಬರಹದಿಂದ ಆಯ್ದ ಭಾಗವನ್ನು ಪ್ರಕಟಿಸುತ್ತಿದ್ದೇವೆ.



ಶಕ್ತಿದೇವತೆಯ ಅರಿವಿನ ಮೂಲ

ದಸರಾ ಅರಿವು, ಜ್ಞಾನ, ಶಿಕ್ಷಣದ ಜತೆ ತಳಕು ಹಾಕಿಕೊಂಡಿರುವುದು ವಿಶೇಷ. ಮೌರ್ನಮಿ ಹಾಡುಗಳ ಹಿನ್ನೆಲೆ ಈ ರೀತಿಯದ್ದು. ಇದನ್ನು ಸೂಕ್ಷ್ಮವಾಗಿ ನೊಡಿದರೆ ಕಾಳಿಯನ್ನು ಸರಸ್ವತಿಯನ್ನಾಗಿ ಆರಾಧಿಸಿರುವುದು ಕಾಣುತ್ತದೆ. ಮಧ್ಯಭಾರತದಲ್ಲಿ ಭಿಲ್ಲರಲ್ಲಿ ಕಾಳಿನದೈವವು ಸ್ತ್ರೀ ರೂಪಿಯಾಗಿದೆ. ಕಾಳಿಯು ಕಾಳಿದಾಸನ ನಾಲಗೆಯ ಮೇಲೆ ಅಕ್ಷರ ಬರೆಯುವ ಬಗ್ಗೆ ಕತೆಗಳಿವೆ. ಶಾಕ್ತದಲ್ಲಿ ಹತ್ತು ದೇವಿಯರನ್ನು ದಶವಿದ್ಯಾ ಎನ್ನುತ್ತಾರೆ. ಇದು ತಂತ್ರಪಂಥದಲ್ಲಿ ಒಂದು ಸಾಧನೆಯ ಹೆಸರೂ ಕೂಡ. ತಾಂತ್ರಿಕ ಬೌದ್ಧರಲ್ಲಿ ತಾರೆಯು ವಿದ್ಯೆಯ ದೇವತೆ. 64 ಯೋಗಿನಿಯರಲ್ಲಿ ತಾರಾ ಮತ್ತು ಸರಸ್ವತಿಯರಿದ್ದಾರೆ. ತಾರೆಯ ಮೂಲರೂಪ ಎನ್ನಲಾಗುವ ಕೊಲ್ಲೂರಿನ ಮೂಕಾಂಬಿಕೆ ಗುಡಿಯಲ್ಲಿ ಮಕ್ಕಳಿಗೆ ಮೊದಲ ಅಕ್ಷರ ಬರೆಸುವ ಪದ್ಧತಿ ಇದೆ. ಕುಶಲಕರ್ಮಿ ವರ್ಗಗಳು ಹಾಡುವ ಈ ಪದಗಳಲ್ಲಿ, ತಮ್ಮ ಶ್ರಮ ಮತ್ತು ಕರ್ಮ ಜ್ಞಾನದ ಹಿಂದೆ ಶಕ್ತಿದೈವದ ಕೃಪೆಯಿರುವ ನಂಬುಗೆಯಿದೆ. ಸಮಾಜಕ್ಕೆ ಅಗತ್ಯವಾದ ಸರಕು ಮತ್ತು ಸೇವೆ ಉತ್ಪಾದಿಸುವ ಪ್ರಕ್ರಿಯೆಯಲ್ಲಿ ಹುಟ್ಟುವ ಜ್ಞಾನಕ್ಕೆ ಇಲ್ಲಿ ಭಕ್ತಿರೂಪ ತೊಡಿಸಲಾಗಿದೆ.

ಈ ದೃಷ್ಟಿಯಿಂದ ಮುದ್ದೆಗಮ್ಮಾರರು ಕಾಳಿಯ ಮೇಲೆ ಕಟ್ಟಿರುವ ಹಾಡುಗಳನ್ನು ಗಮನಿಸಬೇಕು. 'ನಾಲಿಗೆಂಬೋದೇ ಲಕ್ಷಾಣ ಕಡಿಯಿಡದೂ ಓದ್ಯಾವ ಕಾಳಮ್ಮನ ಮೊದಲಿಂದಾ'; 'ಹೊತ್ತಿಗೇ ಕೊಟ್ಟೆವ್ವ ಹೊತ್ತೀಲಿ ನಿಂತೆವ್ವಾ'; ವಾಲಿಯ ಕೊಟ್ಟೆವ್ವ ವಾರೀಲಿ ನಿಂತೆವ್ವಾ' ಮುಂತಾದ ವರ್ಣನೆ ಇಲ್ಲಿವೆ. ಇಲ್ಲಿನ ನಾಲಿಗೆ, ಓದು, ಓಲೆ ಹಾಗೂ ಹೊತ್ತಿಗೆಗಳು ವಿದ್ಯೆಯ ಮೌಖಿಕ ಮತ್ತು ಅಕ್ಷರ ರೂಪಗಳೆರಡಕ್ಕೂ ಸೇರಿಕೆಯಾದವು. ದೇವಿಯು ಸಮುದಾಯಕ್ಕೆ ಹೊತ್ತಿಗೆಯನ್ನು ಸರಿಯಾದ ಹೊತ್ತಲ್ಲಿ ಕೊಟ್ಟಿದ್ದಾಳೆ. ಓಲೆಯನ್ನು ಕೈಗಿಟ್ಟು ಪಕ್ಕದಲ್ಲೇ ನಿಂತಿದ್ದಾಳೆ. ಇಲ್ಲಿರುವ ಕಾಲ(ಹೊತ್ತು) ಮತ್ತು ಸ್ಥಳದ(ಪಕ್ಕ) ಚೌಕಟ್ಟಿನಲ್ಲಿ ವಿದ್ಯೆಯ ಕಲ್ಪನೆಯು ಕೇವಲ ಭಕ್ತಿಯಾಗಿಲ್ಲ; ಕಸುಬುದಾರರ ವೃತ್ತಿಜ್ಞಾನ ಮತ್ತು ಪ್ರಾಯೋಗಿಕ ಅನುಭವವನ್ನು ದೈವದ ಜತೆಗೆ ಏಕೀಭವಿಸುತ್ತಿದೆ. ಕುಶಲಕರ್ಮಿಗಳ ಕುಶಲತೆ ಸ್ತ್ರೀಯರ ನೆರವಿಲ್ಲದೆ ಪೂರ್ಣಗೊಳ್ಳದು. ಹೀಗಾಗಿ ಈ ವರ್ಗಗಳು ವಿದ್ಯೆಯ ಮೂಲವನ್ನು ದೇಹಶ್ರಮ ಸಂಬಂಧವಿಲ್ಲದ ಸರಸ್ವತಿಯಲ್ಲಿ ಕಾಣದೆ, ದೈಹಿಕ–ಬೌದ್ಧಿಕ ಶ್ರಮದ ಜತೆ ಗಾಢ ಲಗತ್ತುಳ್ಳ ಕಾಳಿಯಲ್ಲಿ ಗುರುತಿಸುತ್ತವೆ ಎಂದು ಸಂಸ್ಕೃತಿ ಚಿಂತಕರಾದ ಪ್ರೊ. ರಹಮತ್ ತರೀಕೆರೆ ಅವರು ವಿಶ್ಲೇಷಿಸುತ್ತಾರೆ. (ತರೀಕೆರೆ, ಕರ್ನಾಟಕ ಶಾಕ್ತಪಂಥ, 2017/63–67) ಹೀಗಾಗಿ ಮೌರ್ನಮಿ ಪದಗಳು ಅಕ್ಷರಭ್ಯಾಸದ ಜತೆ ಬೆರೆತಿವೆ. ಹೀಗೆ ಶಾಕ್ತೇಯ ದೇವತೆಗಳನ್ನು ಜ್ಞಾನಮೂಲವೆಂಬ ನಂಬಿಕೆಯು ಆಚರಣೆಯ ರೂಪದಲ್ಲಿ ಮುಂದುವರಿದಿದೆ.

ಮಾನೌಮಿ ಪದಗಳು

ಈ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿದರೆ, ಕರ್ನಾಟಕದಲ್ಲಿ ಮಹಾನವಮಿ ಹಬ್ಬಕ್ಕಾಗಿಯೇ ಒಂದು ಜನಪದ ಹಾಡಿಕೆ ಪ್ರಕಾರ ಹುಟ್ಟಿಕೊಂಡಿದೆ. ಇದನ್ನು 'ಮಾನೌಮಿ ಪದಗಳು' 'ಮಾರ್ನೌಮಿ ಪದಗಳು' ಎಂದು ಕರೆಯುತ್ತಿದ್ದರು. ಬ್ರಿಟೀಶರು ಶಾಲೆಗಳನ್ನು ತೆರೆಯುವ ಮುನ್ನ, ಸರಕಾರಿ ಶಾಲೆಗಳು ಆರಂಭವಾಗುವ ಮೊದಲು ಹಳ್ಳಿಗಳಲ್ಲಿ 'ಕೂಲಿಮಠ' ಗಳಿದ್ದವು. ಆಗಿನ್ನೂ ಹುಡುಗಿಯರು ಕಲಿಯುವಂತಿರಲಿಲ್ಲ. ಹುಡುಗರಿಗೆ ಮಾತ್ರ ಕಲಿಸುವಾತ 'ಓದಯ್ಯ'ನೇ ಮೇಷ್ಟ್ರು. 'ಓದಯ್ಯ' ಎಂದರೆ ಓದಿಸುವ ಅಯ್ಯ. ಈಗಲೂ ಗುರುತಾಗಿ ಓದಯ್ಯರ ಮನೆತನಗಳಿವೆ. ಈತನಿಗೆ ತಿಂಗಳ ಸಂಬಳವಿಲ್ಲ. ವರ್ಷಕ್ಕಿಷ್ಟು ಹಣ, ಧಾನ್ಯವೆಂದು ಒಪ್ಪಂದವಾಗುತ್ತಿತ್ತು. ಈತನಿಗೆ ಹಳ್ಳಿಯಲ್ಲಿ ಬಹಳ ಗೌರವ, ಹಗಲು ಮಠವಾದರೆ, ರಾತ್ರಿ ಜನರಿಗೆ ಯಾವುದಾದರೂ ಪುರಾಣವನ್ನು ಓದಿ ಹೇಳುವುದು ಅಥವಾ ಭಜನೆ ಮಾಡುವುದು ನಿತ್ಯದ ಕೆಲಸವಾಗಿತ್ತು. ನವರಾತ್ರಿ ಹಬ್ಬ ಬರುವ ಮುಂಚೆ ಓದಯ್ಯ ತನ್ನ ಮಠದ ಹುಡುಗರಿಗೆ ಮಾನವಮಿ ಪದಗಳನ್ನು ರೂಢಿ ಮಾಡಿಸುತ್ತಿದ್ದ. ಈ ಮಕ್ಕಳ ತಂದೆ ತಾಯಿಗಳು 'ನಮ್ಮುಡುಗ ಮಾರ್ನಮಿ ಆಡ್ತಾನೆ' ಎಂದು ಖುಷಿಪಡುತ್ತಿದ್ದರು. ಮಕ್ಕಳಿಗೆ ಮಾನೌಮಿ ಪದ ಹಾಡಲೆಂದೆ ಹೊಸ ಬಟ್ಟೆ ಹೊಲಿಸುತ್ತಿದ್ದರು. ಸಾಧಾರಣವಾಗಿ ಮಕಮಲ್ಲು ಟೋಪಿ, ನಿಕ್ಕರು, ಷರಟು, ಕೋಟು ಮತ್ತು ಮೇಲೆ ಹಾಕಿಕೊಳ್ಳಲು ಒಂದು ಶಲ್ಯ–ಇದು ಆ ಹುಡುಗರ ಉಡುಪು. ಪ್ರತಿಯೊಬ್ಬ ಹುಡುಗನ ಕೈಲೂ ಬಣ್ಣದ ಕೋಲು. ಉದ್ದನೆಯ ಕೋಲುಗಳಿಗೆ ಬಣ್ಣದ ಕಾಗದಗಳನ್ನು ಸುತ್ತಿ ಅವನ್ನು ಹುಡುಗರಿಗೆ ಕೊಡುತ್ತಿದ್ದರು. ಈ ಉಡುಪನ್ನು ಹಾಕಿಕೊಂಡು, ಬಣ್ಣದ ಕೋಲನ್ನು ಹಿಡಿದು ನಿಂತ ತಮ್ಮ ಮಕ್ಕಳು ಮಾನೌಮಿ ಪದಗಳನ್ನು ಹಾಡುತ್ತಿದ್ದರು. ಈ ಹುಡುಗರನ್ನು ಓದಯ್ಯನವರು ತಮ್ಮ ಗ್ರಾಮದಲ್ಲಿ ಮನೆ ಮನೆಗೂ ಕರೆದುಕೊಂಡು ಹೋಗುತ್ತಿದ್ದರು. ಇದಕ್ಕೆ 'ಊರಾಡುವುದು' ಎನ್ನುತ್ತಿದ್ದರು. ಪ್ರತಿ ಮನೆಯಲ್ಲಿಯೂ ಬಾಲಕರು ಹರಕೆಯ ಪದಗಳನ್ನು ಹಾಡುತ್ತಿದ್ದರು. ನಿಮಗೆ ಶುಭವಾಗಲಿ, ಸಮೃದ್ಧಿಯಾಗಲಿ, ನಿಮ್ಮ ಮನೆ ಬೆಳೆಯಲಿ, ತಂಪಾಗಿರಲಿ ಎಂದು ಈ ಬಾಲಕರು ಹಾಡಿ ಹಾರೈಸುತ್ತಿದ್ದರು.

'ಕಡಲೆ ಬೆಲ್ಲವು ಕೊಬರಿ ನಮಗಾಗಬೇಕು
ಉಡುಗೊರೆಯು ವೀಳ್ಯ ನಮ್ಮಯ್ಯಗಳಿಗೆ ಬೇಕು
ಮಳೆ ಬಂದು ಬೆಳೆಬಂದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವಳು ಕರೆಯಲೆಂದು
ನಳಿನಮುಖಿಯರು ಸುಪುತ್ರರ ಪಡೆಯಲೆಂದು
ಬಣ್ಣ ಬಂಗಾರ ಪುಣ್ಯವು ಹೆಚ್ಚಲೆಂದು..
ಮಾನೌಮಿ ಪದಗಳ ಹಾಡೇವು

ಎಂದು ವಿಧ ವಿಧವಾಗಿ ಹಾಡುತ್ತಿದ್ದರು. ಈ ಬಾಲಕರು ಮೊದಲು ಊರಿನ ದೇವತೆಯನ್ನು ಹೊಗಳಿ ಪೂಜಿಸಿ ಅಲ್ಲಿಂದ ಸಾಮಾನ್ಯವಾಗಿ ಗೌಡರ ಮನೆಗೆ ಹೋಗುತ್ತಿದ್ದರು. ಆಗ ಗೌಡರನ್ನು ಕುರಿತೇ ಹಾಡುತ್ತಿದ್ದರು. ಕೂಲಿಯ ಮಠದಲ್ಲಿ ಮೇಲುಜಾತಿಗಳಿಗೆ ಹೆಚ್ಚಿನ ಪ್ರಾತಿನಿಧ್ಯವಿದ್ದರೂ ಅಸ್ಪೃಶ್ಯರನ್ನು ಹೊರತುಪಡಿಸಿ ಕೆಲವು ಕೆಳಜಾತಿಯ ಮಕ್ಕಳು ಕಲಿಯುತ್ತಿದ್ದರು.

ಕಾಳಗದ ಅನುಕರಣೆ

ಶಾಕ್ತ ದೈವಗಳಿಗೂ ಕಾಳಗಕ್ಕೂ ಸಂಬಂಧವಿದೆ. ಪ್ರಾಚೀನ ಶಾಸನಗಳಲ್ಲಿ ಯೋಗಿನಿಯರನ್ನು ಬೈರವಿ ಎಂದು ಕರೆದದ್ದೂ ಇದೆ. ಹಾಗಾಗಿ ಕಾಳಿ ಯುದ್ಧದೇವತೆ. ಯುದ್ಧಕ್ಕೆ ಹೊರಡುವ ಮುನ್ನ ಕಾಳಿಯನ್ನು ಆರಾಧನೆ ಮಾಡುವುದು ಸಾಮಾನ್ಯವಾಗಿತ್ತು. ಕಾಳಿ ರೌದ್ರದೇವತೆ, ಬಲಿಯನ್ನು ಪಡೆದು ರಕ್ತವನ್ನು ಪ್ರಸಾದವನ್ನಾಗಿ ಸ್ವೀಕರಿಸಿ ಸಾಂಕೇತಿಕವಾಗಿ ರುಂಡ ಮಾಲೆಯನ್ನು ಹಾಕುವವಳು. ಅಂತೆಯೇ ಕಾಳಿಗೂ ರಕ್ತ ಬೀಜಾಸುರನಿಗೂ ಯುದ್ಧವಾದಾಗ ಜನ್ಮ ತಳೆದವರು ಉತ್ತರ ಭಾರತ ಠಕ್ಕ ಸಮುದಾಯ ಎನ್ನುವ ನಂಬಿಕೆಯೂ ಇದೆ.

ಈಗಲೂ ದಸರಾ ಹಬ್ಬದಲ್ಲಿ ಕಾಳಗಗಳ ಅನುಕರಣೆ ಮಾಡುವುದು ನಡೆಯುತ್ತದೆ. ಆಂದ್ರದ ಕರ್ನೂಲು ಆದೋನಿ ಭಾಗದಲ್ಲಿ ಬನ್ನಿ ಹಬ್ಬದಲ್ಲಿ ವ್ಯಾಪಕವಾದ ಕೋಲಿನ ಕಾಳಗಗಳು ನಡೆಯುತ್ತವೆ. ಶಿವನು ಭೈರವನ ರೂಪದಲ್ಲಿ ಮಣಿ ಮತ್ತು ಮಲ್ಲಾಸುರ ಎಂಬ ಇಬ್ಬರು ರಾಕ್ಷಸರನ್ನು ಕೋಲುಗಳಿಂದ ಹೊಡೆದು ಕೊಂದನು ಎಂಬ ನಂಬಿಕೆ ಈ ಆಚರಣೆಯ ಹಿಂದಿದೆ. ಕೆಲವು ಗ್ರಾಮಗಳ ಪುರುಷರು ಮಲ್ಲ ಮಲ್ಲೇಶ್ವರ ಸ್ವಾಮಿಯ ವಿಗ್ರಹಗಳನ್ನು ಹೊತ್ತು ನಡೆಯಲು ಪ್ರಾರಂಭಿಸುತ್ತಾರೆ. ಇನ್ನು ಕೆಲವು ಹಳ್ಳಿಗಳ ಜನರನ್ನು ರಾಕ್ಷಸನ ಕಡೆಯವರು ಎಂದು ಪರಿಗಣಿಸಲಾಗುತ್ತದೆ. ಅವರು ವಿಗ್ರಹವನ್ನು ಕಸಿದುಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗಾಗಿ ಬಡಿಗೆ ಹೊಡೆದಾಟವು ಭುಗಿಲೇಳುತ್ತದೆ. ಕರ್ನೂಲು ಭಾಗದ 'ದೇವರಗಟ್ಟು' ಗ್ರಾಮದ ಸುತ್ತಮುತ್ತಲಿನ 11 ಗ್ರಾಮಗಳ ಜನರು ದೊಡ್ಡ ಸಂಖ್ಯೆಯಲ್ಲಿ ಸೇರುತ್ತಾರೆ. ಈ ಹೊಡೆದಾಟದಿಂದ ನೂರಾರು ಜನರು ಗಾಯಗೊಂಡು ಆಸ್ಪತ್ರೆ ಸೇರುವ ಪ್ರಕರಣಗಳೂ ನಡೆದಿವೆ. ಹೀಗಾಗಿ ಆಂದ್ರಪ್ರದೇಶದ ಗಡಿಯನ್ನು ಹಂಚಿಕೊಂಡ ಸಿರುಗುಪ್ಪ ಭಾಗದಲ್ಲಿ ಕೆಲವಡೆ ಈ ಬಗೆಯ ಕಾಳಗದ ಅನುಕರಣೆ ನಡೆಯುತ್ತದೆ.

ಸಿರಗುಪ್ಪ ತಾಲೂಕಿನ ಹೊಳಗುಂದ ಗ್ರಾಮದಲ್ಲಿ ವಿಜಯದಶಮಿಗೆ ಮಾಳಮಲ್ಲೇಶ್ವರ ಸ್ವಾಮಿಯ ಉತ್ಸವ ಆಗುತ್ತದೆ. ಈ ಸಂದರ್ಭದಲ್ಲಿ ಕಾರಣಿಕ ಹೇಳಲಾಗುತ್ತದೆ. ಮೈಲಾರದ ಕಾರಣಿಕ ಹೋಲುವ ಈ ಕಾರಣಿಕ ಕೇಳಲು ಆಂದ್ರ ತೆಲಂಗಾಣ ಮತ್ತು ಕರ್ನಾಟಕದ ನೂರಾರು ಹಳ್ಳಿಗಳು ಸೇರುತ್ತವೆ. ಆ ದಿನ ಕಾದಾಟ ಅಥವಾ ಕಾಳಗ ನೆನಪಿಸುವ ಬಡಿಗೆ ಹೊಡೆದಾಟದ ಆಚರಣೆ ಇರುತ್ತದೆ. ಹೀಗೆ ಬಡಿಗೆ ಹಿಡಿದು ಬಡಿದಾಡುವ ಆಚರಣೆ ಒಮ್ಮೊಮ್ಮೆ ಸಂಘರ್ಷಕ್ಕೂ ಕಾರಣವಾಗಿದೆ. ಹಾಗಾಗಿ ಈ ಹಬ್ಬಕ್ಕೆ ಪೋಲಿಸರ ಕಟ್ಟೆಚ್ಚರ ಇರುತ್ತದೆ.

ವಿಜಯದ ಸಂಕೇತ

ಮೊದಲೆ ಉಲ್ಲೇಖಿಸಿದಂತೆ ವಿಜಯದ ನೆನಪಿಗೆ ಕಟ್ಟಿದ ಸ್ಮಾರಕ ಮಹಾನವಮಿ ದಿಬ್ಬ ಈಗಲೂ ವಿಜಯನಗರ ಕಾಲದ ರಾಜ ವೈಭವದಲ್ಲಿ ನಡೆಯುತ್ತಿದ್ದ ವಿಜಯದಶಮಿಯನ್ನು ನೆನಪಿಸುತ್ತದೆ. ಶ್ರೀಕೃಷ್ಣದೇವರಾಯನು ಒಡಿಶಾದ ಉದಯಗಿರಿಯಲ್ಲಿ ನಡೆದ ಯುದ್ಧದ ವಿಜಯದ ಸಂಕೇತವಾಗಿ ಈ ದಿಬ್ಬವನ್ನು ನಿರ್ಮಿಸಿರುವುದು ಐತಿಹಾಸಿಕ ದಾಖಲೆಗಳಿಂದ ತಿಳಿಯುತ್ತದೆ. ನಂತರದ ದಿನಗಳಲ್ಲಿ ವಿಜಯದಶಮಿಯಂದು ರಾಜ ಪರಿವಾರ ಈ ದಿಬ್ಬದ ಮೇಲೆ ಕುಳಿತು ದಸರಾ ವೈಭವವನ್ನು ವೀಕ್ಷಿಸುತ್ತಿದ್ದಂತೆ ಕಾಣುತ್ತದೆ. ದಿಬ್ಬದ ನಾಲ್ಕೂ ಬದಿಗೆ ಕೆತ್ತಲ್ಪಟ್ಟ ಉಬ್ಬು ಶಿಲ್ಪಗಳು ವಿಜಯದಶಮಿ ಸಂಭ್ರಮದ ಹಲವು ಆಯಾಮಗಳಿಗೆ ಸಾಕ್ಷಿಯಾಗಿವೆ.

ನಾಲ್ವಡಿ ಚಾಮರಾಜನ ಮಗ ರಾಜ ಒಡೆಯರ್ (1578– 1610), ವಿಜಯನಗರದ ಸ್ಥಳೀಯ ಸೈನ್ಯವನ್ನು ಸೋಲಿಸುತ್ತಾನೆ; ಈ ಯಶಸ್ಸಿಗೆ ಕೃತಜ್ಞತೆ ಸಲ್ಲಿಸುವ ಭಾಗವಾಗಿ ಸ್ಥಳೀಯ ದೈವವಾಗಿದ್ದ ಚಾಮುಂಡಿಯ ಭಕ್ತನಾಗುತ್ತಾನೆ; ಅವನಿಗೆ ದೇವಿಯ 'ಕರ್ಣಾಭರಣ' ಎಂದು ಹೆಸರಿತ್ತು. ಒಮ್ಮೆ ಆತ ವಿಜಯನಗರದ ದೊರೆ ತಿರುಮಲ ನಾಯಕನನ್ನು ನವರಾತ್ರಿಯ ಉತ್ಸವಕ್ಕೆಂದು ಆಹ್ವಾನಿಸಿ ಉಪಾಯದಿಂದ ಹಿಡಿದುಹಾಕಿ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಸ್ವತಂತ್ರ ದೊರೆತನ ಘೋಷಣೆ ಮಾಡಿಕೊಳ್ಳುತ್ತಾನೆ. ಈ ವಿಜಯದ ಸಂಕೇತವಾಗಿ ವಿಜಯನಗರದ ಮಾದರಿಯಲ್ಲೇ ನವರಾತ್ರಿ ಉತ್ಸವ ಆರಂಭಿಸುತ್ತಾನೆ. ಅದುವೆ ಇಂದು ಜನಪ್ರಿಯವಾಗಿ ಆಚರಣೆಗೊಳ್ಳುವ 'ಮೈಸೂರು ದಸರ' ಈ ಉತ್ಸವವು ವಾಸ್ತವವಾಗಿ ಸೈನಿಕಶಕ್ತಿ ಪ್ರದರ್ಶನ ಮಾಡುವ ಮಿಲಿಟರಿ ಕಾರ್ಯಕ್ರಮವೂ ಆಗಿತ್ತು. ಹೀಗೆ ಒಡೆಯರು ವಿಜಯದಶಮಿಯನ್ನು ತಮ್ಮನ್ನು ಆಳುತ್ತಿದ್ದ ವಿಜಯನಗರದಿಂದ ಪಡೆಯುತ್ತಾರೆ. ಆದರೆ ವಿಜಯನಗರದ ಅರಸರನ್ನು ಸೋಲಿಸಿ ಸ್ವತಂತ್ರ ಅರಸರಾದ ನಂತರ ವಿಜಯದಶಮಿಯನ್ನು ಆಚರಿಸುತ್ತಾರೆ.

ವಿಜಯ ದಶಮಿ ಹೆಸರನ್ನು ನೋಡಿದರೆ ಶಾಕ್ತ ದೇವಿಯರ ವಿಜಯದ ಕಥೆಗಳಿಗೂ ಒಂದು ಸಂಬಂಧವಿದ್ದಂತೆ ಕಾಣುತ್ತದೆ. ದೇವಿಯರು ಸಿದ್ಧರನ್ನು ಸೋಲಿಸಿದ ಕಥೆಗಳು ನಮ್ಮಲ್ಲಿವೆ. ಯಲ್ಲಮ್ಮ ಗಾಂಜಾ ನಶೆ ಏರಿದ ಸಿದ್ಧರನ್ನು ತುಳಿಯುತ್ತಾಳೆ. ಸೋತ ಗಂಡಸರು ಹೆಣ್ಣುಡುಗೆ ಉಡುವುದು ಯಲ್ಲಮ್ಮನ ಪರಂಪರೆಯಲ್ಲಿ ನಾವು ಕಾಣಬಹುದು. ಯುದ್ಧದಲ್ಲಿ 'ವಿಜಯವು ಸಿಗಲಿ' ಎಂದು ಬನ್ನಿ ಮರವನ್ನು ಆರಾಧಿಸುವುದು, ಅಥವಾ ಯುದ್ಧದಲ್ಲಿ ಪಡೆದ ವಿಜಯದ ಸಂಕೇತವಾಗಿ ಕಾಳಿಯನ್ನು ಆರಾಧಿಸುವುದು ಇವೆಲ್ಲಾ ಹಲವು ಬಗೆಯ 'ವಿಜಯ'ದ ಗೆಲುವಿನ ಕಥೆಗಳನ್ನು ಹಿನ್ನೆಲೆಯನ್ನಾಗಿಸಿಕೊಂಡಿವೆ. ಹೀಗಿರುವಾಗ ವಿಜಯ ಎಂದರೆ ಕೇವಲ ಗಂಡಿನ ವಿಜಯ ಮಾತ್ರವಲ್ಲ, ಗಂಡಿನ ವಿರುದ್ಧದ ಹೆಣ್ಣಿನ ಗೆಲುವುಗಳನ್ನೂ ವಿಜಯದಶಮಿ ಸಾಂಕೇತಿಸುತ್ತಿದೆ. ದುರ್ಗೆ ಮತ್ತು ಮಹಿಷಾಸುರ ಮರ್ಧಿನಿಯರು ದೇವಲೋಕವನ್ನು ಕಾಯಲು ರಕ್ಕಸರನ್ನು ಕೊಲ್ಲುವ ಕಥನಗಳನ್ನು ಇದಕ್ಕೆ ಜೋಡಿಸಬಹುದು.

ಪುಟ 4 ಕ್ಕೆ

ಕೋವಿಡ್ ಅಕ್ರಮಗಳು: ಸರ್ಕಾರದ ಹೊಣೆಗಾರಿಕೆ ಹೆಚ್ಚಿನದು

ಸಂಪಾದಕೀಯ

ಕೊರೋನಾ ಸಾಂಕ್ರಾಮಿಕ ರೋಗ ರಾಜ್ಯದ ಜನತೆಯನ್ನು ಭಾಧಿಸುತ್ತಿರುವಾಗ ಜನತೆಯ ಜೀವ, ಜೀವನವನ್ನು ಸಂರಕ್ಷಿಸಬೇಕಾದ ಸರ್ಕಾರ ಕೈಗೊಂಡ ಕ್ರಮಗಳಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆದಿರುವುದನ್ನು ನ್ಯಾಯಮೂರ್ತಿ ಮೈಖೆಲ್ ಡಿ.ಕುನ್ಹಾ ತನಿಖಾ ಆಯೋಗವು ಪತ್ತೆ ಮಾಡಿದೆ. 11ಸಂಪುಟಗಳ ತನ್ನ ಮಧ್ಯಂತರ ವರದಿಯಲ್ಲಿ ಸುಮಾರು 7223.64 ಕೋಟಿ ರೂ.ಗಳ ಅಕ್ರಮಗಳ ಹಗರಣವಿದೆ. ತನಿಖೆ ಪೂರ್ಣಗೊಂಡು ಅಂತಿಮ ವರದಿ ದೊರೆತಲ್ಲಿ ಅದರ ಮೊತ್ತ ಮತ್ತು ನಡೆದಿರುವ ಭ್ರಂಹಾಂಡ ಭ್ರಷ್ಟಾಚಾರ ಇನ್ನಷ್ಟೂ ದೊಡ್ಡ ಪ್ರಮಾಣದಲ್ಲಿ ಬಯಲಾಗಲೂಬಹುದು. ಮದ್ಯಂತರ ವರದಿಯನ್ನು ಆಧರಿಸಿ ಎಲ್ಲವುಗಳನ್ನೂ ಆಳವಾಗಿ ತನಿಖೆ ಮಾಡಲು 'ವಿಶೇಷ ತನಿಖಾ ತಂಡ' – ಎಸ್.ಐ.ಟಿ ಯನ್ನು ರಚಿಸಲು ಸಚಿವ ಸಂಪುಟ ನಿರ್ಧರಿಸಿದೆ.

ಸ್ವಾಧೀನ ಪಡಿಸಿಕೊಂಡ ತಮ್ಮ ಭೂಮಿಗೆ ಪರಿಹಾರವಾಗಿ ಮೈಸೂರಿನ ಮುಡಾ ದಿಂದ ಪಡೆದ 14 ಸೈಟ್ ಗಳ ಬಗ್ಗೆ ಅದೊಂದು ಭಾರಿ ಭ್ರಷ್ಟ ಹಗರಣ ಎಂದು ದೊಡ್ಡ ಗಂಟಲಲ್ಲಿ ರಾಜ್ಯ ಮತ್ತು ದೇಶಾದ್ಯಂತ ಅಬ್ಬರ ಮಾಡುತ್ತಿರುವ ಬಿಜೆಪಿಯ ಅಧಿಕಾರವಧಿಯಲ್ಲಯೇ ಕೋಟಿ? ಅಕ್ರಮಗಳು ನಡೆದಿರುಬುದು ಎನ್ನುವುದನ್ನು ಗಮನಿಸಬೇಕು.

ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದುದು ಭಾರತೀಯ ಜನತಾ ಪಕ್ಷ, ಅದರ ಮುಖ್ಯಮಂತ್ರಿ ಬಿ.ಎಸ್. ಯಡ್ಯೂರಪ್ಪ, ಆರೋಗ್ಯ ಸಚಿವರಾಗಿದ್ದವರು ಬಿ. ಶ್ರೀರಾಮುಲು, ನಂತರ ಅವರು ಪರಿಣಾಮಕಾರಿಯಲ್ಲ ಎಂದು ಡಾ.ಕೆ. ಸುಧಾಕರ ಅವರಿಗೆ ಬದಲಾಯಿಸಲಾಯಿತು. ಕೋವಿಡ್ ನಿರ್ವಹಣೆಯಲ್ಲಿ ಸರಕಾರ ವಿಫಲವಾಗುತ್ತಿರುವುದನ್ನು, ಔಷಧಿ, ಇಪಕರಣಗಳು, ಮೂಲ ಸೌಕರ್ಯಗಳ ವ್ಯವಸ್ಥೆ ಮುಂತಾದವುಗಳಲ್ಲಿ ವಿಪರೀತ ಭ್ರಷ್ಟಾಚಾರ, ನಿರ್ಲಕ್ಷ್ಯತನ ಹಾಗೂ ಖಾಸಗಿ ಆಸ್ಪತ್ರೆಹಳೊಂದಿಗೆ ಶಾಮೀಲಾಗಿ ಜನರನ್ನು ದೋಚುವುದಕ್ಕೆ ಅವಕಾಶ ಮಾಡಿದ ಭಾರೀ ಆರೋಪಗಳು ಕೇಳಿ ಬಂದಿದ್ದವು. ಜಿಲ್ಲೆ ಜಿಲ್ಲೆಗಳಲ್ಲಿಯೂ ಇಂತಹ ವಿಪರೀತ ದೂರುಗಳಿದ್ದವು. ಸರಕಾರದ, ಅದರಲ್ಲೂ ಸವಿವ ಅಶೋಕ್ ಅವರ ಅಡಿಯಲ್ಲಿದ್ದ ಬೆಂಗಳೂರಿನ ಆಡಳಿತ, ಬಿ.ಬಿ.ಎಂ.ಪಿ.ಯಲ್ಲಿ ಹಾಸಿಗೆ, ಚಿಕಿತ್ಸಾ ಸಾಮಗ್ರಿಗಳು, ಔಷಧಿ, ಬೆಡ್ ಗಳ ಖರೀದಿಯಲ್ಲಿ ಭಾರಿ ಅವ್ಯವಹಾರ ನಡೆಯುತ್ತಿರುವುದರ ಬಗ್ಗೆ ವರದಿಗಳು ಇದ್ದವು. ನಂತರದಲ್ಲೂ ಅಂತಹ ವಿವರಗಳು ಬಯಲಾಗಿದ್ದವು. ರೂ.45 ಬೆಲೆಯ ಮುಖಗವುಸಿನ ಖರೀದಿಯನ್ನು 485 ರೂ. ಗಳಿಗೆ ಮಾಡಿದ್ದು ಒಂದು ಸಣ್ಣ ಉದಾಹರಣೆ. ಬೆಡ್ ಗಳ ಕೃತಕ ಅಭಾವ, ಆತಂಕದ ವಾತಾವರಣ ಸೃಷ್ಟಿಸಿ ಖಾಸಗಿ ಆಸ್ಪತ್ರೆಗಳಿಗೆ ಅಪಾರ ಲಾಭ ಮಾಡಿಕೊಟ್ಟ ಆರೋಪಗಳೂ ಇದ್ದವು. ಮದ್ಯಂತರ ವರದಿಯ ವಿವರಗಳು ಸಾರ್ವಜನಿಕರ ದೂರುಗಳು ವಾಸ್ತವದಿಂದ ಕೂಡಿವೆ ಎನ್ನುವುದನ್ನು ಎತ್ತಿ ತೋರಿಸುತ್ತವೆ. ಜನರ ಜೀವದ ಜೊತೆ ಚೆಲ್ಲಾಟವಾಡಿ, ಇಂತಹ ಅತ್ಯಂತ ಸಂದಿಗ್ಧತೆಯ ಸನ್ನಿವೇಶವನ್ನು ದುರುಪಯೋಗ ಮಾಡಿ ಸಾವಿರಾರು ಕೋಟಿ ರೂಪಾಯಿಗಳ ಹಣ ದೋಚಿದಬಿಜೆಪಿ ನಾಯಕರು, ಅದರ ಸರ್ಕಾರದ ಮುಖ್ಯಮಂತ್ರಿ, ಮಂತ್ರಿಗಳು, ಅಧಿಕಾರಿಗಳು ಕುಕೃತ್ಯ ಅಮಾನವೀಯ, ಉಗ್ರ ಖಂಡನೀಯ. ಮೇಲಾಗಿ ಕೋವಿಡ್ ಆ ಸನ್ನಿವೇಶವನ್ನೇ ಬಳಸಿ ಹಿಂದು ಮುಸ್ಲಿಂ ಎಂಬ ಮತೀಯ ವಿಭಜನೆ ತರಲು ಮುಂದಾದದ್ದು ಇಂತಹವ ತನ್ನ ಕರಾಳ ಮುಖವನ್ನು ಮುಚ್ಚಿಕೊಳ್ಳಲು ಎಂಬುದು ಅತ್ಯಂತ ಹೇಸಿಗೆ ತರುವ ಸಂಗತಿ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಸೋತು ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಾಗ ಈ ಹಗರಣ, ಅಕ್ರಮಗಳನ್ನು ತನಿಖೆ ನಡೆಸಬೇಕಾದ ಹೊಣೆಗಾರಿಕೆ ಇತ್ತು. ಅಧಿಕಾರಕ್ಕೆ ಬಂದ ಹೊಸ್ತಿಲಲ್ಲೇ ಕೋವಿಡ್ ನ ಅವ್ಯವಹಾರ, ಅಕ್ರಮಗಳ ಬಗ್ಗೆ ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಯವರ ನೇತೃತ್ವದ ತನಿಖಾ ಸಮಿತಿಯನ್ನು ಸಿದ್ಧರಾಮಯ್ಯ ನವರ ಸರ್ಕಾರ ನೇಮಿಸಿದ್ದು ಸ್ವಾಗತಾರ್ಹ ನಡೆಯಾಗಿತ್ತು.

ಈಗ ಸರ್ಕಾರದ ಮುಂದೆ ಬಹು ದೊಡ್ಡ ಜವಾಬ್ದಾರಿ ಇದೆ. ಇದೀಗ ಬಂದಿರುವ ಮದ್ಯಂತರ ಆಧರಿಸಿ ರಚಿಸಲಾಗಿರುವ ತನಿಖೆ ತೀವ್ರವಾಗಿ, ನಿಷ್ಪಕ್ಷಪಾತವಾಗಿ ಮತ್ತು ಕೂಲಂಕುಶವಾಗಿ ನಡೆಸಬೇಕಿದೆ. ಅಲ್ಲದೇ ಅದನ್ನು ಅನುಸರಿಸಿ ಯಾರೇ, ಎಷ್ಟೇ ದೊಡ್ಡ ವ್ಯಕ್ತಿ ಇರಲಿ ನಿಷ್ಟುರ ಕ್ರಮ ತೆಗೆದುಕೊಳ್ಳಬೇಕು. ಇಂತಹ ತನಿಖೆಯನ್ನು ವಿರೋಧಿಸಲು ಮತ್ತು ತನಿಖೆ ದುರ್ಬಲಗೊಳಿಸಲು ಸಿದ್ಧರಾಮಯ್ಯ ನವರ ಮೇಲೆ, ಈ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಹೇರುವ ತಂತ್ರವಾಗಿ ಮುಡಾ 'ಹಗರಣ' ವನ್ನು ಬಿಜೆಪಿ ಬಳಸುತ್ತಿದೆ ಎಂಬ ಮಾತುಗಳಿವೆ. ಬಿಜೆಪಿಯ ರಾಜಕಾರಣ ಗೊತ್ತಿರುವ ಯಾರಾದರೂ ಇದನ್ನು ಸುಲಭವಾಗಿ ನಿರಾಕರಿಸುವುದಿಲ್ಲ. ಈಗಿನ ರಾಜಕಾರಣ, ರಾಜಕಾರಣಿಗಳಲ್ಲಿ ಹಗರಣ, ಅಕ್ರಮಗಳ ವಿಷಯದಲ್ಲಿಯೂ 'ಕೊಡು ಕೊಳ್ಳುವ' ಸಂಬಂಧಗಳನ್ನು ತಳ್ಳಿ ಹಾಕುವಂತೆಯೂ ಇಲ್ಲ.


ಪಕ್ಷಗಳು, ಪ್ರತಿಪಾದಿಸುವ ಸಿದ್ಧಾಂತಗಳು ಬೇರೆ ಬೇರೆ ಇದ್ದರೂ ಅಧಿಕಾರದ ದಾಹ, ಇಂತಹ ಅವ್ಯವಹಾರಗಳ ಪ್ರಸಂಗದಲ್ಲಿ ಸಮಾನ ದುಃಖಿಗಳು ಸಮಾನ ಮನಸ್ಕರಾಗುವುದು ಅನೈತಿಕ ಎಂದು ಅವರು ಭಾವಿಸುವುದಿಲ್ಲ. ಹೀಗಿರುವಾಗ ಸಿದ್ದರಾಮಯ್ಯ ನವರ ಸರ್ಕಾರ ಕೊವಿಡ್ ಹಗರಣವನ್ನು ಕೇವಲ ಬೆದರು ಬೊಂಬೆಯಾಗಿ ಬಳಸದೇ ನಿಷ್ಠುರ, ಪ್ರಾಮಾಣಿಕತೆಯಿಂದ ಸಾರ್ವಜನಿಕ ಹಿತಕ್ಕೆ ಬದ್ಧವಾಗಿ ಕರ್ತವ್ಯ ಮಾಡಬೇಕು. ಈ ವಿಷಯದಲ್ಲಿ ಸರ್ಕಾರದ, ನಾಯಕರ ಪ್ರತಿ ನಡೆಗಳನ್ನು ತೆರೆದ ಕಣ್ಣಿನಿಂದ ಜನ ನೋಡುತ್ತಾರೆ ಎಂಬ ಎಚ್ಚರ ಅಧಿಕಾರಸ್ಥರಿಗೆ ಇರಲಿ. ಭ್ರಷ್ಟರ ಮೇಲೆ ಕಠಿಣ ಕ್ರಮ ಜರುಗಿಸಲಿ.

ಬೂದುಗುಂಬಳಕಾಯಿಗೆ ಡಾ.ಹೆಚ್.ನರಸಿಂಹಯ್ಯ ನವರು ಹಿಂದೆ ಬರೆದ ಈ ಪತ್ರ ಆಯುಧ ಪೂಜೆಯ ವಿಶೇಷ

ನಿಮ್ಮ ಮೊಬೈಲ್ ಫೋನನ್ನು ಆಯುಧಪೂಜೆಗೆ ಇಡುವ ಮೊದಲು ಒಂದ್ಸಲ ಓದಿ

ಪ್ರಿಯ ದಿವಂಗತ ಬೂದುಗುಂಬಳ ಕಾಯಿಗೆ,

ನಾನು ತುಂಬಾ ನೊಂದುಕೊಂಡು ಈ ಬಹಿರಂಗ ಪತ್ರವನ್ನು ಬರೆಯುತ್ತಿದ್ದೇನೆ. ನಿನ್ನೆಯ ದಿನ ಆಯುಧಪೂಜೆ. ನಾನು ಡಿ.ವಿ.ಜಿ. ರಸ್ತೆಯಲ್ಲಿ ಉದ್ದಕ್ಕೆ ನಡೆದುಕೊಂಡು ಒಬ್ಬ ಸ್ನೇಹಿತನ ಮನೆಗೆ ಹೋಗುತ್ತಿದ್ದೆ. ದಾರಿಯುದ್ದಕ್ಕೂ ನಿನ್ನನ್ನು ಅಮಾನುಷವಾಗಿ ಕೊಂದಿರುವ ಹತ್ತಾರು ದಾರುಣ ದೃಶ್ಯವನ್ನು ನೋಡಿ ನನಗೆ ತಡೆಯಲಾರದಷ್ಟು ದುಃಖವಾಯಿತು. ಬಡವರಿಂದ ಮೊದಲ್ಗೊಂಡು ಪಂಚತಾರಾ ಹೋಟೆಲುಗಳ ಅಡುಗೆ ಮನೆಗಳಲ್ಲಿ ಉಳಿದ ದಿನಗಳಲ್ಲಿ ತುಂಬಾ ಪ್ರೀತಿ ಆದರಗಳಿಂದ ನಿನ್ನನ್ನು ಹೆಚ್ಚಿ ಹುಳಿಯನ್ನೋ, ಮಜ್ಜಿಗೆ ಹುಳಿಯನ್ನೋ, ಮಾಡಿ ತಿಂದು ಸಂತೋಷಪಡುತ್ತಾರೆ. ನಿನಗೂ ಅದೇ ಬೇಕಾದದ್ದು, ಮಜ್ಜಿಗೆ ಹುಳಿಯಲ್ಲಿ ನಿನ್ನ ಜೀವನದ ಸಾರ್ಥಕತೆಯನ್ನು ಕಾಣುತ್ತೀಯಾ. ಸಂತೋಷಪಡುತ್ತೀಯ. ಸಾವಿನಲ್ಲೂ ನಿನ್ನಂತಹ ನಿಸ್ವಾರ್ಥ, ನಿಷ್ಕಪಟ ಹುತಾತ್ಮರು ಮನುಷ್ಯರಲ್ಲಿ ಸಿಗುವುದೇ ಅಪರೂಪ.



ಅಡುಗೆಮನೆಯಲ್ಲಿ ನಿನ್ನನ್ನು ಹಚ್ಚುವುದೇ ಒಂದು ಕಲೆ. ಆದರೆ ಆಯುಧ ಪೂಜೆ ದಿನ ಬೀದಿಯಲ್ಲಿ ಹಾಡು ಹಗಲಿನಲ್ಲಿ ನಿನ್ನನ್ನು ಕೊಲೆ, ಕಗ್ಗೊಲೆ ಮಾಡುತ್ತಾರೆ. ನಿನ್ನನ್ನು ನೆಲದ ಮೇಲೆ ತೆಂಗಿನಕಾಯಿಯನ್ನು ಬಂಡೆಯ ಮೇಲೆ ಈಡುಗಾಯಿ ಒಡೆದಂತೆ ಬಡಿದಾಗ ನಿನ್ನ ಹೋಳುಗಳು ದಿಕ್ಕಾಪಾಲಾಗಿ ಅಸ್ತವ್ಯಸ್ತವಾಗಿ ಬಿದ್ದಿರುವ ದೃಶ್ಯ ಎಂತಹವರ ಮನಸ್ಸನ್ನೂ ಕರಗಿಸುತ್ತದೆ. ಜೊತೆಗೆ ರಕ್ತದ ನೆನಪು ತಂದುಕೊಡಲು ಕೆಂಪು ಬಣ್ಣ ಬೇರೆ. ನಿಜವಾಗಿಯೂ ನಿನ್ನದು ಆಕಾಲ ಹೃದಯ ವಿದ್ರಾವಕ, ಅಪಮೃತ್ಯು. ಇದೆಲ್ಲಾ ಅನುಭವಿಸುವುದು ನಿನ್ನ ಕರ್ಮ ಅಂತ ಕಾಣುತ್ತದೆ.


ಹಾಗೇ ಇನ್ನು ನಾಲ್ಕು ಹೆಜ್ಜೆ ಮುಂದೆ ಬಂದೆ. ಗಾಂಧೀ ಬಜಾರ್ ಕಾಲು ಹಾದಿಯಲ್ಲಿ ಬಾಳೆಕಂದು, ಕಂದಮ್ಮಗಳನ್ನು ಕತ್ತರಿಸಿ ಸಾಲಾಗಿ ಮಲಗಿಸಿದ್ದರು. ಇದು ಶಿಶುಹತ್ಯೆ. ಮತ್ತೊಂದು ಹೃದಯ ವಿದ್ರಾವಕ ದೃಶ್ಯ. ಅಸಹಾಯಕರಾದ ಲಕ್ಷಾಂತರ ಕಂದಮ್ಮಗಳನ್ನು ಶೈಶಾವಸ್ಥೆಯಲ್ಲಿಯೇ ಕೊನೆಯುಸಿರು ಎಳೆಯುವಂತೆ ಈ ಕ್ರೂರಿ ಮನುಷ್ಯರು ಮಾಡಿದರು.


ನಿನ್ನ ಬಗ್ಗೆ ಮೊದಲಿನಿಂದಲೂ ತುಂಬಾ ಅನುಕಂಪ. ನಾನು ಉಪಕುಲಪತಿಯಾಗಿದ್ದಾಗ ನಮ್ಮ ವಿಶ್ವವಿದ್ಯಾಲಯದ ವಾಹನಗಳ ಚಾಲಕರು, ಕಂಡಕ್ಟರ್‌ಗಳು ಒಂದು ದಿನ ನನ್ನ ಆಫೀಸಿಗೆ ಬಂದರು. ಏನಪ್ಪಾ ವಿಷಯ ಅಂದೆ. ನಾಳೆ ಆಯುಧಪೂಜೆ ಸಾರ್ ಅಂದರು. ಎಂತೆಂತಹ ವಿದ್ಯಾವಂತರಿಗೆ, ವಿಜ್ಞಾನಿಗಳಿಗೆ ವೈಜ್ಞಾನಿಕ ಮನೋಭಾವದ ಅಭಾವವಿರುವುದರಿಂದ ಇವರಿಗೆ ವೈಚಾರಿಕ ಮನೋಭಾವವನ್ನು ಭೋಧಿಸುವುದು ಸರಿಯಲ್ಲವೆಂದು ನಾಲ್ಕು ಸೆಕೆಂಡ್ ಯೋಚನೆ ಮಾಡಿ. "ಆಯುಧಪೂಜೆ ಮಾಡಿಯಪ್ಪ. ಆದರೆ ನನ್ನದೊಂದು ಸಲಹೆ, ಎಲ್ಲಾ ವಾಹನಗಳನ್ನು ಒಟ್ಟಿಗೆ ನಿಲ್ಲಿಸಿ ಅವುಗಳಿಗೆಲ್ಲಾ ಸೇರಿ ಒಂದೇ ಒಂದು ಬೂದುಗುಂಬಳಕಾಯಿ ಒಡೆಯಿರಿ" ಎಂದೆ. ಅದಕ್ಕೆ ಅವರು ಏನು ಸಾರ್ ಹೀಗಂತೀರಿ. ಒಂದೊಂದು ವಾಹನಕ್ಕೂ ಒಂದೊಂದು ಬೂದುಗುಂಬಳಕಾಯಿ ಒಡದೇ ಆಕ್ಸಿಡೆಂಟ್‌ಗಳು ಕಡಿಮೆ ಆಗಲಿಲ್ಲ. ಅಂದ ಮೇಲೆ ಎಲ್ಲಾ ವಾಹನಗಳಿಗೂ ಸೇರಿ ಒಂದೇ ಒಂದು ಬೂದುಗುಂಬಳ ಕಾಯಿ ಒಡೆದರೆ ನಮ್ಮ ಗತಿ ಏನ್ ಸಾರ್? ಅಂತ ಹೇಳಿದರು. ಚರ್ಚಿಸಿ ಉಪಯೋಗವಿಲ್ಲವೆಂದು ಸರಿ, ಹಿಂದಿನಂತೆಯೇ ಆಯುಧಪೂಜೆ ಮಾಡಿ ಅಂದೆ. ಒಂದೊಂದು ವಾಹನಕ್ಕೂ ನಿನ್ನ ವಂಶದ ಒಬ್ಬೊಬ್ಬರನ್ನು ಬಲಿ ಕೊಟ್ಟರು. ಆ ಪಾಪದಲ್ಲಿ ನಾನೂ ಭಾಗಿಯಾದೆ.

ನಿನ್ನನ್ನು ಹೀಗೆ ಆಯುಧಪೂಜೆ ದಿನ ಬೀದಿಯಲ್ಲಿ ಕೊಲೆ ಮಾಡುವುದರಿಂದ ಅಪಘಾತಗಳು ಕಡಿಮೆ ಆಗುವುದಿಲ್ಲ ಎಂದು ಹಲವು ದಶಕಗಳಿಂದ ಬಡುಕೋತ ಇದ್ದೀನಿ. ಯಾರೂ ಇಲ್ಲಿಯ ತನಕ ಜಗ್ಗಿಯೇ ಇಲ್ಲ. ಈಗಿನ ಶಿಕ್ಷಣ ಪದ್ದತಿಯಿಂದ, ವಿಜ್ಞಾನದ ಬೆಳವಣಿಗೆಯಿಂದ ಇಂತಹ ಅರ್ಥವಿಲ್ಲದ ನಂಬಿಕೆಗಳನ್ನು ಸಾಕಷ್ಟು ಕಡಿಮೆ ಮಾಡಲು ಆಗಿಲ್ಲ. ಹೇಳಿಕೊಳ್ಳುವಂತಹ ಸಮಾಜ ಸುಧಾರಣೆ ಆಗಿಲ್ಲ. ವಿಜ್ಞಾನದ ಪಾಡಿಗೆ ವಿಜ್ಞಾನ. ಮೂಡನಂಬಿಕೆಗಳ ಪಾಡಿಗೆ ಮೂಢನಂಬಿಕೆಗಳು.

ನಮ್ಮ ದೇಶದಲ್ಲಿ ಅಸಂಖ್ಯಾತ ದೇವಸ್ಥಾನಗಳು, ಅವ್ಯಾಹತವಾಗಿ ಪೂಜೆ, ಪುಣ್ಯಕ್ಷೇತ್ರಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಕಾಣಿಕೆ ಅರ್ಥಾತ್ ದೇವರಿಗೆ ಲಂಚ. ಲಕ್ಷಾಂತರ ಮಂದಿ ಗಂಗಾನದಿಯಲ್ಲಿ, ಉಳಿದ ಪುಣ್ಯನದಿಗಳಲ್ಲಿ ಆಗಾಗ ಸ್ನಾನ. ವರ್ಷವೆಲ್ಲಾ ವಾರಕ್ಕೊಂದು ಸಲ ಲಕ್ಷಾಂತರ ಮಂದಿಯಿಂದ ದೂರದರ್ಶನದಲ್ಲಿ ರಾಮಾಯಣ ವೀಕ್ಷಣೆ. ಈಗ ಮಹಾಭಾರತ ಮೊದಲಾಗಿದೆ. ಇವು ಯಾವುವೂ ಜನರ ಮನೋಭಾವವನ್ನು ಸರಿಯಾದ ದಿಕ್ಕಿನಲ್ಲಿ ಕಿಂಚಿತ್ತಾದರೂ ಬದಲಾಯಿಸಿಲ್ಲ. ಮಾಮೂಲಿ ಸ್ವಾರ್ಥ, ಅಪ್ರಾಮಾಣಿಕತೆ, ಸಮಾಜಘಾತಕ ಕೃತ್ಯಗಳು, ಮೋಸ, ದಗಾ ಜೊತೆ ಜೊತೆಯಲ್ಲಿಯೇ ಸಾಗುತ್ತಿವೆ. ನಿತ್ಯಜೀವನದ ಮೇಲೆ ಧರ್ಮವು ಪ್ರಭಾವ ಬೀರಿಲ್ಲ. ವಿಜ್ಞಾನವೂ ಬೀರಿಲ್ಲ. ಧರ್ಮ ಲೇವಾದೇವಿಯಾಗಿದೆ. ವಿಜ್ಞಾನ ಕೇವಲ ಜೀವನೋಪಾಯವಾಗಿದೆ.

ಪುಟ 5 ಕ್ಕೆ





ಬನ್ನಿ ಹಬ್ಬದ ಬಹುರೂಪಗಳು.......

ಪುಟ 2 ರಿಂದ

ಜನಪದ ಚಾಮುಂಡಿಯನ್ನು ಮಹಿಶಾಸುರನ ಸಂಹಾರ ಮಾಡುವ ಕಥೆ ಕೂಡ ಈ ಹಿನ್ನೆಲೆಯಲ್ಲಿ ಹುಟ್ಟಿರಬೇಕು.

ಸಮುದಾಯಗಳಲ್ಲಿ ಬಹುರೂಪ

ಕರ್ನಾಟಕದಲ್ಲಿ ನೆಲೆಸಿದ ವಿವಿಧ ಬುಡಕಟ್ಟು ಆದಿವಾಸಿ ಅಲೆಮಾರಿ ಇತರೆ ಜನ ಸಮುದಾಯಗಳು ದಸರಾ ವನ್ನು ತಮ್ಮದೇ ಕುಲಮೂಲಗಳ ನೆಲೆಗಳಿಂದ ಆಚರಿಸುತ್ತವೆ. ಉತ್ತರ ಕನ್ನಡದ ಗೌಳಿಗರು ವಿಜಯದಶಮಿಗೆ 'ಶಿಲ್ಲೆಂಗಾನ' ಎನ್ನುವ ಆಚರಣೆ ಮಾಡುತ್ತಾರೆ. ಪಶುಪಾಲಕರಾದ ಇವರು ಇಡೀ ಹಬ್ಬದಲ್ಲಿ ಹಾಲು ಮೊಸರು ಬೆಣ್ಣೆಗಳ ಆಧರಿಸಿದ ಆಚರಣೆಗಳಿವೆ. ಮಡಿಯಲ್ಲಿ ಹಿಂಡಿದ ಹಾಲಿಗೆ ಹೆಪ್ಪು ಹಾಕಿ ದರ್ಬೆ ಹುಲ್ಲು ಸಿಕ್ಕಿಸಿದ ಮೊಸರಿನ ಗಡಿಗೆಯನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿರುತ್ತಾರೆ. ಈ ಮೊಸರಿನ ಗಡಿಗೆ ಹೊತ್ತುಕೊಂಡು ಮಹಿಳೆಯರೆಲ್ಲಾ ಹಬ್ಬದ ಸ್ಥಳಕ್ಕೆ ಸೇರಿ ಬನ್ನಿ ಮುಡಿಯುತ್ತಾರೆ. ಬಿಳಿಸೀರೆಯುಟ್ಟು ಮಹಿಳೆಯರು ನರ್ತಿಸುತ್ತಾರೆ. ಮಹರಾಷ್ಟ್ರ ಮೂಲದವರಾದ ಕಾರಣ ಈ ಹಬ್ಬದಲ್ಲಿ ಶಿವಾಜಿಯ ಖಡ್ಗ ಹಿಡಿದು ಪುರುಷರು ನರ್ತಿಸುತ್ತಾರೆ.

ಈ ಸಮಯವು ಮಳೆಗಾಲವಾದ್ದರಿಂದ ಅಲೆಮಾರಿ ಕುರುಬರು ಗುಡ್ಡಗಳಲ್ಲಿ ಬಿಡಾರ ಹೂಡಿ ಗುಡ್ಡಗಾಡು ಪ್ರದೇಶದಲ್ಲಿ ಕುರಿಗಳನ್ನು ಮೇಯಿಸುತ್ತಿರುತ್ತಾರೆ. ಗುಡಾರ ಹೂಡಿದ ಸ್ಥಳಗಳಲ್ಲಿ ಹಾಗೂ ಸ್ವ-ಗ್ರಾಮಗಳಲ್ಲಿ ಒಂಬತ್ತು ದಿನಗಳವರೆಗೆ ಮನೆದೇವರ ಹೆಸರಿನ ಮೇಲೆ ದೀಪ ಹಚ್ಚುತ್ತಾರೆ. ನವರಾತ್ರಿ ಅಥವಾ ಮಹಾನವಮಿ ದಿನ ತಮ್ಮ ಕುಲ ಕಸುಬಿಗೆ ಬಳಸುವ ಸಲಕರಣೆಗಳಾದ ಕೋಲು, ಕೊಡಲೆ, ಜ್ಯೋತಿ, ಕತ್ತರಿ, ವಡಚೀಲ ಇತ್ಯಾದಿ ವಸ್ತುಗಳನ್ನು ತೊಳೆದು ಕರಿಯ ಕಂಬಳಿಯಿಂದ ಗದ್ದುಗೆ ಮಾಡಿ ಅದರ ಮೇಲೆ ಸಾಮಾನುಗಳನ್ನಿಡುವರು. ಹಬ್ಬದ ಪ್ರಯುಕ್ತ ಹೋಳಿಗೆ ಮಾಡುವರು. ಕುರಿಗಳು ಮೇವು ಮೆಯ್ದು ಅಡವಿಯಿಂದ ಸಾಯಂಕಾಲ ಗುಡಾರಕ್ಕೆ ಬಂದ ನಂತರ ವೃತ್ತಿ ಸಲಕರಣೆಗಳಿಗೆ ಭಂಡಾರ ಹಚ್ಚಿ ದೀಪ ಬೆಳಗಿ, ಕಾಯಿಒಡೆದು, ಕರ್ಪೂರದಿಂದ ಮಂಗಳಾರತಿಯನ್ನು ಬೆಳಗುವರು. ಸ್ವಗ್ರಾಮದಲ್ಲಿರುವ ಇವರ ಕುಟುಂಬದವರು ಎಲ್ಲಾ ದೇವರುಗಳಿಗೆ ಎಣ್ಣೆ ದೀಪ ಹಚ್ಚುತ್ತಾರೆ. ಪ್ರತಿಯೊಂದು ದೇವರಿಗೆ ಹೋಳಿಗೆ ನೈವೇದ್ಯ ಮಾಡಿ ಕಾಯಿ ಒಡೆಯುವ ಸಂಪ್ರದಾಯ ಇದೆ.

ಕರ್ನಾಟಕದ ಹಲವು ಬುಡಕಟ್ಟುಗಳು ನವರಾತ್ರಿಯನ್ನು ಪಿತೃಪಕ್ಷವಾಗಿ ಆಚರಿಸುತ್ತಾರೆ. ಹಿರಿಯರ ಹಬ್ಬವನ್ನಾಗಿಸುತ್ತಾರೆ. ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಈ ಆಯಾಮ ಹೆಚ್ಚಾಗಿದೆ. ಹಿರಿಯರ ಸಾಮಾದಿ ಬಳಿ ಬನ್ನಿಗಿಡವನ್ನು ನೆಡುವ ಸಂಪ್ರದಾಯ ಕೆಲವೆಡೆ ಇದೆ.

ವಿಶೇಷವಾಗಿ ಕಮ್ಮಾರ, ಅಕ್ಕಸಾಲಿ, ಬಡಗಿ, ಕಂಚುಗಾರ, ಶಿಲ್ಪಿಗಳನ್ನು ಒಳಗೊಂಡ ಪಾಂಚಾಳರು ದಸರಾ ಹಬ್ಬವನ್ನು ಬಹಳ ವಿಶಿಷ್ಟವಾಗಿ ಆಚರಿಸುತ್ತಾರೆ. ಬನ್ನಿ ಮರವನ್ನು ಪಾಂಚಾಳರು 'ಕಾಳಿ' ಎಂಬ ದೃಷ್ಟಿಯಿಂದ ಪೂಜಿಸುತ್ತಾ ಬಂದಿದ್ದಾರೆ. 'ಪಾಂಡವರು ವನವಾಸದಲ್ಲಿ ಊಟ ಮಾಡಿದ್ದು ಈ ಬನ್ನಿಎಲೆಯಲ್ಲಿಯೇ' ಎನ್ನುವುದು ಪಾಂಚಾಳರ ನಂಬಿಕೆ. ಪಾಂಚಾಳರು ವಿಜಯದಶಮಿಯ ದಿನ ಬನ್ನಿಮರಕ್ಕೆ ಹೋಗಿ ಮರದ ಬನ್ನಿಪತ್ರಿಯನ್ನು ತಂದು ಅದನ್ನು ಪೂಜಿಸಿ ಕಾಳಮ್ಮನಿಗೆ ಏರಿಸಿದ ಮೇಲೆ ಉಳಿದ ದೇವರಿಗೆ ಏರಿಸಿ ನಂತರ ಜನರಿಗೆ ಬನ್ನಿಕೊಡುವ ಸಂಪ್ರದಾಯವಿದೆ. ಪ್ರತಿ ಮನೆಯಲ್ಲಿ ದೇವಿಯ ಪುರಾಣವನ್ನು ಓದುತ್ತಾರೆ. ಬನ್ನಿಯ ಗಿಡದಾಗ ಬಾಣ ಇಟ್ಟೀವಿ ತಾಯಿ ನೀನೆ ಕಾಪಾಡು ಎನ್ನುತ್ತಾರೆ. ಬನ್ನಿಮರವನ್ನು ಕುಲದೇತೆಯನ್ನಾಗಿ ಸ್ವೀಕರಿಸಿರುವ ಪಾಂಚಾಳರು ಅದರ ಕಟ್ಟಿಗೆಯನ್ನು ಒಲೆಗೆ ಹಚ್ಚುವುದಿಲ್ಲ. ಮತ್ತು ಅದರಿಂದ ಈ ಮರ ಮುಟ್ಟಿನ ಕೆಲಸವನ್ನು ಮಾಡುವುದಿಲ್ಲ. ಕಾಲಿನಿಂದ ತುಳಿಯುವುದಿಲ್ಲ. ಕಾಳಿಗೆ ಪ್ರಿಯ ಎಂದು ಭಾವಿಸುವ ಕಣಗಿಲೆ ಹೂವನ್ನು ಮುಡಿಯುವುದಿಲ್ಲ.

ತೊಗಲುಗೊಂಬೆ ಕಲಾವಿದರಾದ ಸಿಳ್ಳೆಕ್ಯಾತ ಸಮುದಾಯವು ಈ ಸಂದರ್ಭದಲ್ಲಿ ವೃತ್ತಿಗೆ ಸಹಾಯಕವಾದ ದೇವ-ದೇವಿಯರ ತೊಗಲುಗೊಂಬೆಗಳನ್ನು ಪೂಜಿಸಿ ನಂತರ ಕುರಿಯನ್ನು ಬಲಿಕೊಡುತ್ತಾರೆ. ಮಹಾನವಮಿಯ ದಿನ ಸಿಳ್ಳೇಕ್ಯಾತರ ಸಮುದಾಯದವರು ಹಿರಿಯರ ಹಬ್ಬ ಮತ್ತು ಆಯುಧ ಪೂಜೆ ಎರಡನ್ನು ಏಕಕಾಲದಲ್ಲಿ ಆಚರಿಸುತ್ತಾರೆ. ಅಂದು ಕೆಲವರು ಸಿಹಿ ಅಡುಗೆ ಮಾಡಿದರೆ ಮತ್ತೆ ಕೆಲವರು ಕುರಿ-ಮೇಕೆಗಳನ್ನು ಬಲಿಕೊಟ್ಟು ಮಾಂಸಹಾರದ ಎಡೆ ಹಾಕುತ್ತಾರೆ. ತಮ್ಮ ಕುಲದ ಶಕ್ತಿ ದೇವತೆಗಳಾದ ಎಲ್ಲಮ್ಮ, ಹುಲಿಗೆಮ್ಮ, ಗಾಳೆಮ್ಮ ದೇವಿಯ ಹೆಸರಿನಲ್ಲಿ ಐದು ಇಲ್ಲವೆ ನವರಾತ್ರಿಯ ಒಂಭತ್ತು ದಿನಗಳವರೆಗೆ ಎಣ್ಣೆ ಅಥವಾ ತುಪ್ಪದ ದೀಪಗಳನ್ನು ಅಲಂಕಾರಗೊಂಡ ದೇವಿಯ ಮುಂದೆ ಹಚ್ಚಲಾಗುತ್ತದೆ.

ಮಧ್ಯಕರ್ನಾಟಕದ ಬುಡಕಟ್ಟು ಸಮುದಾಯವಾದ ಮ್ಯಾಸಬೇಡರಿಗೂ ದಸರ ದೊಡ್ಡ ಹಬ್ಬವಾಗಿದೆ. ವಿಶೇಷವಾಗಿ ಬೇಟೆಯನ್ನೆ ವೃತ್ತಿಯನ್ನಾಗಿಸಿಕೊಂಡಿದ್ದ ಬೇಡರ ಆಚರಣೆಗಳು ಇಲ್ಲಿವೆ. ಹಾಗಾಗಿ ಬೇಟೆಯ ಎಲ್ಲಾ ಆಯುಧಗಳನ್ನು ಪೂಜೆ ಮಾಡಿ ಕುರಿ ಬಲಿಕೊಡುತ್ತಾರೆ. ನಂತರ ಯುಗಾದಿಗೆ ಬೇಟೆಗೆ ಹೋಗುವ ಮಾದರಿಯಲ್ಲಿ ದಸರಕ್ಕೂ ಬೇಟೆಗೆ ಹೋಗುತ್ತಾರೆ. ದೇವರ ಎತ್ತುಗಳನ್ನು (ಕಿಲಾರಿ) ಮತ್ತು ಪೆಟ್ಟಿಗೆ ದೇವರುಗಳನ್ನು ಎಬ್ಬಿಸಿ ಬನ್ನಿ ಮರದ ಹತ್ತಿರಕ್ಕೆ ಒಯ್ದು ಬನ್ನಿ ಮುಡಿಯುತ್ತಾರೆ. ಹಬ್ಬದ ಸಲುವಾಗಿ ಹಲವಾರು ಪಂದ್ಯಾವಳಿಗಳನ್ನು ನಡೆಸುತ್ತಾರೆ.

ಮಹಾಲಯ ಅಮಾವಾಸ್ಯೆಯು ಘಿಸಾಡಿ ಸಮುದಾಯದವರಿಗೆ ತಮ್ಮ ಕುಲದೇವರ ಹಬ್ಬವಾಗಿದ್ದು, ಇವರು ಈ ಹಬ್ಬವನ್ನು ಬಹಳ ವಿಶೇಷ ಭಕ್ತಿ ಭಾವ, ಪೂಜೆಯೊಂದಿಗೆ ಆಚರಿಸುತ್ತಾರೆ. ವಿಜಯ ದಶಮಿಯ ಒಟ್ಟು 9 ರಿಂದ 10 ದಿನಗಳವೆರೆಗೆ ಘಿಸಾಡಿ ಜನರು ಬಹಳ ಸಂತೋಷ, ಸಂಭ್ರಮದಲ್ಲಿರುತ್ತಾರೆ. ಬಹುತೇಕ ಈ ಸಮುದಾಯದ ಜನರು ಅಂಬಾಭವಾನಿ ದೇವಿಯ ಹೆಸರಿನಲ್ಲಿ ಕನಿಷ್ಟ 5 ರಿಂದ 9 ದಿನಗಳವರೆಗೆ ದೀಪ ಹಾಕುವ ಕಾರ್ಯಕ್ರಮ ಇಟ್ಟುಕೊಂಡಿರುತ್ತಾರೆ.

ಗಾಣಿಗ ಸಮಾಜವು ಒಂದು ಗಾಣದಿಂದ ತೆಗೆಯಲ್ಪಟ್ಟ ಎಣ್ಣೆಯಿಂದ ಜ್ಯೋತಿ ಬೆಳಗಿಸುವುದು, ದೇವರ ಮುಂದೆ ಆರತಿ ಬೆಳಗಿಸುವುದು ಶುಭ ಸಂಕೇತದ ಪವಿತ್ರ ಕಾಯಕ. ಇಂದಿಗೂ ಮಹಾನವಮಿ ಹಬ್ಬದಲ್ಲಿ ದೇವರನ್ನು ಶೃಂಗಾರಮಾಡಿ ಕೂಡಿಸಿ ದೇವರ ಮುಂದೆ ಎಣ್ಣೆ ದೀಪದ ಜ್ಯೋತಿ ಬೆಳಗಿಸುವುದು ವಾಡಿಕೆ. ಈ ದೀಪವನ್ನು ಆರದಂತೆ ನೋಡಿಕೊಳ್ಳುತ್ತಾರೆ. ಸಜ್ಜನ ಗಾಣಿಗರಲ್ಲಿ ಕೆಲವರು ಮಹಾನವಮಿ ದಿನದಂದು ಲಕ್ಷ್ಮಿ ಪೂಜೆ ಮಾಡುತ್ತಾರೆ. ಆಕೆಯನ್ನು ಕರಿಶೀಣಿ 'ಗೊಬ್ಬರವನ್ನು ಉಳ್ಳವಳು' ಎಂದು ಕರೆಯುತ್ತಾರೆ. ಅಂದರೆ ಭೂಮಿ ಬೆಳೆ ಮತ್ತು ಪ್ರಾಣಿಗಳಿಗೆ ಫಲತ್ವವನ್ನು ಕೊಡುವ ದೇವತೆ ಎಂದರ್ಥ. ಅಲ್ಲದೆ ಲಕ್ಷ್ಮಿ ಸಂಪತ್ತಿನ ಅಧಿದೇವತೆ ಭಕ್ತರ ಮನೆಗೆ ಪ್ರವೇಶಿಸುತ್ತಾಳೆಂಬ ನಂಬಿಕೆ ಇವರಲ್ಲಿದೆ. ವ್ಯಾಪಾರಸ್ಥರು ತಮ್ಮ ಲೆಕ್ಕದ ಪುಸ್ತಕ ಮತ್ತು ತೂಕದ ಸಾಮಾನುಗಳನ್ನು ಪೂಜಿಸುತ್ತಾರೆ. ಜೊತೆಗೆ ಯಾವುದಾದರೂ ಒಂದು ಹೊಸ ವಸ್ತುವನ್ನು ಸಾಮಾನ್ಯವಾಗಿ ಚಿನ್ನ, ಬೆಳ್ಳಿಯಿಂದ ಮಾಡಿದ ವಸ್ತುಗಳನ್ನು ತರುವ ಸಂಪ್ರದಾಯವಿದೆ.

ಬೇಡಗಂಪಣರು ದಸರ ಹಬ್ಬದಲ್ಲಿ ಮಾದೇಶ್ವರನ ದೇವಾಲಯದಲ್ಲಿ ಚಿಕ್ಕ ಸತ್ತಿಗೆ, ದೊಡ್ಡ ಸತ್ತಿಗೆ, ಬೆಳ್ಳಿ ಸತ್ತಿಗೆ, ನಂದಿ ಕಂಬಗಳೊಂದಿಗೆ ಉತ್ಸವಮೂರ್ತಿಯನ್ನು ಮೊದಲ ದಿನ ಸಂಜೆ ಪೂಜೆಯ ನಂತರ ದೇವಾಲಯದ ಗುಡಿಯ ಸುತ್ತ ಮೂರು ಸುತ್ತು ಸುತ್ತಿಸಿ, ನಂತರ ಉತ್ಸವಮೂರ್ತಿಯನ್ನು ಉಯ್ಯಾಲೆಯಲ್ಲಿ ಕೂಡಿಸಿ ಲಾಲಿ ಹಾಡನ್ನು ಹಾಡುವುದರ ಮೂಲಕ ಪೂಜೆ ಮಾಡಲಾಗುತ್ತದೆ.

ಮರಾಟಿಗರು 'ಅಂಗಾರೆ ಪೂಜೆ'ಯ ರೀತಿಯಲ್ಲಿಯೇ ನವರಾತ್ರಿ ಪೂಜೆಯನ್ನು ಆಚರಿಸುತ್ತಾರೆ. ನವರಾತ್ರಿಯ ಏಳನೇ ಅಥವಾ ಒಂಬತ್ತನೇ ಪೂಜೆಯನ್ನು ನಡೆಸುತ್ತಾರೆ. ದೇವಕ್ರಿಯೆಯಲ್ಲಿಯೇ ಶಾರದಾಂಬೆಯನ್ನು ಪೂಜಿಸುವ ಈ ಆಚರಣೆಯು ಮರಾಟಿಗರಿಗೂ ಶೃಂಗೇರಿ ದೇವಾಲಯಕ್ಕೂ ಇರುವ ಸಂಬಂಧವನ್ನು ಸಾರುತ್ತದೆ. ಮಾಂಗ್ ಗಾರುಡಿ ಸಮುದಾಯದ ಸಟಕ್ ಪಂಗಡದವರು ದಸರಾ ಹಬ್ಬಕ್ಕೆ ಹುತ್ತಕ್ಕೆ ಪೂಜೆ ಮಾಡಿ ಹೋತವನ್ನು ಬಲಿಕೊಡುತ್ತಾರೆ. ತಮ್ಮ ವೃತ್ತಿ ಪರಿಕರಗಳಾದ ಖಡ್ಗ, ಎಮ್ಮೆಯ ಕೂದಲು ಕತ್ತರಿಸುವ ಕತ್ತರಿಯನ್ನು ವಿಶೇಷವಾಗಿ ಪೂಜಿಸುತ್ತಾರೆ. ದಸರಾ ಹಬ್ಬದಲ್ಲಿ ಕಲಬುರಗಿಯ ಬಾಪು ನಗರದಲ್ಲಿ ಕುಸ್ತಿ ಪಂದ್ಯಾವಳಿಗಳು ನಡೆಯುತ್ತವೆ.

ಕರ್ನಾಟಕದಲ್ಲಿ ನೆಲೆಸಿದ ಗಂಟಿಚೋರ ಸಮುದಾಯವು ಮೂಲತಃ ಶಕ್ತಿ ಆರಾಧನೆಯವರು. ಇವರು ನವರಾತ್ರಿಯಲ್ಲಿ ವಿಶೇಷವಾಗಿ ಲಕ್ಕವ್ವ, ಎಲ್ಲವ್ವ, ಕರಿಯಮ್ಮನ ಆರಾಧನೆಗಳನ್ನು ಮಾಡಿ ತುಡುಗು ಮಾಡಲು ಹರಕೆ ಕೇಳುವ ಸಂಪ್ರದಾಯವೂ ಇದೆ. ಇನ್ನು ಉತ್ತರ ಭಾರತದ ಠಕ್ಕರೂ ಕೂಡ ಕಾಳಿ ಆರಾಧಕರು. ಇವರೂ ಕೂಡ ದಸರಾ ಸಂದರ್ಭದಲ್ಲಿ ವಿಶೇಷ ಆಚರಣೆಗಳನ್ನು ಮಾಡುತ್ತಾರೆ. ಹರ್ಪರ್ಸ್ (ಊಜಡಿಠಿಜಢ) ಎನ್ನುವ ಬ್ರಿಟಿಷ್ ಅಧಿಕಾರಿಯೊಬ್ಬ 1858 ರಲ್ಲಿ ಬರೆದ ರೇಖಾಚಿತ್ರವೊಂದು ಲಭ್ಯವಿದೆ. ಇದರಲ್ಲಿ ರುಂಡಮಾಲೆ ಹಾಕಿದ ಕಾಳಿಯನ್ನು ಹೊತ್ತು ಮೆರವಣಿಗೆ ಮಾಡುತ್ತಿದ್ದಾರೆ. ಇದರ ಅಡಿಬರಹ 'ತಗ್ಗರ ಕಾಳೀಪೂಜಾ' ಎಂದಿದೆ. ಜನರು ಉನ್ಮತ್ತರಾಗಿ, ಅರೆಬರೆ ಬಟ್ಟೆತೊಟ್ಟು, ಡೋಲು ಬಾರಿಸುತ್ತಾ, ಕತ್ತಿ, ಗುರಾಣಿ ಮುಂತಾದ ಆಯುಧಗಳನ್ನು ಎತ್ತಿ ಹಿಡಿದು ಕುಣಿಯುತ್ತಿರುವ ಚಿತ್ರವಿದೆ. ಇದೊಂದು ತಗ್ಗರ ದಸರಾ ಆಚರಣೆಯನ್ನು ದೃಶ್ಯೀಕರಿಸುವ ಪ್ರಯತ್ನದಂತೆ ಕಾಣುತ್ತದೆ.

ಪ್ರಾದೇಶಿಕ ವೈವಿಧ್ಯಗಳು

ಉತ್ತರ ಕರ್ನಾಟಕದಲ್ಲಿ ವಿಜಯದಶಮಿಯಲ್ಲಿ ಬರುವ ಸೀಗಿ ಹುಣ್ಣಿಮೆಯಲ್ಲಿ ಪಾಂಡವರ ಪೂಜೆ ಮಾಡುತ್ತಾರೆ. ಐದು ಕಲ್ಲುಗಳನ್ನು ಹೂಡಿ ಪೂಜೆ ಮಾಡುತ್ತಾರೆ. ಒಂದು ಕಲ್ಲನ್ನು ಕಣ್ಣಪ್ಪ (ಕರ್ಣ) ಎಂದೂ ಪೂಜಿಸುತ್ತಾರೆ. ಮಧ್ಯಕರ್ನಾಟಕದ ಹಲವಡೆ ಅಂಬಿನೋತ್ಸವ ನಡೆಯುತ್ತದೆ. ಹಿರಿಯೂರು ತಾಲೂಕಿನ ಆದಿವಾಲದ ಯರಗುಂಟೇಶ್ವರ, ಕೂನಿಕೆರೆ ಗ್ರಾಮದ ಆಂಜನೇಯ ಸ್ವಾಮಿ, ವದ್ದೀಕೆರೆಯ ಭೈರವ, ಕಳವುಭಾಗಿ ಲಕ್ಷ್ಮಿ ರಂಗಸ್ವಾಮಿ ಮುಂತಾದ ಕಡೆಗಳಲ್ಲಿ ದಸರ ಹಬ್ಬದ ಕೊನೆಯ ದಿನ ಅಂಬಿನೋತ್ಸವ ಆಚರಿಸಲಾಗುತ್ತದೆ. ಕೆಲವು ಬುಡಕಟ್ಟು ಸಮುದಾಯಗಳು 'ಖಂಡೆಯ' ಪೂಜೆಯೆಂದೂ ಕರೆಯುತ್ತಾರೆ. ಮಾಂಸಾಹಾರಿಗಳು ಆ ದಿನ ಖಂಡೆ(ಮಾಂಸ)ದ ಪೂಜೆ ಮಾಡುವವದರಿಂದ 'ಖಂಡೆ ಪೂಜೆ' ಎಂಬ ಹೆಸರು ಬಂದಿರಬಹುದು. ಈ 'ಖಂಡೆ ಪೂಜೆ' ಯನ್ನು ರಾಜ ಮನೆತನದವರು ವೈಭವದಿಂದ ಆಚರಿಸುತ್ತಿದ್ದ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಹೊಸದುರ್ಗ ತಾಲೂಕಿನ ಕಂಚೀಪುರದಲ್ಲಿ ಕಂಚೀವರದ ದೇವರ ಹೆಸರಲ್ಲಿ ಮಹಾಲಯ ಅಮವಾಸೆಗೂ ಮುನ್ನ ಉತ್ತರೆ ಮಳೆ ಬೀಳುವ ಅವಧಿಯಲ್ಲಿ ಬಿಲ್ಲುಬಾಣಗಳ ಉತ್ಸವ ನಡೆಸುತ್ತಾರೆ. ಈ ಉತ್ಸವದಲ್ಲಿ ದುಡ್ಡನ್ನು ತೂರಲಾಗುತ್ತದೆ. ಕೆಲವು ಜನರು ತೂರಿದ ಹಣವನ್ನು ಆರಿಸಿಕೊಳ್ಳುತ್ತಾರೆ. ಕೊಡವರು ಆಯುಧ ಪೂಜೆಯನ್ನು 'ಕೈಲ್ ಪೋಳ್ದ್' ಎನ್ನುತ್ತಾರೆ. ನವರಾತ್ರಿಯಲ್ಲಿ ವಿಶೇಷವಾಗಿ ಕೋವಿಗಳನ್ನು ಪೂಜೆ ಮಾಡುತ್ತಾರೆ. ನಂತರ ಆಕಾಶಕ್ಕೆ ಗುಂಡುಹಾರಿಸುವ ಮೂಲಕ ಸಂಭ್ರಮಿಸುತ್ತಾರೆ.

ಉತ್ತರ ಕರ್ನಾಟಕದ ಮೈಲಾರಲಿಂಗನ ಮನೆದೇವರ ಸಮುದಾಯಗಳಲ್ಲಿ ಮನೆಯಲ್ಲಿ ಹಾಲು ಕರೆವ ಎಮ್ಮೆ ಹಸು ಇದ್ದರೆ ವಿಶೇಷ ಆಚರಣೆ ಮಾಡುತ್ತಾರೆ. ಪಂಚಮಿಯಿಂದ ನವಮಿಯವರೆಗೆ, ಇನ್ನು ಕೆಲವರು ಸಪ್ತಮಿಯಿಂದ ನವಮಿಯವರೆಗೆ ಹಾಲನ್ನು ಕಾಯಿಸಿ ಹೆಪ್ಪು ಹಾಕಿ ಆ ದೇವರ ಮುಂದೆ ಮೀಸಲಿಡುವರು. ನವಮಿಯ ದಿನ ಮೀಸಲಿಟ್ಟ ಮೊಸರನ್ನೆಲ್ಲಾ ಕಡಿದು ಬೆಣ್ಣೆಮಾಡಿ, ಅದನ್ನು ಕಾಯಿಸಿ, ತುಪ್ಪ ಬಂದ ಮೇಲೆ ಆ ಮೀಸಲು ತುಪ್ಪದಲ್ಲಿಯೇ ಮೈಲಾರ ದೇವರ ದೀವಟಿಗೆ ಉರಿಸುವರು. ಆ ದೀವಟಿಗೆ ಹಿಡಿಯುವ ವ್ಯಕ್ತಿ ವಿವಾಹಿತನಾಗಿರಬೇಕು. ಆ ದಿನ ಆಹಾರ ಸೇವಿಸುವಂತಿಲ್ಲ. ಸಂಜೆಯಾಗುತ್ತಲೆ ಮಡಿವಂತನಾಗಿ, ಮಡಿ ಅರಿವೆಯನ್ನು ದೀವಟಿಗೆಗೆ ಸುತ್ತಿ ಮೀಸಲು ತುಪ್ಪವನ್ನು ಉಣಿಸಿ ದೀಪ ಹೊತ್ತಿಸುವರು. ಮನೆಯ ಜಗುಲಿಯಿಂದ ಗ್ರಾಮದೇವರವರೆಗೂ ದೀವಟಿಗೆಯನ್ನು ಉರಿಸುತ್ತ ಹೋಗಿ ಬರುವರು. ದೀವಟಿಗೆ ಹಿಡಿದ ವ್ಯಕ್ತಿ 'ಏಳಕೋಟಿ ಏಳಕೋಟಿ.. ಏಳಕೋಟಿಗೊ' ಎಂಬ ಮೈಲಾರ ದೇವರ ನಾಮವನ್ನು ಕೂಗುವರು. ಮನೆ-ಮಂದಿ ಆ ನುಡಿಯನ್ನು ಹಿನ್ನೆಲೆಯಾಗಿ ಕೂಗುವರು. ದೀವಟಿಗೆಯ ಹಿಂದೆ ಸುಮಂಗಲೆಯರ ಕಳಸದಾರತಿ ಇರುತ್ತದೆ. ಆಕೆಯೇ ದೀವಟಿಗೆಗೆ ದಾರಿಯಲ್ಲಿ ತುಪ್ಪ ಹಾಕಿ ಉರಿಸುವದಲ್ಲದೇ ದೀವಟಿಗೆ ಹಿಡಿದವರನ್ನು ದೇವರ ಸಮಾನವೆಂದು ಭಾವಿಸುವಳು.

ಆಯುಧ ಪೂಜೆಯೋ, ವೃತ್ತಿ ಪರಿಕರಗಳ ಪೂಜೆಯೋ

ಕರ್ನಾಟಕದ ಬುಡಕಟ್ಟು ಆದಿವಾಸಿ ಅಲೆಮಾರಿ ಇತರೆ ಸಮುದಾಯಗಳ ಬನ್ನಿಹಬ್ಬದ ಆಚರಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಎಲ್ಲಾ ಸಮುದಾಯಗಳು ತಮ್ಮ ತಮ್ಮ ವೃತ್ತಿ ಪರಿಕರಗಳನ್ನು ಸ್ವಚ್ಚಗೊಳಿಸಿ ಪೂಜಿಸುತ್ತಾರೆ. ಇದು ಎಷ್ಟು ವ್ಯಾಪಕವಾಗಿದೆ ಎಂದರೆ ಯುದ್ಧಕ್ಕೆ ಸನ್ನದ್ದರಾಗುವ ನೆಲೆಯಲ್ಲಿ ಹುಟ್ಟಿಕೊಂಡ 'ಆಯುಧ' ಪೂಜೆ ಪದವನ್ನು ಬದಲಿಸಿ, ಬದುಕಿನ ಕಾಯಕಗಳಿಗೆ ಸನ್ನದ್ದರಾಗುವ 'ವೃತ್ತಿಪರಿಕರಗಳ ಪೂಜೆ' ಎಂದು ಬದಲಾಯಿಸುವಷ್ಟು. ಕಂಪ್ಯೂಟರ್ ಸೆಂಟರಿನ ಹುಡುಗರು ಕಂಪ್ಯೂಟರನ್ನೂ ಪೂಜಿಸುವುದನ್ನು ಕಾಣಬಹುದು. ದಸರಾ ಹೊತ್ತಿಗೆ ರೈತರ ಬೆಳೆಗಳು ಕಟಾವಿಗೆ ಬಂದಿರುತ್ತವೆ. ಹಾಗಾಗಿ ರೈತ ಸಮುದಾಯ ಕೃಷಿಯ ಸಲಕರಣೆಗಳನ್ನು ಪೂಜಿಸುತ್ತಾರೆ. ಹೀಗೆ ವಿಜಯದಶಮಿಯನ್ನು ಸಮುದಾಯಗಳು ಬದುಕಿನಲ್ಲಿ ವಿಜಯ ಸಾಧಿಸಲು ತಾವು ಕೈಗೊಂಡ ವೃತ್ತಿ ಪರಿಕರಗಳನ್ನೆ ಭಕ್ತಿಯಿಂದ ಪೂಜಿಸುತ್ತಾರೆ. ಇದನ್ನು ನೋಡಿದರೆ ಆಯುಧ ಪೂಜೆಯ ಬದಲಾಗಿ ವೃತ್ತಿಪರಿಕರಗಳ ಪೂಜೆ ಎಂದೇ ಕರೆಯಬಹುದು.

(ಸುಧಾ ಪತ್ರಿಕೆಗೆ ಮತ್ತು ಲೇಖಕರಿಗೆ ಧನ್ಯವಾದಗಳು)

ಒಳ ಮೀಸಲಾತಿ, ಒಳ ಸಂಘರ್ಷ ಆಗಬಾರದು

ಬೂರ್ಜ್ವಾ ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ರಾಜಕೀಯಕ್ಕೆ ಬಳಸಿಕೊಂಡು ಮತಗಳನ್ನು ಬಾಚಿಕೊಳ್ಳಲು, ಒಂದು ಸಮುದಾಯವನ್ನು ಮತ್ತೊಂದು ಸಮುದಾಯದ ಮೇಲೆ ಎತ್ತಿಕಟ್ಟಿ, ದಲಿತರನ್ನು ವಿಭಜಿಸುವ ಕುತಂತ್ರ ಮಾಡುತ್ತಿವೆ. ಒಳಮೀಸಲಾತಿ ದಲಿತರ ಒಗ್ಗಟ್ಟನ್ನು ಒಡೆಯುತ್ತದೆ ಎಂದು ಹೇಳುವವರಿಗೆ ನಾವು ಒಕ್ಕೊರಲಿನಿಂದ ದೃಢಪಡಿಸಬೇಕು. ಒಗ್ಗಟ್ಟಿನ ಹೋರಾಟವೊಂದೇ ಇದಕ್ಕೆ ದಾರಿಯಾಗಿದೆ. ನ್ಯಾಯವಾಗಿ ಜನಸಂಖ್ಯೆಯ ಅಣತಿಯನ್ನು ಮುಂದಿಟ್ಟುಕೊಂಡು ಹಂಚಿ ತಿನ್ನುವ ಪರಂಪರೆ ನಮ್ಮದಾಗಬೇಕು.

ಗೋಪಾಲಕೃಷ್ಣ ಹರಳಹಳ್ಳಿ
ರಾಜ್ಯಾಧ್ಯಕ್ಷರು–ಡಿ.ಹೆಚ್.ಎಸ್.

'ಮೀಸಲಾತಿ' ತಳದಲ್ಲಿರುವ ಶೋಷಿತರನ್ನು ಮೇಲೆತ್ತುವ, ಅಂತರವನ್ನು ತಗ್ಗಿಸಿ ಮುಂದುವರಿದ ಜನರ ಮಟ್ಟಕ್ಕೆ ಸಮಾನಾಂತರವಾಗಿ ನಿಲ್ಲಿಸುವುದು. ಇದು ಸಂವಿಧಾನದ ಮೂಲ ಆಶಯವಾಗಿದೆ. ಒಳಮಿಸಲಾತಿ ಜಾರಿ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೂ ಇದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟ ಪಡಿಸಿದೆ. ಒಳಮೀಸಲಾತಿ ಬಗ್ಗೆ ಇದ್ದ ಆಕ್ಷೇಪಗಳಿಗೂ ಸ್ಪಷ್ಟತೆ ನೀಡಿದೆ.

ಡಾ.ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನ ಮಂಡಿಸುವ ಸಮಯದಲ್ಲಿ ಹೆಚ್ಚಿರುವ ಅಂತರವನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮಾನಾಂತೀಕರಿಸಬೇಕು ಎಂದು ಹೇಳಿದರು.

ಒಳಮೀಸಲಾತಿ ಗಂಭೀರ ಸ್ವರೂಪಕ್ಕೆ ಬರಲು ಕಾರಣ ದೀರ್ಘಕಾಲ ಆಳಿದ ಸರ್ಕಾರದ ನೀತಿಗಳು. ಸ್ವತಂತ್ರ ಭಾರತದ ಜನರು ಕಂಡ 'ಭಾರತ' ಬರಲೇ ಇಲ್ಲ. ಭೂ ಸಂಬಂಧಗಳು ಬದಲಾಗಲೇ ಇಲ್ಲ. ದೇಶದ ಜನರಿಗೆ ಸಂಪೂರ್ಣವಾಗಿ ಭೂಮಿ ಹಂಚಿಕೆಯಾಗಲಿಲ್ಲ. ದೇಶದ ಬಂಡವಾಳಶಾಹಿಗಳು, ಭೂಮಾಲಕರು ಸರ್ಕಾರದಲ್ಲಿ ಹಿಡಿತ ಸಾಧಿಸಿ ತಮ್ಮ ಬೇಳೆ ಬೇಯಿಸಿಕೊಂಡರು. ಉಳಿಗಮಾನ್ಯ ವ್ಯವಸ್ಥೆ, ಪಾಳೇಗಾರಿ ಪದ್ಧತಿಯನ್ನು ಮುಂದುವರಿಸಿದರು. ಇದರಿಂದಾಗಿ ದಲಿತರಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ, ವಸತಿ ನೀಡುವ ಪ್ರಕ್ರಿಯೆಯ ವೇಗಕ್ಕೆ ಮಿತಿಯಾಯಿತು. ಸ್ವಾತಂತ್ರ ಭಾರತದಲ್ಲಿ ದಲಿತರು ಮತ್ತೊಮ್ಮೆ ವಂಚಿತರಾದರು.

'ಒಳಮಿಸಲಾತಿಯ' ಆಳ, ಉದ್ದಗಲಗಳನ್ನು ಹಳೆಯಬೇಕಿದೆ

ಒಳಮೀಸಲಾತಿ ಹಂಚಿಕೆ ಬಗ್ಗೆ ಮಾತನಾಡುವಾಗ ಆದರ ಆಳ ಉದ್ದಗಲಗಳನ್ನು ಅಳೆಯಬೇಕಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ 101 ಉಪಜಾತಿಗಳಿವೆ. ಇವುಗಳಲ್ಲಿ ಹೊಲೆಯ, ಮಾದಿಗ ಅಸ್ಪ್ರಸ್ಯ ಜಾತಿಗಳು ಮತ್ತು ಉಳಿದ 99 ಸ್ಪ್ರಶ್ಯ ಜಾತಿಗಳು. ಪರಿಶಿಷ್ಟ ಪಂಗಡಗಳಲ್ಲಿ 54 ಉಪ ಜಾತಿಗಳಿವೆ ಇವುಗಳಲ್ಲಿ ಬುಡಕಟ್ಟು, ಅಲೆಮಾರಿ ಸಣ್ಣ ಸಣ್ಣ ಗುಂಪುಗಳಿವೆ, ವಾಸ್ತವವಾಗಿ ಹಳೇ ಮೈಸೂರು ಭಾಗ, ಮಂಡ್ಯ, ಬೆಂಗಳೂರಿನಲ್ಲಿರುವ ಹೊಲೆಯರು ಅದಿ ಕರ್ನಾಟಕ (ಎಕೆ) ಎಂದು ಗುರುತಿಸಿ ಕೊಂಡಿದ್ದಾರೆ. ತುಮಕೂರು, ಚಿತ್ರದುರ್ಗ ಈ ಭಾಗದಲ್ಲಿ ಮಾದಿಗರು ಆದಿ ದ್ರಾವಿಡ(ಎಡಿ) ಎಂದು ಗುರುತಿಸಿಕೊಂಡಿದ್ದಾರೆ. ಆದಿ ಕರ್ನಾಟಕ (ಹೊಲೆಯರು) ಮತ್ತು ಆದಿ ದ್ರಾವಿಡ (ಮಾದಿಗರು) ಅಂಕಿ ಸಂಖ್ಯೆಯಲ್ಲಿ ಆಗಿರುವ ಗೊಂದಲವನ್ನು ಸರಿಪಡಿಸಬೇಕು.

ಸಾಮಾಜಿಕ ನ್ಯಾಯ ಹಂಗಲ್ಲ –ನಮ್ಮ ಹಕ್ಕು

ತುಮಕೂರು ಜಿಲ್ಲೆಯಿಂದ ಬೆಂಗಳೂರಿಗೆ ಬಂದು ನೆಲೆಸಿರುವ ನಾವು ಹೊಲೆಯರು ಅದಿ ಕರ್ನಾಟಕ (ಎಕೆ) ಆಗಿದ್ದೆವೆ. ಅದೇ ತುಮಕೂರಿನ ಗ್ರಾಮದಲ್ಲಿರುವ ನಮ್ಮ ಅಣ್ಣ ತಮ್ಮಂದಿರು ಆದಿ ದ್ರಾವಿಡ (ಎಡಿ) ಆಗಿದ್ದಾರೆ. ಶಾಲೆಗಳಲ್ಲಿ, ಅದೇರೀತಿ ಜಾತಿ ಪ್ರಮಾಣ ಪತ್ರಗಳೂ ಇವೆ. ಈ ಮಿಶ್ರಣದ ಮತ್ತು ವ್ಯತ್ಯಾಸದ ಸಮಸ್ಯೆ ಗೊಂದಲಮಯವಾಗಿದೆ. ಇದು ವಾಸ್ತವವಾಗಿ, ವೈಜ್ಞಾನಿಕವಾಗಿ ವಿಂಗಡನೆಯಾಗಬೇಕು. ಹೀಗೆ ಹಿಂದೆ ವಿಂಗಡಿಸಲಾಗಿದೆ. ಕಾರಣ ನನಗೂ ಗೊತ್ತಾಗದಿರುವ ಸಂಗತಿ.

ಇದಕ್ಕಾಗಿ ಒಂದು ತಜ್ಞರ ಸಮಿತಿ ರಚಿಸಿ ಪಕ್ಕಾ ದತ್ತಾಂಶಗಳನ್ನು ಸಂಗ್ರಹಿಸಬೇಕು. ಅದ್ಯಯನ ಅಗತ್ಯವಾಗಿದೆ. ಸಮಸ್ಯೆ ಪರಿಹಾರಕ್ಕೆ ಸರ್ಕಾರ ಮುಂದಾಗಬೇಕು. ಅಗತ್ಯ ಬಿದ್ದರೆ ಮತ್ತೆ ಜಾತಿ ಜನಗಣತಿ ಮಾಡಬೇಕು. ಯಾರಿಗೂ ಅನ್ಯಾಯವಾಗಬಾರದು. ಪ್ರಸ್ತುತ ಇರುವ ಶೈಕ್ಷಣಿಕ, ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ ವರದಿಗಳನ್ನು ತಕ್ಷಣ ಬಿಡುಗಡೆ ಮಾಡಿ ಅದನ್ನು ಜಾರಿಗೆ ತರಬೇಕು. ದಲಿತರು ಸೇರಿದಂತೆ ಎಲ್ಲಾ ಜಾತಿಗಳ ಜನರ ಅಭಿವೃದ್ದಿ ಬಗ್ಗೆ ರಾಜ್ಯದ ಜನತೆಗೆ ನಿಜಾಂಶ ತಿಳಿಯಬೇಕು. ಜನಸಂಖ್ಯೆಯ ಆಧಾರದಲ್ಲಿ ಅಭಿವೃದ್ದಿ ಹಣ, ಯೋಜನೆಗಳು ತಳದಲ್ಲಿರುವ ವಂಚಿತರಿಗೆ ಹಂಚಿಕೆಯಾಗಬೇಕು.

ನ್ಯಾಯಬದ್ಧವಾದ ಸುಪ್ರೀಂ ಕೋರ್ಟ್ ತೀರ್ಪು

ಒಳಮೀಸಲಾತಿ ಜಾರಿಗಾಗಿ ತಮಿಳುನಾಡು ಹೊರತುಪಡಿಸಿ ಪಂಜಾಬ್, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳು ನ್ಯಾಯಾಲಯದ ಮೆಟ್ಟಿಲೇರಿದವು. ಆಂಧ್ರಪ್ರದೇಶದಲ್ಲಿ ಒಳಮೀಸಲಾತಿ ಬಗ್ಗೆ ತೆಗೆದುಕೊಂಡ ನಿರ್ಧಾರವನ್ನು ಪ್ರಶ್ನಿಸಿದ್ದ ಪ್ರಕರಣದಲ್ಲಿ ಅಸಂವಿಧಾನಿಕ ಎಂದು 2005ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪನ್ನು ಪ್ರಶ್ನಿಸಿ ಅನೇಕ ಸಂಘ ಸಂಸ್ಥೆಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದವು. ಇದರ ಪರಿಣಾಮವಾಗಿ ಆಗಸ್ಟ್ 1, 2024ರಂದು ಏಳು ನ್ಯಾಯಾಧೀಶರುಗಳು ತೀರ್ಪು ನೀಡಿದ್ದಾರೆ. ಒಳಮೀಸಲಾತಿ ವಿಷಯ ಆಯಾ ರಾಜ್ಯಗಳಲ್ಲಿ ಬಗೆಹರಿಸಿಕೊಳ್ಳಲು ಸಂವಿಧಾನ ಅಡ್ಡಿಬರುವುದಿಲ್ಲವೆಂದು 7 ನ್ಯಾಯಧೀಶರ ಪೀಠ (ಒಬ್ಬರನ್ನು ಬಿಟ್ಟು) ಹೇಳಿದೆ. ಇದರಿಂದ ಅನೇಕ ರಾಜ್ಯದಲ್ಲಿರುವ ಒಳಮೀಸಲಾತಿ ಇತ್ಯರ್ಥಕ್ಕೆ ಸುಗಮ ಮಾರ್ಗ ಸಿಕ್ಕಿದೆ.

'ಕೆನೆಪದರ' ಜಾತಿ ವ್ಯವಸ್ಥೆ ಬಲವಾಗಿರುವಾಗ ಸಮಂಜಸವಲ್ಲ

ಈ ತೀರ್ಪಿನ ಸಂದರ್ಭದಲ್ಲಿ ಕೆನೆಪದರ ಪ್ರಸ್ತಾಪ ನ್ಯಾಯಸಮ್ಮತವಲ್ಲ. ನಮ್ಮ ದೇಶದ ದಲಿತರು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿವಿಕೆ ಜೊತೆಗೆ ಜಾತಿ ವ್ಯವಸ್ಥೆ ಬಲವಾಗಿದೆ. ದಲಿತರ ಮೇಲಿನ ದೌರ್ಜನ್ಯಗಳು ನಿರಂತರವಾಗಿರುವುದು ಸತ್ಯದ ಸಂಗತಿ. ಸರ್ಕಾರದ ಅಂಕಿಅಂಶಗಳ ಪ್ರಕಾರ ಶಿಕ್ಷಣ, ಆರೋಗ್ಯ, ಉದ್ಯೋಗ, ಭೂಮಿ ಇತ್ಯಾದಿಗಳನ್ನು ದಲಿತರಿಗೆ ಸರ್ಕಾರಗಳು ಒದಗಿಸಿ ಸಂಪೂರ್ಣಗೊಳಿಸಲಿಲ್ಲ. ದಲಿತರು ಇಂದು ಕೃಷಿ ಕೂಲಿಗಾರರಾಗಿ, ಬಡವರಾಗಿದ್ದಾರೆ. ಇಂತಹ ಸಂದರ್ಭದಲ್ಲಿ 'ಕೆನೆಪದರ' ಸೂಕ್ತವಾದುದಲ್ಲ. ಇದು ಚರ್ಚೆಯ ವಿಷಯವೂ ಆಗಬಾರದು. ಅಪ್ರಸ್ತುತ.

ರಾಜ್ಯದಲ್ಲಿ ಒಳಮೀಸಲಾತಿ ಹೋರಾಟ ಮತ್ತು ಐಕ್ಯತೆ ಹೋರಾಟದ ಬಿಕ್ಕಟ್ಟು

ಆಂಧ್ರದ ಹೋರಾಟದಿಂದ ಪ್ರೇರೇಪಿತರಾಗಿ ಕರ್ನಾಟಕದಲ್ಲಿ ಮಾದಿಗರ ಈ ಹೋರಾಟ ತೀವ್ರವಾಗುತ್ತಿರುವಾಗಲೇ ಸದಾಶಿವ ಆಯೋಗದ ವರದಿ ಜಾರಿಗೆ ಒತ್ತಾಯಿಸಿದರು. ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಲಾಭಕ್ಕೆ ಗಾಳ ಹಾಕುವ ಪ್ರಕ್ರಿಯೆ ಶುರುವಾಯಿತು. ಹೊಲೆಯರು–ಮಾದಿಗರು ಗುಂಪುಗಳಾಗಿ ಒಳಮೀಸಲಾತಿ ಪರ–ವಿರೋಧಿ ಬಣಗಳಾಗಿ ರೂಪಿತವಾದವು. ಇದಲ್ಲದೆ ಸ್ಪೃಶ್ಯ ಗುಂಪುಗಳಾದ ವಾಲ್ಮೀಕಿ, ಬೋವಿ, ಲಂಬಾಣಿ ಜನರು ಒಳಮೀಸಲಾತಿಯನ್ನು ವಿರೋಧಿಸಿ ಹೋರಾಟ ನಡೆಸಿದ್ದಾರೆ. ಕಳೆದ ಚುನಾವಣೆಯಲ್ಲಿ ಮಾದಿಗರು ಬಿಜೆಪಿ ಪರವಾಗಿ ನಿಂತರು. ಇದರ ಲಾಭ ಪಡೆದು ಬಿಜೆಪಿ ಅಧಿಕಾರಕ್ಕೆ ಬಂದು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದರು. ಆದರೆ ಬಿಜೆಪಿ ಸರ್ಕಾರ ಸದಾಶಿವ ಆಯೋಗದ ವರದಿಯನ್ನಾಗಲಿ ಅಥವಾ ಒಳಮೀಸಲಾತಿಯನ್ನಾಗಲಿ ಜಾರಿ ಮಾಡಲಿಲ್ಲ. ಅವರು ಕೇಂದ್ರ ಸರ್ಕಾರದ ಕಡೆಗೆ ಬೆರಳು ತೋರಿಸಿದರು. ನಂತರ ಬಂದ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರ ಸರ್ಕಾರವೂ ಇದನ್ನು ಜಾರಿಮಾಡಲಿಲ್ಲ. ಆದರೆ ಸಿದ್ದರಾಮಯ್ಯನವರ ಕಾಂಗ್ರೆಸ್ ಪಕ್ಷ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಿತು. ಈಗ ಅವರು ಅಧಿಕಾರದಲ್ಲಿದ್ದಾರೆ. ಏನು ಮಾಡುತ್ತಾರೆ ಎಂಬುದನ್ನು ಕಾದುನೋಡಬೇಕಿದೆ.

2013ರಲ್ಲಿ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಸದಾಶಿವ ರವರು ವರದಿಯನ್ನು ಮಂಡಿಸಿದ್ದರೂ ಇದುವರೆಗೂ ಯಾರೂ ಜಾರಿ ಮಾಡಲಿಲ್ಲ. ರಾಜಕೀಯ ಇಚ್ಛಾಶಕ್ತಿ ಕೊರತೆ ಮತ್ತು ಮತಗಳನ್ನು ಬಾಚಿಕೊಳ್ಳುವ ತಂತ್ರ ಕುತಂತ್ರಗಳು ಪ್ರಾಮುಖ್ಯತೆ ಪಡೆದುಕೊಂಡವು.

ಒಕ್ಕಲಿಗರು, ಗೌಡರು ಮತ್ತು ಲಿಂಗಾಯತರು ಮಠಗಳಲ್ಲಿ ಸಭೆ ನಡೆಸಿ ಒಳಮೀಸಲಾತಿ ಜಾರಿಗೆ ಬರದಂತೆ ಒತ್ತಾಯ ಮಾಡುವ ಮನವಿ ನೀಡಿ ಇದರ ಜಾರಿಗೆ ಅಡ್ಡಿ ಮಾಡುತ್ತಿದ್ದಾರೆ.

ಒಗ್ಗಟ್ಟಿನ ಹೋರಾಟವೊಂದೇ ಪರಿಹಾರ:

ಕಳೆದ 2015ರಿಂದ 2024ರವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉಪ ಯೋಜನೆ (ಎಸ್‌ಸಿಎಸ್‌ಪಿ)ಗೆ ನೀಡಿದ ಹಣ 1,79,872.33 ಕೋಟಿ ರೂ.ಗಳು. ಅದೇ ರೀತಿ ಟಿಎಸ್‌ಪಿ ಗೆ ನೀಡಿದ ಹಣ 73,391.56 ಕೋಟಿ ರೂ.ಗಳು. ಕಳೆದ 10 ವರ್ಷಗಳಲ್ಲಿ ಉಪಯೋಜನೆಗೆ ಒಟ್ಟು 2,56,439 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದು ಸರ್ಕಾರಗಳು ಹೇಳುತ್ತಿವೆ. ಅಲ್ಲದೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉಪ ಯೋಜನೆ ಕಾಯಿದೆಯನ್ನು 2013ರಲ್ಲಿ ಜಾರಿಗೆ ತರಲಾಗಿದೆ.



ಇದರ ಪರಾಮರ್ಶೆ ನಡೆದಿದೆಯೆ? ಅಭಿವೃದ್ಧಿಯಲ್ಲಿ ತಳಮಟ್ಟದಲ್ಲಿ ಇರುವ ದಲಿತರನ್ನು ಮೇಲೆ ತರಲು ಸಾಧ್ಯವಾಗಿದೆಯೇ? ಇತರೆ ಮೇಲ್‌ಜಾತಿ ಜನರ ಮಟ್ಟಕ್ಕೆ ದಲಿತರು ಇರುವರೇ? ಇಂತಹ ವಿಮರ್ಶೆ ನಡೆಯಬೇಕಲ್ಲವೆ? ಬೂರ್ಜ್ವಾ ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥಕ್ಕೆ, ರಾಜಕೀಯಕ್ಕೆ ಬಳಸಿಕೊಂಡು ಮತಗಳನ್ನು ಬಾಚಿಕೊಳ್ಳಲು ಒಂದು ಸಮುದಾಯವನ್ನು ಮತ್ತೊಂದು ಸಮುದಾಯದ ಮೇಲೆ ಎತ್ತಿಕಟ್ಟಿ, ದಲಿತರನ್ನು ವಿಭಜಿಸುವ ಕುತಂತ್ರ ಮಾಡುತ್ತಿರುವುದನ್ನು ನಾವು ಈಗಾಗಲೇ ಕಂಡಿದ್ದೇವೆ. ಒಳಮೀಸಲಾತಿ ದಲಿತರ ಒಗ್ಗಟ್ಟನ್ನು ಒಡೆಯುತ್ತದೆ ಎಂದು ಹೇಳುವವರಿಗೆ ನಾವು ಒಕ್ಕೊರಲಿನಿಂದ ದೃಢಪಡಿಸಬೇಕು. ಒಗ್ಗಟ್ಟಿನ ಹೋರಾಟವೊಂದೇ ಇದಕ್ಕೆ ದಾರಿಯಾಗಿದೆ. ನ್ಯಾಯವಾಗಿ ಜನಸಂಖ್ಯೆಯ ಅಣತಿಯನ್ನು ಮುಂದಿಟ್ಟುಕೊಂಡು ಹಂಚಿ ತಿನ್ನುವ ಪರಂಪರೆ ನಮ್ಮದಾಗಬೇಕು. ❑

ಬೂದುಗುಂಬಳಕಾಯಿಗೆ...... ಪುಟ 3 ರಿಂದ

ಇಷ್ಟು ದಿನ ಓದಿದವರಲ್ಲಿ ವಿಜ್ಞಾನಿಗಳಲ್ಲಿ ಯಾರಾದರೂ ಒಬ್ಬರು ಹೇಳಲಿ ಮೊಟ್ಟ ಮೊದಲನೆಯದಾಗಿ ಯಾವುದೇ ಬಲಿಯಿಂದ ಏನು ಪ್ರಯೋಜನ? ಪ್ರಯೋಜನವಿದ್ದರೆ ನಿನ್ನನ್ನೇ ಏಕೆ ಬಲಿ ಕೊಡಬೇಕು? ಇದನ್ನು ಸಮಂಜಸವಾಗಿ ಉತ್ತರಿಸುವ ಭೂಪ ಇನ್ನೂ ಹುಟ್ಟಿಲ್ಲ. ನಿನಗೆ ಆಗದವನು ಯಾವನೋ ನಿನ್ನನ್ನು ಮೊದಲು ಬಲಿ ಕೊಟ್ಟ ಸರಿ. ಅಲ್ಲಿಂದ ಮೊದಲಾಯಿತು ಈ ಅಸಂಖ್ಯಾತ ವಾರ್ಷಿಕ ಭೀಕರ ಕೊಲೆಗಳು.

ನಿನ್ನನ್ನು ಹೀಗೆ ಅಮಾನುಷವಾಗಿ ಕೊಲೆ ಮಾಡುವುದನ್ನು ಸ್ನೇಹಿತರೊಂದಿಗೆ ಖಂಡಿಸುತ್ತಿದ್ದೆ. ಭಾಷಣಗಳಲ್ಲೂ ಅದೇ ಕೆಲಸ ಮಾಡುತ್ತಿದ್ದೆ. ಈ ಸಲವಂತೂ ನೀನು ಮತ್ತು ನಿನ್ನ ವಂಶದ ಹಲವರು ಬೀದಿಯಲ್ಲಿ ಕೊಲೆಗೀಡಾಗಿ ಅಸ್ತವ್ಯಸ್ತವಾಗಿ ಬಿದ್ದಿರುವುದನ್ನು ನೋಡಿ ದುಃಖ ತಡೆಯಲಾರದೇ ನಿನಗೆ ಈ ಕಾಗದವನ್ನು ಬರೆದಿದ್ದೇನೆ. ನೀನು ಓದಲು ಆಗದೇ ಇರಬಹುದು. ಆದರೆ ನಿನಗೆ ಬರೆದ ಪತ್ರವನ್ನು ಬಹಿರಂಗ ಪಡಿಸುವುದರಿಂದ ನಿನ್ನ ಕೊಲೆಪಾತಕರಾದರೂ ಇದನ್ನೂ ಓದಿ ನಿನ್ನನ್ನು ಇಂತಹ ದುರ್ಗತಿಗೆ ಈಡು ಮಾಡದೇ ಹೋಗಲಿ ಎಂದು ಬರೆದಿದ್ದೇನೆ.

ನಾನು ಇಷ್ಟುಮಾತ್ರ ನಿನಗೆ ಆಶ್ವಾಸನೆ ಕೊಡುತ್ತೇನೆ. ನಿನ್ನನ್ನು ಕೊಲೆಗೀಡು ಮಾಡುತ್ತಿರುವಂತಹ ಅಸಂಖ್ಯಾತ ಮೂಢನಂಬಿಕೆಗಳ, ಅರ್ಥವಿಲ್ಲದ ಸಂಪ್ರದಾಯಗಳ ವಿರುದ್ಧ ಒಬ್ಬನೇ ಆದರೂ ಚಿಂತೆ ಇಲ್ಲ, ಎದೆ ಗುಂದದೆ ಕೊನೆಯತನಕ ಹೋರಾಡುತ್ತಲೇ ಇರುತ್ತೇನೆ.

ಬದುಕಿರುವಾಗ ದೇಹಕ್ಕೆ ಮನಸ್ಸಿಗೆ ಸಾಕಷ್ಟು ಕಷ್ಟಕೊಟ್ಟು ಸತ್ತಾಗ ಆತ್ಮಕ್ಕೆ ಆಂತಿ ಸಿಗಲಿ ಎಂದು ಕೋರುವ ಜನ ನಾವು. ನಿನ್ನ ದೇಹಕ್ಕೆ ಮತ್ತು ಮನಸ್ಸಿಗೆ ಅಸಾಧ್ಯ ನೋವಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತು. ಗೊತ್ತಿಲ್ಲದ ಆತ್ಮದ ಬಗ್ಗೆ ನಾನು ಏನನ್ನೂ ಹೇಳಲೂ ಇಚ್ಚಿಸುವುದಿಲ್ಲ.

ಇತಿ,
ನಿನ್ನ ವಂಶದ ಶ್ರೇಯೋಭಿಲಾಷಿ
ದಿವಂಗತ ಡಾ.ಎಚ್.ನರಸಿಂಹಯ್ಯ

ಸೀತಾರಾಮ್ ಯೆಚೂರಿ ಸೈದ್ಧಾಂತಿಕ ಸೃಜನಶೀಲತೆಯ ನಾಯಕ

ಶ್ರದ್ಧಾಂಜಲಿ ಸಭೆಯಲ್ಲಿ ಅವರ ವಿಶಿಷ್ಟತೆಗಳ ನೆನಪು



“ಇತರೆ ರಾಜಕೀಯ ನಾಯಕರಂತೆ ಸೀತಾರಾಮ್ ಯೆಚೂರಿ ಅವರು ಕಿರುಚಾಡಲಿಲ್ಲ, ಮಾತುಗಳಲ್ಲಿ ಅಬ್ಬರ ಇರಲಿಲ್ಲ, ಆದರೆ ಅವರಲ್ಲಿ ಬಹಳಷ್ಟು ವಿಚಾರಗಳಿರುತ್ತಿದ್ದವು” ಎಂದು ಬರಗೂರು ರಾಮಚಂದ್ರಪ್ಪನವರು ಹೇಳಿದರು.

ಅಕ್ಟೋಬರ್ 6 ರಂದು ಸಿಪಿಐ(ಎಂ) ಬೆಂಗಳೂರಿನಲ್ಲಿ ಆಯೋಜಿಸಿದ್ದ ‘ಕಾಮ್ರೆಡ್ ಸೀತಾರಾಮ್ ಯೆಚೂರಿ ಶ್ರದ್ಧಾಂಜಲಿ ಸಭೆ’ಯಲ್ಲಿ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡಿದ ಬರಗೂರು ಅವರು, ಅಂದು ನಾವೆಲ್ಲಾ ಕಾಂಗ್ರೆಸ್ ಪಕ್ಷದ ವಿರೋಧಿಗಳೇ ಆಗಿದ್ದೆವು. ಕಾಂಗ್ರೆಸ್ ಪಕ್ಷವನ್ನು ವಿರೋಧಿಸುತ್ತಿದ್ದ ಎಡಪಕ್ಷಗಳೇ ಕಾಂಗ್ರೆಸ್ ಜತೆ ಕೈಜೋಡಿಸುವ ಸ್ಥಿತಿ ಎದುರಾಗಿತ್ತು. ಅದನ್ನು ಸರಿಯಾಗಿ ನಿರ್ವಹಿಸಿದ ಶ್ರೇಯಸ್ಸು ಸೀತಾರಾಮ್ ಯೆಚೂರಿ ಅವರಿಗೆ ಸಲ್ಲುತ್ತದೆ. ಎಡ ಪಕ್ಷಗಳು ಕಾಂಗ್ರೆಸ್ ಜೊತೆಗೆ ಸೇರದೇ ಉಳಿದಿದ್ದರೆ, ದೇಶದಲ್ಲಿ ಇನ್ನೂ ಭೀಕರವಾದ ಸನ್ನಿವೇಶ ಸೃಷ್ಟಿಯಾಗುತ್ತಿತ್ತು, ದೇಶದ ಸ್ಥಿತಿ ಇನ್ನಷ್ಟು ಹೀನಾಯವಾಗುತ್ತಿತ್ತು. ಅಂತಹ ಅಪಾಯವನ್ನು ಯೆಚೂರಿ ಮತ್ತು ಅವರ ಪಕ್ಷ ತಪ್ಪಿಸಿದರು. ಕಾಂಗ್ರೆಸ್ ಜೊತೆಗೆ ಹೋದರೂ ತಮ್ಮ ಮತ್ತು ತಮ್ಮ ಪಕ್ಷದ ಮೂಲ ಆಶಯ ಹಾಗೂ ಸಿದ್ಧಾಂತವನ್ನು ಅವರು ಬಿಟ್ಟುಕೊಡಲಿಲ್ಲ ಎಂದು ಹೇಳಿದ ಬರಗೂರು ಅವರು, ಯೆಚೂರಿ ಅವರು 2015ರಲ್ಲಿ ನನ್ನ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಲು ಬೆಂಗಳೂರಿಗೆ ಬಂದಿದ್ದರು, ಪುಸ್ತಕ ಬಿಡುಗಡೆಯ ಕಾರ್ಯಕ್ರಮದ ಚಿತ್ರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎಂದು ನೆನೆಪಿಸಿಕೊಂಡರು.

ಕೇರಳ, ಪಶ್ಚಿಮ ಬಂಗಾಳದವರೇ ಎಸ್‌ಎಫ್‌ಐ ಸಂಘಟನೆಯ ರಾಷ್ಟ್ರಾಧ್ಯಕ್ಷರಾಗಿರುತ್ತಿದ್ದರು. ಯೆಚೂರಿ ಅವರು ಈ ಎರಡು ರಾಜ್ಯಗಳನ್ನು ಹೊರತುಪಡಿಸಿದವರಾಗಿ ಎಸ್‌ಎಫ್‌ಐ ಸಂಘಟನೆಯ ರಾಷ್ಟ್ರಾಧ್ಯಕ್ಷರಾದರು. ಸಿಪಿಎಂ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿಯೂ ದಕ್ಷಿಣ ಭಾರತದ ಮೊದಲಿಗರು ಅವರು. ಸಮಕಾಲೀನ ಸಂದರ್ಭದೊಳಗೆ ಯೆಚೂರಿ ಇರುವಿಕೆಯ ಅಗತ್ಯವಿತ್ತು. ಸಂಸದೀಯ ರಾಜಕಾರಣದ ಶಕ್ತಿ ಮತ್ತು ಅದರ ಮಿತಿಗಳನ್ನು ತಿಳಿದಿರುವ ಕೆಲವೇ ಕಮ್ಯೂನಿಸ್ಟ್ ನಾಯಕರಲ್ಲಿ ಅವರೂ ಒಬ್ಬರು. ಯೆಚೂರಿಯವರು ಸೈದ್ಧಾಂತಿಕ ದೀಪ ಆಗಿದ್ದರು. ಮೂಲಭೂತವಾದಿ, ಪ್ರತಿಗಾಮಿ ಶಕ್ತಿಗಳನ್ನು ಎದುರಿಸಲು ಸಕಾರಾತ್ಮಕ ಕ್ರಿಯೆ ತೆಗೆದುಕೊಳ್ಳುತ್ತಿದ್ದರು. ಯೆಚೂರಿ ಅವರಿಗೂ ಮೊದಲು ಹರಿಕಿಶನ್ ಸಿಂಗ್ ಸುರ್ಜಿತ್ ಇಂತಹ ಪಾತ್ರ ವಹಿಸುತ್ತಿದ್ದರು. ಯೆಚೂರಿ ಅವರು ಸಮಕಾಲೀನ ನಾಯಕ ಮತ್ತು ಲೇಖಕ ಒಟ್ಟಿಗೆ ಆಗಿದ್ದುದು ವಿಶೇಷ. ಅವರಲ್ಲಿ ಸೈದ್ಧಾಂತಿಕ ಕರ್ಮಟತೆ ಇರಲಿಲ್ಲ, ಸೃಜನಶೀಲತೆ ಇತ್ತು. ಅವರು ನನ್ನಂತಹವರ ಅಂತರಂಗದ ನಾಯಕ. ಅವರ ನಿಧನ ಭಾರತಕ್ಕೆ ನಷ್ಟ ಎಂದು ಬರಗೂರು ಅವರು ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ಅಗಲಿಕೆ ಸರಿಪಡಿಸಲು ಸಾಧ್ಯವಿಲ್ಲದ್ದು: ಎಂ.ಎ.ಬೇಬಿ

ಸೀತಾರಾಮ್ ಯೆಚೂರಿ ತಮ್ಮ 50 ವರ್ಷಗಳ ಜೊತೆಗಾರರು ಎಂದು ಮಾತು ಆರಂಭಿಸಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಎಂ.ಎ.ಬೇಬಿಯವರು, ‘ಯೆಚೂರಿ ಅವರ ಸಾವು ಭಾರತದ ಕಾರ್ಮಿಕ, ರೈತ ಮತ್ತು ಎಡ ಶಕ್ತಿಗಳಿಗೂ ಬಹಳ ನಷ್ಟ ಉಂಟುಮಾಡಿದೆ. ಅವರ ಅಗಲಿಕೆ ಸರಿಪಡಿಸಲು ಸಾಧ್ಯವಿಲ್ಲದ್ದು’ ಎಂದು ತಮ್ಮ ಸಂತಾಪ ಸೂಚಿಸಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಕಮ್ಯೂನಿಸ್ಟರು ಬ್ರಿಟೀಷರನ್ನು ಎದುರಿಸಿದ್ದರು. ನಂತರ 1975ರ ತುರ್ತುಪರಿಸ್ಥಿತಿ ವಿರುದ್ಧದ ಮತ್ತೊಂದು ಸ್ವಾತಂತ್ರ್ಯ ಹೋರಾಟ ನಡೆಸಬೇಕಾಯಿತು. ಇಂದು ಅಘೋಷಿತ ತುರ್ತುಪರಿಸ್ಥಿತಿ ವಿರುದ್ಧ ಮೂರನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿದೆ.

ಸಾಂವಿಧಾನಿಕ ಮೌಲ್ಯಗಳನ್ನು ನಾಶಮಾಡುವ ಶಕ್ತಿಗಳು ಇಂದು ಪ್ರಬಲವಾಗಿವೆ. ಇದನ್ನು ಎದುರಿಸಲು ನಾವೆಲ್ಲರೂ ಸನ್ನದ್ಧರಾಗಬೇಕಿದೆ.

370ನೇ ವಿಧಿ ರದ್ದತಿ ಸಂದರ್ಭದಲ್ಲಿ ಜಮ್ಮು ಕಾಶ್ಮೀರ ದಿಗ್ಬಂದನಕ್ಕೆ ಒಳಗಾಗಿತ್ತು. ಅಲ್ಲಿನ ಜನರು ಹೊರ ಜಗತ್ತಿನ ಸಂಪರ್ಕವನ್ನು ಕಡಿದುಕೊಂಡಿದ್ದರು. ಇಂತಹ ಸಂದರ್ಭದಲ್ಲಿ ಅಲ್ಲಿನ ಸಿಪಿಐ(ಎಂ) ನಾಯಕ ಮತ್ತು ಶಾಸಕ ಯೂಸುಪ್ ತರಿಗಾಮಿ ಅವರನ್ನು ಗೃಹಬಂಧನದಲ್ಲಿ ಇರಿಸಲಾಗಿತ್ತು, ತರಿಗಾಮಿ ಅವರಿಗೆ ಏನಾಗಿದೆ ಎಂದು ತಿಳಿಯಲು ಯೆಚೂರಿ ಕಾಶ್ಮೀರಕ್ಕೆ ಹೋಗಲು ಮುಂದಾದರು. ಆದರೆ, ಪ್ರಭುತ್ವ ಅವರನ್ನು ಅಲ್ಲಿಗೆ ಹೋಗಲು ಬಿಡಲಿಲ್ಲ. ತರಿಗಾಮಿ ನನ್ನ ಸ್ನೇಹಿತ, ಅವರಿಗೆ ಏನಾಗಿದೆ ಎನ್ನುತ್ತಾ, ಅವರನ್ನು ನೋಡಲು ಹೆಬಿಯಸ್ ಕಾರ್ಪಸ್ ಅರ್ಜಿಯ ಮೂಲಕ ಸುಪ್ರೀಂ ಕೋರ್ಟ್ ಮೊರೆ ಹೋಗಿ, ಕೋರ್ಟ್ ಅನುಮತಿ ಪಡೆದು ಯೆಚೂರಿ ಜಮ್ಮು ಕಾಶ್ಮೀರಕ್ಕೆ ಹೋಗಿದ್ದರು. ಯಾವ ರಾಜಕಾರಣಿಯೂ ಜಮ್ಮು ಕಾಶ್ಮೀರಕ್ಕೆ ಕಾಲಿಡಲು ಭಯ ಪಡುತ್ತಿದ್ದ ಸಂದರ್ಭದಲ್ಲಿ ಯೆಚೂರಿ ಧೈರ್ಯದಿಂದ ಹೋಗಿ ಬಂದರು. ನ್ಯಾಯಾಲಯದಲ್ಲಿ ಚುನಾವಣಾ ಬಾಂಡ್ ಪ್ರಕರಣ ದಾಖಲಿಸುವಲ್ಲಿಯೂ ಯೆಚೂರಿ ಪಾತ್ರ ಪ್ರಮುಖವಾಗಿದೆ ಎಂದು ಎಂ.ಎ.ಬೇಬಿ ಅವರು ನೆನಪಿಸಿಗೊಂಡರು.

> **“ಅವರು ಪ್ಯೂಡಲ್ ಭಾಷೆ ಬಳಸಲಿಲ್ಲ, ಕಿರುಚಾಡಲಿಲ್ಲ, ಅವರಲ್ಲಿ ಅಬ್ಬರ ಇರಲಿಲ್ಲ, ವಿಚಾರ ಇತ್ತು”– ಯೆಚೂರಿಯವರ ಕುರಿತು ಪ್ರೊ.ಬರಗೂರು**

ಮಹಾನ್ ಎಡಪಂಥೀಯ ರಾಜಕೀಯ ಮುತ್ಸದ್ದಿ: ನ್ಯಾ.ವಿ.ಗೋಪಾಲಗೌಡ

“ಕಾಮ್ರೆಡ್ ಸೀತಾರಾಂ ಯೆಚೂರಿಯವರು ಮಹಾನ್ ಎಡಪಂಥೀಯ ಮುತ್ಸದ್ದಿ. 1977ರಲ್ಲಿ ಜೆಎನ್ ಯು ಚಾನ್ಸಲರ್ ಆಗಿದ್ದ ಇಂದಿರಾಗಾಂಧಿಗೆ ರಾಜಿನಾಮೆ ಕೊಡಿ ಎಂದು ಹೇಳಿದ ಧೀರ ವಿಧ್ಯಾರ್ಥಿ ನಾಯಕ ಯೆಚೂರಿ. ಇದೆಲ್ಲಾ ಚರಿತ್ರೆಯಲ್ಲಿ ದಾಖಲಾಗುತ್ತದೆ.” ಹೀಗೆಂದವರು ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ.

‘ಯೆಚೂರಿ ನನಗೆ 1975ರಿಂದ ಪರಿಚಯ. ಕರ್ನಾಟಕದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಸ್ಥಾಪಕ ಅಧ್ಯಕ್ಷ ನಾನು. ಯೆಚೂರಿಯವರು ಮೊದಲೆಲ್ಲಾ ನನ್ನೊಡನೆ ಸಂಪರ್ಕದಲ್ಲಿದ್ದರು. ನ್ಯಾಯಮೂರ್ತಿ ಆದ ನಂತರ ಯೆಚೂರಿ ನನ್ನನ್ನು ಸಂಪರ್ಕಿಸಲಿಲ್ಲ, ಮಾತ್ರವಲ್ಲ ದೂರವಾಣಿ ಕೂಡಾ ಮಾಡಲಿಲ್ಲ. ರಾಜ್ಯಸಭೆಯಲ್ಲಿನ ಅವರ ಚರ್ಚೆ ಅರ್ಥಪೂರ್ಣವಾಗಿರುತ್ತಿತ್ತು. ‘ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದೇನೆ, ನನ್ನ ಹೆಂಡತಿ ರಜಪೂತ, ಆಕೆಯ ತಂದೆ ಮುಸ್ಲಿಂ, ಹೀಗಿರುವಾಗ ನನ್ನ ಮಕ್ಕಳು ಯಾವ ಜಾತಿಗೆ ಸೇರುತ್ತಾರೆ?’ ಎಂದು ರಾಜ್ಯಸಭೆಯಲ್ಲಿ ಯೆಚೂರಿ ಪ್ರಶ್ನಿಸಿದರು’ ಎಂದು ನ್ಯಾ.ವಿ.ಗೋಪಾಲಗೌಡ ಹೇಳಿದರು.

ನಲವತ್ತು ವರ್ಷಗಳ ಸ್ನೇಹ: ನ್ಯಾ.ನಾಗಮೋಹನ ದಾಸ್

ನನ್ನ ಮತ್ತು ಸೀತಾರಾಮ್ ಯೆಚೂರಿಯವರದು 40 ವರ್ಷಗಳ ಸ್ನೇಹ. ಯುಪಿಎ ಆಡಳಿತದ ಸಂದರ್ಭದಲ್ಲಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಒಂದು ಕಣ್ಣೋಟ ಕಟ್ಟಿಕೊಟ್ಟರು. ಜಗತ್ತಿನ ವಿದ್ಯಮಾನದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಿದ್ದರು. ಸಂವಿಧಾನದ ಮೂಲ ತತ್ವಗಳಾದ “ಪ್ರಜಾಪ್ರಭುತ್ವ, ಜಾತ್ಯಾತೀತ ಮತ್ತು ಸಾಮಾಜಿಕ ನ್ಯಾಯ” ಇವುಗಳ ಬಗ್ಗೆ ಯೆಚೂರಿ ಅಪಾರವಾದ ನಂಬಿಕೆ ಇಟ್ಟಿದ್ದರು. ಅದಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಐಕ್ಯ ಹೋರಾಟದಿಂದ ಮಾತ್ರ ಸಾಧ್ಯ ಎಂದು ಅದಕ್ಕೆ ಮಹತ್ವ ನೀಡಿದ್ದರು. ಸಂವಿಧಾನದ ಮೂಲತತ್ವಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಯೆಚೂರಿಯವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ” ಎಂದು ನ್ಯಾ. ನಾಗಮೋಹನ ದಾಸ್ ಹೇಳಿದರು.

ಯೆಚೂರಿ ಅವರು ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದ ವ್ಯಕ್ತಿ. ಇಂದಿನ ಕೋಮುವಾದಿ, ಸರ್ವಾಧಿಕಾರಿ, ಏಕ ವ್ಯಕ್ತಿಯ ಪಕ್ಷದ ಪ್ರಭುತ್ವವನ್ನು ಹತ್ತಿಕ್ಕುವ ಮೂಲಕ, ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವ ಮೂಲಕ ಯೆಚೂರಿಯವರಿಗೆ ಶ್ರದ್ಧಾಂಜಲಿ ಸಲ್ಲಿಸೋಣ ಎಂದು ಎಎಪಿ ಮುಖಂಡರಾದ ಮುಖ್ಯಮಂತ್ರಿ ಚಂದ್ರು ಹೇಳಿದರು.

ಮಾಜಿ ಪ್ರಧಾನಿ ದೇವೇಗೌಡರು ಕಳುಹಿಸಿದ್ದ ಶ್ರದ್ಧಾಂಜಲಿ ಸಂದೇಶವನ್ನು ಓದಲಾಯಿತು.

ಸಭೆಯ ಆರಂಭದಲ್ಲಿ ಯೆಚೂರಿಯವರ ಭಾವಚಿತ್ರಕ್ಕೆ ಗಣ್ಯರು ಪುಷ್ಪನಮನ ಅರ್ಪಿಸಿದರು. ನಂತರ ಸಿಪಿಐ(ಎಂ) ನಾಯಕಿ ಕೆ.ನೀಲಾ ಅವರು ಶ್ರದ್ಧಾಂಜಲಿ ನಿರ್ಣಯ ಓದಿದರು.

ಸಚಿವ ರಾಮಲಿಂಗಾರೆಡ್ಡಿ, ಸಿದ್ದನಗೌಡ ಪಾಟೀಲ್, ಸಾತಿ ಸುಂದರೇಶ್, ಜಿ.ಆರ್.ಶಿವಶಂಕರ್, ನಾಗರಾಜ ಪೂಜಾರ್, ಅಮ್ಜದ್ ಪಾಷಾ, ಎಂ.ಎಸ್.ಶ್ರೀರಾಮ್ ಸೇರಿದಂತೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ನಾಯಕರು ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದರು. ರಾಜ್ಯದ ಹಲವು ಕಡೆಗಳಿಂದ ಸಿಪಿಎಂ ಸೇರಿದಂತೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ನಾಯಕರು, ಕಾರ್ಯಕರ್ತರು ಭಾಗವಹಿಸಿದ್ದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಯೆಚೂರಿ ಕುರಿತಾದ ‘ಹೀಗಿದ್ದರು ಯೆಚೂರಿ: ಒಡನಾಡಿಗಳ ನೆನಪು’ ಹಾಗೂ ‘ಸೀತಾರಾಂ ಯೆಚೂರಿ; ಅಚ್ಛೇ ದಿನ್ ಗೆ ಸವಾಲು’ ಎಂಬ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು.

ಭಾರತವೆಂಬ ಬಹುತ್ವದ ಶಕ್ತಿಗಳನ್ನು ಒಗ್ಗೂಡಿಸಲು ಶ್ರಮಿಸೋಣ: ಶ್ರದ್ಧಾಂಜಲಿ ಸಭೆ ಕರೆ

ಕಾಮ್ರೇಡ್ ಸೀತಾರಾಮ್ ಯೆಚೂರಿ ಅವರ ನಿಧನಕ್ಕೆ ಇಂದು ನೆರೆದಿರುವ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ತಮ್ಮ ಅತೀವವಾದ ದುಃಖವನ್ನು ವ್ಯಕ್ತಪಡಿಸುತ್ತವೆ. ಅವರು ನವದೆಹಲಿಯ ಆಲ್ ಇಂಡಿಯಾ ಮೆಡಿಕಲ್ ಇನ್‌ಸ್ಟಿಟ್ಯೂಟ್ ನಲ್ಲಿ ತೀವ್ರವಾದ ಶ್ವಾಸಕೋಶದ ಸೋಂಕಿನ ಪರಿಣಾಮವಾಗಿ ಸೆ. 12ರಂದು ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಸೀತಾರಾಮ್ ಯೆಚೂರಿ ಅವರು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರು ಎಡಪಕ್ಷಗಳ ಪ್ರಮುಖ ನಾಯಕ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಚೆನ್ನಾಗಿ ಬಲ್ಲವರಾಗಿದ್ದರು.

> **ಸೀತಾರಾಮ್ ಯೆಚೂರಿ ಅವರ ನಿಧನಕ್ಕೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ತಮ್ಮ ಅತೀವವಾದ ದುಃಖ ವ್ಯಕ್ತಪಡಿಸಿದ್ದು, ಶೋಷಣೆ–ಮುಕ್ತ ಸಮಾಜಕ್ಕಾಗಿ ಹೋರಾಟವನ್ನು ಮುನ್ನಡೆಸಲು, ಭಾರತವೆಂಬ ಬಹುತ್ವದ ಶಕ್ತಿಗಳನ್ನು ಒಗ್ಗೂಡಿಸಲು ಮತ್ತು ಅದಕ್ಕಾಗಿ ಶ್ರಮಿಸಲು ಕರೆ ನೀಡಿದೆ. ಅಕ್ಟೋಬರ್ 6ರಂದು ಬೆಂಗಳೂರಿನಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ತೆಗೆದುಕೊಂಡ ಶ್ರದ್ಧಾಂಜಲಿ ನಿರ್ಣಯದ ಸಂಪೂರ್ಣ ಪಠ್ಯ ಇಲ್ಲಿದೆ.**

ಅವರು ಒಬ್ಬ ಅದ್ಭುತ ವಿದ್ಯಾರ್ಥಿಯಾಗಿ, 12ನೇ ತರಗತಿಯ ಸಿಬಿಎಸ್ಸಿ ಪರೀಕ್ಷೆಯಲ್ಲಿ ದೇಶಕ್ಕೆ ಮೊದಲಿಗರಾಗಿದ್ದರು. ಅರ್ಥಶಾಸ್ತ್ರದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳೆರಡರಲ್ಲೂ ಪ್ರಥಮ ದರ್ಜೆಯನ್ನು ಪಡೆದರು. 1974ರಲ್ಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಚಳವಳಿಗೆ ಸೇರಿದರು ಮತ್ತು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ನಾಯಕರಾದರು. ಅವರು ಎರಡು ವರ್ಷಗಳ ಅವಧಿಯಲ್ಲಿ ಜೆಎನ್‌ಯು ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ಮೂರು ಬಾರಿ ಆಯ್ಕೆಯಾದರು. 1984ರಿಂದ 1986ರವರೆಗೆ ಎಸ್‌ಎಫ್‌ಐ ನ ಅಖಿಲ ಭಾರತ ಅಧ್ಯಕ್ಷರಾಗಿದ್ದರು ಮತ್ತು ವಿದ್ಯಾರ್ಥಿ ಸಂಘಟನೆಯನ್ನು ಭಾರತದಾದ್ಯಂತ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೀತಾರಾಮ್ ಯೆಚೂರಿ ಅವರು ↗

ಎರಡು ಚುನಾವಣೆ–ಎರಡು ಫಲಿತಾಂಶ

ಪ್ರಕಾಶ್ ಕಾರತ್

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಯ ಫಲಿತಾಂಶ ಬಹಳ ಮಹತ್ವದ್ದಾಗಿದೆ. 90 ಸ್ಥಾನಗಳಲ್ಲಿ 49ರಲ್ಲಿ ಜಯಿಸಿದ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ನೇತೃತ್ವದ ಮೈತ್ರಿಕೂಟದ ಗೆಲವು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಸರ್ಜಿಸಿ ಅದರ ವಿಶೇಷ ಸ್ಥಾನಮಾನವನ್ನು ವಂಚಿಸಲು ಮೋದಿ ಸರಕಾರ ಮತ್ತು ಬಿಜೆಪಿ ಕೈಗೊಂಡ ಸರ್ವಾಧಿಕಾರಿ ಕ್ರಮದ ವಿರುದ್ಧ ಒಂದು ಪ್ರಬಲವಾದ ಜನಾದೇಶವಾಗಿದೆ. ಮತಗಳನ್ನು ಒಡೆಯುವ ಉದ್ದೇಶದಿಂದ, ಪ್ರಾಕ್ಸಿಗಳನ್ನು ಕಣಕ್ಕಿಳಿಸಲು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಸ್ಪರ್ಧಿಸುವಂತೆ ಉತ್ತೇಜಿಸುವ ಬಿಜೆಪಿಯ ಪ್ರಯತ್ನಗಳನ್ನು ಕೂಡ ಕಣಿವೆಯ ಜನರು ವಿಫಲಗೊಳಿಸಿದ್ದಾರೆ. ಕಣಿವೆಯಲ್ಲಿ ಚಲಾವಣೆಯಾದ ಮತಗಳಲ್ಲಿ ಬಿಜೆಪಿ ಕೇವಲ 2.2 ಶೇಕಡಾ ಮತಗಳನ್ನು ಪಡೆದಿರುವುದು ಕಾಶ್ಮೀರಿ ಜನತೆಯ ಅಸ್ಮಿತೆಯನ್ನು ನಾಶ ಮಾಡುವ ಹಿಂದೂತ್ವ ಶಕ್ತಿಗಳ ಆಟಾಟೋಪ ಸಂಪೂರ್ಣ ತಿರಸ್ಕೃತಗೊಂಡಿರುವುದನ್ನೂ ಇದು ತೋರಿಸುತ್ತದೆ.

ಅದೇ ಹೊತ್ತಿಗೆ, 29 ಸ್ಥಾನಗಳನ್ನು ಜಯಿಸುವ (ಕಳೆದ ಬಾರಿಗಿಂತ ಮೂರು ಹೆಚ್ಚು) ಮೂಲಕ ಜಮ್ಮುನಲ್ಲಿ ಬಿಜೆಪಿ ಗಳಿಸಿದ ವಿಜಯ ಹಾಗೂ ಈ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಕೇವಲ ಒಂದು ಸೀಟನ್ನು ಗೆದ್ದಿರುವುದು ಜಮ್ಮು ಮತ್ತು ಕಣಿವೆ ನಡುವಿನ ವಿಭಜನೆ ಆಳವಾಗಿರುವುದನ್ನು ತೋರಿಸುತ್ತದೆ. ಇದು, ಜಮ್ಮು ವಲಯದ ಜನರನ್ನು ಹೇಗೆ ಪ್ರತಿನಿಧಿಸುವುದು ಮತ್ತು ಅವರ ಹಿತಾಸಕ್ತಿಗಳನ್ನು ಹೇಗೆ ಒಳಗೊಳಿಸುವುದು ಎನ್ನುವ ದೊಡ್ಡ ಸವಾಲನ್ನು ಹೊಸ ಸರಕಾರದ ಮುಂದೆ ಒಡ್ಡಿದೆ.

ಒಮರ್ ಅಬ್ದುಲ್ಲಾ ನೇತೃತ್ವದ ಸರಕಾರ ಬಹಳಷ್ಟು ಅಡ್ಡಿಆತಂಕಗಳ ನಡುವೆ ಕೆಲಸ ಮಾಡಬೇಕಾಗುತ್ತದೆ. ಇದು ಕೇಂದ್ರಾಡಳಿತ ಪ್ರದೇಶವೊಂದರ ಸರಕಾರ ಮತ್ತು ವಿಧಾನ ಸಭೆಯಾಗಿದೆ. ಲೆಫ್ಟಿನೆಂಟ್ ಗವರ್ನರ್‌ಗೆ ಅಪಾರ ಅಧಿಕಾರಗಳನ್ನು ನೀಡಲಾಗಿದೆ. ಜಮ್ಮು ಮತ್ತು ಕಾಶ್ಮೀರ ಪುನರ್‌ಸಂಘಟನೆ ಕಾನೂನು ಅಡಿಯಲ್ಲಿ ನಿಯಮಗಳಿಗೆ ತಿದ್ದುಪಡಿ ತಂದು ಹೀಗೆ ಮಾಡಲಾಗಿದೆ. ದೆಹಲಿ ಸರಕಾರ ಎದುರಿಸಿದಂಥದ್ದೇ ಪರಿಸ್ಥಿತಿಯನ್ನು ಜಮ್ಮು ಮತ್ತು ಕಾಶ್ಮೀರ ಸರಕಾರವೂ ಎದುರಿಸಲಿದೆ. ಸರಕಾರ ರಚನೆಯು, ಜಮ್ಮು ಮತ್ತು ಕಾಶ್ಮೀರಕ್ಕೆ ತಕ್ಷಣವೇ ರಾಜ್ಯದ ಸ್ಥಾನಮಾನ ನೀಡುವ ಹೋರಾಟದಲ್ಲಿ ಮೊದಲ ಹೆಜ್ಜೆ ಎಂದು ಕಾಣಬೇಕಾಗಿದೆ. ಪೂರ್ಣ ಪ್ರಮಾಣದ ರಾಜ್ಯ ಸ್ಥಾನಮಾನವನ್ನು ಮರುಪ್ರತಿಷ್ಠಾಪನೆ ಮಾಡುವುದರಿಂದ ಮಾತ್ರವೇ ಲಫ್ಟಿನೆಂಟ್ ಗವರ್ನರ್ ಮೂಲಕ ಕೇಂದ್ರದ ನಿಯಂತ್ರಣವನ್ನು ಕೊನೆಗಾಣಿಸುವ ಹಾದಿ ಸುಗಮವಾಗುತ್ತದೆ.

ಅನಿರೀಕ್ಷಿತ ಯಶಸ್ಸು

ಹರ್ಯಾಣದಲ್ಲಿ ಬಿಜೆಪಿಯ ಯಶಸ್ಸು ಅನಿರೀಕ್ಷಿತವಾದುದು. ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಮೇಲುಗೈ ಹೊಂದಿದೆ ಎಂದು ವ್ಯಾಪಕವಾಗಿ ಭಾವಿಸಲಾಗಿತ್ತು. ಹಾಗೂ ಎಲ್ಲಾ ಎಕ್ಸಿಟ್ ಪೋಲ್‌ಗಳು ಕಾಂಗ್ರೆಸ್ ಜಯಗಳಿಸುವುದೆಂದು ಭವಿಷ್ಯ ನುಡಿದಿದ್ದವು. ಆದರೆ, 48 ಸ್ಥಾನಗಳೊಂದಿಗೆ ಬಹುಮತ ಪಡೆಯಲು ಬಿಜೆಪಿಗೆ ಸಾಧ್ಯವಾಗಿದೆ. ಕಾಂಗ್ರೆಸ್ 37 ಕ್ಷೇತ್ರಗಳಲ್ಲಿ ಗೆದ್ದಿದೆ. ಬಿಜೆಪಿ ಗಳಿಸಿದ ಮತದ ಪಾಲು 39.9 ಶೇಕಡಾ ಆಗಿದ್ದು ಕಾಂಗ್ರೆಸ್ ಮತ್ತದರ ಮಿತ್ರ ಪಕ್ಷಗಳು 39.3 ಶೇಕಡ ಮತ ಪಡೆದಿವೆ. ಅಂದರೆ ವ್ಯತ್ಯಾಸ ಕೇವಲ 0.6 ಶೇಕಡಾ ಆಗಿದೆ. ಆಪ್ ಮತ್ತು ಸಮಾಜವಾದಿ ಪಕ್ಷಗಳೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ಕಾಂಗ್ರೆಸ್ ವಿಫಲವಾಗಿರುವುದು ಈ ಸಂದರ್ಭದಲ್ಲಿ ಪ್ರಸ್ತುತವಾಗುತ್ತದೆ. ಯಾಕೆಂದರೆ, ಆಪ್ 1.8 ಶೇಕಡ ಮತಗಳನ್ನು ಗಳಿಸಿದೆ. ಜಾತಿ ಬೆಂಬಲದಲ್ಲಿ ಜಾಟೇತರ ಮೈತ್ರಿಯನ್ನು ಉಳಿಸಿಕೊಳ್ಳುವುದು ಬಿಜೆಪಿಗೆ ಸಾಧ್ಯವಾಗಿದೆ ಎಂದು ಕಾಣುತ್ತದೆ. ಭೂಪಿಂದರ್ ಸಿಂಗ್ ಹೂಡಾ ಪುನಃ ಜಾಟ್ ಇಮೇಜನ್ನು ಪ್ರದರ್ಶಿಸಿದ್ದರಿಂದ ಹೆಚ್ಚು ಜನರನ್ನು ತಲುಪಲು ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ. ಗುಂಪುಗಾರಿಕೆ, ಬಣ–ಜಗಳ ಕೂಡ ಕಾಂಗ್ರೆಸ್ ಬಡವಾಗಲು ಕಾರಣವಾಗಿದೆ. ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡಿದ ಬೆಜೆಪಿ ಮತ್ತು ಆರೆಸ್ಸೆಸ್‌ನ ವ್ಯವಸ್ಥಿತ ಕೋಮುವಾದಿ ಪ್ರಚಾರವನ್ನು ಸಮರ್ಥವಾಗಿ ಎದುರಿಸಲು, ಉತ್ತರಿಸಲು ಕೂಡ ಕಾಂಗ್ರೆಸ್ ವಿಫಲವಾಗಿರುವುದನ್ನು ಹೆಚ್ಚಿನವರು ಗಮನಿಸಿಲ್ಲ.

ಹರ್ಯಾಣದಲ್ಲಿ ಬಿಜೆಪಿಯ ಗೆಲವು, ನಿಸ್ಸಂಶಯವಾಗಿಯೂ ಹಿಂದೂತ್ವ ಶಕ್ತಿಗಳಿಗೆ ಉತ್ತೇಜನ ನೀಡುತ್ತದೆ. ಲೋಕಸಭೆಯಲ್ಲಿ ಬಹುಮತ ಗಳಿಸಲು ಬಿಜೆಪಿ ವಿಫಲವಾದರೂ ಅದು ಕ್ರೋಡೀಕರಿಸಿರುವ ಮತದಾರರ ಹಿಂದೂತ್ವ ಬ್ಲಾಕ್‌ನ ಶಕ್ತಿಯನ್ನು ಅಲಕ್ಷಿಸಬಾರದೆಂದು ಲೋಕಸಭೆ ಚುನಾವಣೆಯ ನಂತರ ಸಿಪಿಐ(ಎಂ) ಎಚ್ಚರಿಸಿತ್ತು. ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳು, ಬಿಜೆಪಿ–ಆರೆಸ್ಸೆಸ್ ಸಿದ್ಧಾಂತ ಮತ್ತು ರಾಜಕೀಯದ ವಿರುದ್ಧ ಸತತ ಹೋರಾಟಗಳನ್ನು ನಡೆಸುವ ಸಂಕಲ್ಪವನ್ನು ಬಲಪಡಿಸುವುದು ಅಗತ್ಯ ಎನ್ನುವುದನ್ನು ಹರ್ಯಾಣ ಚುನಾವಣಾ ಫಲಿತಾಂಶ ತೋರಿಸಿಕೊಟ್ಟಿದೆ.

ಅನು: ವಿಶ್ವ

1975ರಲ್ಲಿ ಸಿಪಿಐ(ಎಂ) ಸೇರಿದರು.

ಅವರ ರಾಜಕೀಯ ಚಟುವಟಿಕೆಗಳಿಗಾಗಿ ತುರ್ತುಪರಿಸ್ಥಿತಿಯ ಸಮಯದಲ್ಲಿ ಅವರನ್ನು ಬಂಧಿಸಲಾಯಿತು. ಅವರು 1985ರಲ್ಲಿ ಪಕ್ಷದ 12ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು ಮತ್ತು ಅವರು ಜೀವಿತಾವಧಿಯ ಕೊನೆಯವರೆಗೆ ಕೇಂದ್ರ ಸಮಿತಿ ಸದಸ್ಯರಾಗಿದ್ದರು. 1989ರಲ್ಲಿ ಕೇಂದ್ರ ಸೆಕ್ರೆಟೇರಿಯೆಟ್ ಸದಸ್ಯರಾಗಿ ಮತ್ತು 1992ರಲ್ಲಿ ಪಕ್ಷದ 14ನೇ ಮಹಾಧಿವೇಶನದಲ್ಲಿ ಪಾಲಿಟ್ ಬ್ಯೂರೋಗೆ ಆಯ್ಕೆಯಾದರು. 2015ರಲ್ಲಿ ನಡೆದ 21ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು, ಈ ಸ್ಥಾನವನ್ನು ಅವರು ತಮ್ಮ ಕೊನೆಯವರೆಗೂ ಮುಂದುವರೆಸಿದರು.

ಮೂರು ದಶಕಗಳ ಕಾಲ ಸಿಪಿಐ(ಎಂ)ನ ಅಖಿಲ ಭಾರತ ಕೇಂದ್ರದಲ್ಲಿ ನಾಯಕತ್ವದ ತಂಡದ ಭಾಗವಾಗಿ, ಪಕ್ಷದ ರಾಜಕೀಯ ನಿಲುವುಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸೈದ್ಧಾಂತಿಕ ವಿಷಯಗಳಲ್ಲಿ ಸೀತಾರಾಮ್ ಅವರು ವಿಶಿಷ್ಟ ಪಾತ್ರವನ್ನು ನಿರ್ವಹಿಸಿದರು. ಜಾಗತಿಕವಾಗಿ ಸಮಾಜವಾದಕ್ಕೆ ಹಿನ್ನಡೆಯಾಗಿ ಸೋವಿಯತ್ ಯೂನಿಯನ್ ಕುಸಿತವಾದ ಕಾಲಘಟ್ಟದಲ್ಲಿ, ಸಿಪಿಐ(ಎಂ) ತನ್ನ 14ನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ "ಕೆಲವು ಸೈದ್ಧಾಂತಿಕ ವಿಷಯಗಳ ಕುರಿತು" ನಿರ್ಣಯವನ್ನು ಕಾಂ.ಸೀತಾರಾಮ್ ಮಂಡಿಸಿದ್ದರು. ತರುವಾಯ, ಅವರು 2012ರಲ್ಲಿ ಪಕ್ಷದ 20ನೇ ಮಹಾಧಿವೇಶನದಲ್ಲಿ ಅಳವಡಿಸಿಕೊಂಡ ಸೈದ್ಧಾಂತಿಕ ನಿಲುವುಗಳ ನವೀಕರಿಸಿದ ನಿರ್ಣಯದ ಪ್ರಧಾನ ಮಂಡಕರಾಗಿದ್ದರು.

ಸಿಪಿಐ(ಎಂ) ಕೇಂದ್ರ ಸಮಿತಿಯ ಅಂತರರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾಗಿ ಕಮ್ಯುನಿಸ್ಟ್ ಮತ್ತು ಪ್ರಗತಿಪರ ಶಕ್ತಿಗಳ ಅಂತರರಾಷ್ಟ್ರೀಯ ವೇದಿಕೆಗಳು ಮತ್ತು ಸಮಾಜವಾದಿ ದೇಶಗಳೊಂದಿಗೆ ಸಂಬಂಧಗಳನ್ನು ಬಲಪಡಿಸುವುದು ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಗಳೊಂದಿಗೆ ಒಗ್ಗಟ್ಟು ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೀತಾರಾಮ್ ಯೆಚೂರಿ ಅವರು ಎರಡು ದಶಕಗಳ ಕಾಲ ಸಿಪಿಎಂನ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕರಾಗಿದ್ದರು. ಅವರು ಸಮೃದ್ಧ ಬರಹಗಾರರಾಗಿದ್ದರು. ಸೈದ್ಧಾಂತಿಕ ಕ್ಷೇತ್ರದಲ್ಲಿ ಅವರ ಇನ್ನೊಂದು ಮುಖ್ಯ ಕೊಡುಗೆಯೆಂದರೆ, ಸಂಘಪರಿವಾರದ ಕೋಮುವಾದಿ ಹಿಂದುತ್ವ ಸಿದ್ಧಾಂತವನ್ನು ಸ್ಪಷ್ಟವಾಗಿ ಬಯಲು ಮಾಡಿದ 'ಏನಿದು ಹಿಂದೂ ರಾಷ್ಟ್ರ?' ಎಂಬ ಕೃತಿ. ಇದಲ್ಲದೆ ಅವರ ಮತ್ತೊಂದು ಕೃತಿ 'ಕೋಮುವಾದ V/S ಸೆಕ್ಯುಲರಿಸಂ'. ಇವಲ್ಲದೆ ಅವರು ಹಲವು ಪತ್ರಿಕೆಗಳಿಗೆ ನಿರಂತರ ಲೇಖನಗಳನ್ನು ಬರೆಯುತ್ತಿದ್ದರು. ದೇಶಾದ್ಯಂತ ಉಪನ್ಯಾಸಗಳ ಮೂಲಕ ಲಕ್ಷಾಂತರ ಜನರಿಗೆ



ಮಾರ್ಗದರ್ಶನವನ್ನು ನೀಡಿದರು.

ಯೆಚೂರಿ ಅವರು 2005ರಿಂದ 2017ರವರೆಗೆ ಎರಡು ಅವಧಿಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಅವರು ಸಿಪಿಐ(ಎಂ) ಗುಂಪಿನ ನಾಯಕರಾಗಿ ಸೇವೆ ಸಲ್ಲಿಸಿದರು ಮತ್ತು ಪರಿಣಾಮಕಾರಿ ಸಂಸತ್ತಿನ ಸದಸ್ಯರಾಗಿದ್ದರು. ಅವರಿಗೆ 2017ರಲ್ಲಿ ಅತ್ಯುತ್ತಮ ಸಂಸದೀಯ ಪಟು ಪ್ರಶಸ್ತಿಯನ್ನು ನೀಡಲಾಯಿತು.

ಇತ್ತೀಚಿನ ಅವಧಿಯಲ್ಲಿ, ಯೆಚೂರಿ ಅವರು I.N.D.I.A. ದ ಸ್ವರೂಪವನ್ನು ಪಡೆದುಕೊಂಡ ಜಾತ್ಯತೀತ ವಿರೋಧ ಪಕ್ಷಗಳ ವಿಶಾಲವಾದ ಐಕ್ಯತೆಯನ್ನು ರೂಪಿಸುವ ಕಡೆಗೆ ತಮ್ಮ ಹೆಚ್ಚಿನ ಸಮಯ ಮತ್ತು ಶಕ್ತಿಯನ್ನು ವಿನಿಯೋಗಿಸಿದರು. ಯುನೈಟೆಡ್ ಫ್ರಂಟ್ ಸರ್ಕಾರ ಮತ್ತು ನಂತರದ ಯುಪಿಎ ಸರ್ಕಾರದ ಎರಡೂ ಅವಧಿಯಲ್ಲಿ, ಸೀತಾರಾಮ್ ಅವರು ಈ ಒಕ್ಕೂಟಗಳನ್ನು ಬೆಂಬಲಿಸುತ್ತಿದ್ದ ಸಿಪಿಐ(ಎಂ)ನ ಪ್ರಮುಖ ಸಂವಾದಕರಲ್ಲಿ ಒಬ್ಬರಾಗಿದ್ದರು.

'ನಿರ್ದಿಷ್ಟ ಪರಿಸ್ಥಿತಿಗಳ ನಿರ್ದಿಷ್ಟ ವಿಶ್ಲೇಷಣೆ' ಎಂಬ ಮಾರ್ಕ್ಸ್‌ವಾದಿ ಕಣ್ಣೋಟವನ್ನು ಭಾರತೀಯ ಸನ್ನಿವೇಶಗಳಿಗೆ ಅನ್ವಯಿಸುವ ಸ್ಪಷ್ಟತೆಯನ್ನು ಹೊಂದಿದ್ದರು. ಭಾರತದಲ್ಲಿ ವರ್ಗ ಹೋರಾಟದ ಜೊತೆಯಲ್ಲೇ ಜಾತಿ ಅಸಮಾನತೆ ವಿರೋಧಿ ಹೋರಾಟವನ್ನು ನಡೆಸಬೇಕೆಂಬ ತಿಳುವಳಿಕೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಯೆಚೂರಿ ಅವರು ಸಾಹಿತ್ಯ, ಚರಿತ್ರೆ, ರಾಜಕೀಯ ಅರ್ಥಶಾಸ್ತ್ರ, ಸಿನಿಮಾ, ಕಲೆ, ವಿಜ್ಞಾನ, ತಂತ್ರಜ್ಞಾನ, ಹೀಗೆ, ವಿವಿಧ ಕ್ಷೇತ್ರಗಳಲ್ಲಿ ಆಳವಾದ ತಿಳುವಳಿಕೆ ಹೊಂದಿದ್ದರು ಮತ್ತು ಇವೆಲ್ಲವನ್ನೂ ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ಜನರಿಗೆ ಸರಳವಾಗಿ ಸಂವಹನ ಮಾಡುತ್ತಿದ್ದರು. ಮಾರ್ಕ್ಸ್‌ವಾದಕ್ಕೆ ಯೆಚೂರಿಯವರ ಬದ್ಧತೆ ಅನನ್ಯವಾದುದು.

ಜಗತ್ತಿನ ವಿವಿದೆಡೆಯ ವಿಮೋಚನಾ ಚಳುವಳಿಗಳ ಆಪ್ತ ಸಂಗಾತಿಯಾಗಿದ್ದರು. ಅವರು ಸ್ನೇಹಶೀಲ ಮನೋಧರ್ಮವನ್ನು ಹೊಂದಿದ್ದರು. ರಾಜಕೀಯ ವಲಯದಲ್ಲಿ ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸ್ನೇಹಿತರ ವಿಶಾಲ ವಲಯವನ್ನು ಹೊಂದಿದ್ದರು. ಅವರ ರಾಜಕೀಯ ಸಮಗ್ರತೆ ಮತ್ತು ಬದ್ಧತೆಗಾಗಿ ಅವರು ಎಲ್ಲರಿಂದ ಗೌರವಿಸಲ್ಪಟ್ಟರು.

ಸೀತಾರಾಮ್ ಯೆಚೂರಿ ಅವರಿಗೆ ಕರ್ನಾಟಕದ ಜೊತೆ ಆತ್ಮೀಯ ಸಂಬಂಧವಿತ್ತು. ಕರ್ನಾಟಕದ ಸಿನಿರಂಗದ ಕುಟುಂಬವೊಂದರ ಜೊತೆ ವೈವಾಹಿಕ ಸಂಬಂಧ ಇತ್ತು. ರಾಜ್ಯದಲ್ಲಿ ನಡೆದ ಹಲವಾರು ಹೋರಾಟಗಳಲ್ಲಿ ಅವರು ನೇರವಾಗಿ ಭಾಗವಹಿಸಿದ್ದರು. ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶವಿಲ್ಲ ಎಂಬುದನ್ನು ವಿರೋಧಿಸಿ ನಡೆದ ಹೋರಾಟದಲ್ಲಿ ಹಾಸನದ ಸಿಗರನಹಳ್ಳಿಗೆ ಭೇಟಿ ನೀಡಿದ್ದರು. ಆದಿವಾಸಿ ಮಲೆಕುಡಿಯರ ಮೇಲೆ ದೌರ್ಜನ್ಯ ನಡೆದಾಗ ಭೇಟಿ ನೀಡಿದ್ದರು. ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳ ವಿರುದ್ಧ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ದೇಶದ ಆರ್ಥಿಕ ಸ್ವಾವಲಂಬನೆ ಮತ್ತು ಸಾರ್ವಭೌಮತ್ವ, ಒಕ್ಕೂಟ ತತ್ವದ ರಕ್ಷಣೆ, ಧರ್ಮ ನಿರಪೇಕ್ಷತೆಯ ರಕ್ಷಣೆಗಾಗಿನ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಹೀಗಾಗಿ ಕರ್ನಾಟಕದ ಜನತೆಗೆ ಸೀತಾರಾಂ ಚಿರಪರಿಚಿತರೇ ಆಗಿದ್ದರು.

ನಮ್ಮ ರಾಷ್ಟ್ರ ರಾಜಕೀಯದ ಈ ನಿರ್ಣಾಯಕ ಹಂತದಲ್ಲಿ ಸೀತಾರಾಮ್ ಯೆಚೂರಿಯವರ ಅಕಾಲಿಕ ನಿಧನವು ಸಿಪಿಐ(ಎಂ) ಪಕ್ಷಕ್ಕೆ ಮಾತ್ರವಲ್ಲದೆ, ಎಡಪಕ್ಷಗಳಿಗೆ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳಿಗೆ ನಷ್ಟವಾಗಿದೆ. ಈ ಸಭೆಯು ಅವರಿಗೆ ಗೌರವವನ್ನು ಸಲ್ಲಿಸುತ್ತದೆ. ಶೋಷಣೆ–ಮುಕ್ತ ಸಮಾಜಕ್ಕಾಗಿ ಹೋರಾಟವನ್ನು ಮುನ್ನಡೆಸಲು, ಭಾರತವೆಂಬ ಬಹುತ್ವದ ಶಕ್ತಿಗಳನ್ನು ಒಗ್ಗೂಡಿಸಲು ಮತ್ತು ಅದಕ್ಕಾಗಿ ಶ್ರಮಿಸಲು ಕರೆ ನೀಡುತ್ತದೆ. ಇದು ಅವರಿಗೆ ಸಲ್ಲಿಸಬಹುದಾದ ಅತ್ಯುತ್ತಮ ಗೌರವವಾಗಿದೆ.

ಈ ಸಭೆಯು ಸೀತಾರಾಂ ಯೆಚೂರಿ ಅವರ ಪತ್ನಿ ಸೀಮಾ, ಅವರ ಮಗಳು ಅಖಿಲಾ, ಮಗ ಡ್ಯಾನಿಶ್, ಸಹೋದರ ಶಂಕರ್ ಮತ್ತು ಕುಟುಂಬದ ಇತರ ಎಲ್ಲ ಸದಸ್ಯರಿಗೆ ತನ್ನ ಆಳವಾದ ಸಹಾನುಭೂತಿ ಮತ್ತು ಸಂತಾಪವನ್ನು ತಿಳಿಸುತ್ತದೆ. ಮತ್ತು ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸುತ್ತದೆ.





ಸಂಘಗಳನ್ನು ಕಟ್ಟಿಕೊಳ್ಳಲು ಇರುವ ಸಾಂವಿಧಾನಿಕ ಹಕ್ಕುಗಳಿಗಾಗಿ ಸ್ಯಾಮ್ ಸಂಗ್ ಕಾರ್ಮಿಕರ ಹೋರಾಟ: ನಮ್ಮ ಮುಖ್ಯ ಬೇಡಿಕೆ ಯೂನಿಯನನ್ನು ಮಾನ್ಯ ಮಾಡಬೇಕು ಎನ್ನುವುದು:

ಎ.ಸೌಂದರರಾಜನ್
(ಸಿಐಟಿಯು ನಾಯಕರ ಸಂದರ್ಶನ)

ಅಕ್ಟೋಬರ್ 7 ರಂದು ಸಚಿವರುಗಳಾದ ಟಿ.ಆರ್.ಬಿ.ರಾಜಾ–ತಮಿಳುನಾಡು ಕೈಗಾರಿಕಾ ಸಚಿವರು, ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳ ಸಚಿವ ಟಿ.ಎಂ.ಅಂಬರಸನ್ ಮತ್ತು ಕಾರ್ಮಿಕ ಸಚಿವ ಸಿ ವಿ ಗಣೇಶನ್ ಅವರು ಒಂದು ಹೇಳಿಕೆ ನೀಡಿ ಸ್ಯಾಮ್‌ಸಂಗ್ ಕಾರ್ಮಿಕರು ಮತ್ತು ಆಡಳಿತ ಮಂಡಳಿ ನಡುವೆ ಒಪ್ಪಂದವಾಗಿದೆ ಎಂದು ಪ್ರಕಟಿಸಿದರು.

ಕುತೂಹಲಕರ ಸಂಗತಿಯೆಂದರೆ ರಾಜ್ಯ ಸರ್ಕಾರದ ಒಪ್ಪಂದದ ಜ್ಞಾಪಕ ಪತ್ರದಲ್ಲಿ ಮುಷ್ಕರವನ್ನು "ಕಾನೂನುಬಾಹಿರ" ಎಂದು ಹೇಳಲಾಗಿದೆ. ನಿಜಸ್ಥಿತಿ ಏನೆಂದರೆ, ಆಗಸ್ಟ್ 19ರಂದೇ ಎಸ್.ಐ.ಡಬ್ಲ್ಯು.ಯು. ಮುಷ್ಕರದ ನೋಟೀಸನ್ನು ಸ್ಯಾಮ್‌ಸಂಗ್ ಇಂಡಿಯಾ ಎಲೆಕ್ಟ್ರಾನಿಕ್ಸ್ ಕಾರ್ಯಕಾರಿ ನಿರ್ವಾಹಕ ಹಾಗೂ ಆಡಳಿತ ಮಂಡಳಿಗೆ ಕಳಿಸಿದೆ. ಕಾನೂನು ರೀತ್ಯ ಮುಷ್ಕರದ 14 ದಿನಗಳ ಮುಂಚೆ ನೋಟಿಸ್ ನೀಡಬೇಕೆಂಬ ನಿಯಮಕ್ಕೆ ಅನುಸಾರವಾಗಿ ನೋಟೀಸ್ ನೀಡಿದೆ.

ಸರ್ಕಾರದ ಎದುರು ಸ್ಯಾಮ್‌ಸಂಗ್ ಆಡಳಿತ ಮಂಡಳಿ ಮತ್ತು 'ಕಾರ್ಮಿಕರ ಪ್ರತಿನಿಧಿಗಳು' ಸಹಿ ಮಾಡಲಾಗಿದೆ ಎಂಬ ಪತ್ರದಲ್ಲಿ ಸಹಿಮಾಡಿರುವವರು, ಮುಷ್ಕರದಲ್ಲಿ ಭಾಗವಹಿಸದ ಮತ್ತು ಸಂಘದ ಸದಸ್ಯರಲ್ಲದ ಕಾರ್ಮಿಕರಾಗಿದ್ದಾರೆ ಎಂದು ತಮಿಳುನಾಡು ಸಿಐಟಿಯುನ ಕಾರ್ಯದರ್ಶಿ ಎ.ಸೌಂದರರಾಜನ್ ಹೇಳುತ್ತಾರೆ. ಆ ಒಪ್ಪಂದ ಕುರಿತು ಮಾತನಾಡಿದ ಸಚಿವರು ತಾವೇ ಸ್ಯಾಮ್‌ಸಂಗ್ ಕಂಪನಿಯ ವಕ್ತಾರರಂತೆ ವರ್ತಿಸಿದರು ಎಂದು ಸೌಂದರರಾಜನ್ ತಿಳಿಸಿದರು.

ಸಂದರ್ಶನದ ವಿವರ ಹೀಗಿದೆ:

ಸ್ಯಾಮ್‌ಸಂಗ್ ಕಂಪನಿಯಲ್ಲಿ ಸಂಘವನ್ನು ಹೇಗೆ ರಚಿಸಲಾಯಿತು?

ಸಿಐಟಿಯುನವರು ಪ್ರಚೋದನೆ ನೀಡಿ ಸಂಘವನ್ನು ಕಟ್ಟಿ ತಮ್ಮ ನಾಯಕತ್ವವನ್ನು ಕಾರ್ಮಿಕರ ಮೇಲೆ ಹೇರಿದರು ಎಂದು ಹೇಳುಲಾಗುತ್ತಿದೆ. ಅದರೆ ಸತ್ಯ ಸಂಗತಿಯೆಂದರೆ, ಸಂಘದ ಅಗತ್ಯವಿದೆಯೆಂದು ಕಾರ್ಮಿಕರು ಬಯಸಬೇಕು. ಕಾರ್ಮಿಕರು ಸಂಘ ರಚಿಸಿದರು, ಸಿಐಟಿಯುಗೆ ನೋಂದಾವಣೆ ಮಾಡಿಕೊಂಡು ನಮ್ಮನ್ನು ನಾಯಕತ್ವಕ್ಕೆ ಆಹ್ವಾನಿಸಿದರು. ಆ ರೀತಿಯಲ್ಲಿ ನಾವು ಅವರ ಚಟುವಟಿಕೆಯಲ್ಲಿ ತೊಡಗಿಕೊಂಡೆವು. ಆದರೆ ರಾಜ್ಯ ಸರ್ಕಾರವು ಇದನ್ನು ತಪ್ಪಾಗಿ ಅರ್ಥೈಸುತ್ತಿದೆ. ಕಾರ್ಮಿಕರು ಕುರಿಗಳಲ್ಲ. ಮುಷ್ಕರ ಮಾಡಿದರೆ ತಮ್ಮ ಸಂಬಳ ಕಡಿತ ಮಾಡುತ್ತಾರೆ ಎನ್ನುವುದು ಅವರಿಗೆ ಗೊತ್ತಿದೆ. ಪೊಲೀಸರನ್ನು ಎದುರಿಸಬೇಕಾಗುತ್ತದೆ ಮತ್ತು ಕೆಲಸದಿಂದ ವಜಾ ಕೂಡ ಮಾಡಿಯಾರು ಎನ್ನುವ ವಾಸ್ತವ ಅವರ ಅರಿವಿಗಿದೆ.

ಶ್ರೀಪೆರಂಬುದೂರಿನಲ್ಲಿ ಸ್ಯಾಮ್‌ಸಂಗ್ ಕಾರ್ಖಾನೆ ಇರುವ ಸುತ್ತಮುತ್ತಲೂ ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘಗಳಿವೆ. ಈ ಸಂಘವನ್ನು ರಚಿಸುವಾಗ ಯಾವ ಹೊಸ ಸವಾಲುಗಳು ಎದುರಾದವು? ಕಾರ್ಮಿಕರ ಮುಷ್ಕರಕ್ಕೆ ಸರ್ಕಾರ ಹೇಗೆ ಪ್ರತಿಕ್ರಿಯಿಸಿದೆ?

ಉಳಿದೆಡೆಯಂತೆ ಇಲ್ಲೂ ಕೂಡ ನಾವು ಅವೇ ಸಮಸ್ಯೆಗಳನ್ನು ಎದುರಿಸಿದೆವು; ಸಿಐಟಿಯು, 'ಹೊರಗಿನವರು' ಎಂದು ಸಂಘಗಳನ್ನು ಕಟ್ಟಲು ಅವಕಾಶ ನೀಡಲಿಲ್ಲ. 'ಸಂಘಗಳು ಬೇಡ ಎನ್ನುವ ನೀತಿ' ಸ್ಯಾಮ್‌ಸಂಗ್ ಕಂಪನಿಯದು ಎಂಬ ಸಂಗತಿ ಜಗತ್ತಿನೆಲ್ಲಡೆ ಗೊತ್ತಿರುವುದೇ ಆಗಿದೆ. ಅವರು ದಕ್ಷಿಣ ಕೊರಿಯಾದಲ್ಲಿ ಒಂದು ಮುಷ್ಕರವನ್ನು ಮುರಿಯಲು ಯತ್ನಿಸಿದರು. ಆದರೆ ಅಲ್ಲಿನ ಕಾರ್ಮಿಕರು ಮೇಲುಗೈ ಸಾಧಿಸಿದರು ಮತ್ತು ಸಂಘವನ್ನು ಕಟ್ಟಿದರು. ಭಾರತದಲ್ಲಿ ನೋಯ್ಡಾ ಮತ್ತು ಚನ್ನೈನಲ್ಲಿ ಸ್ಯಾಮ್‌ಸಂಗ್ ತಮ್ಮ ಘಟಕಗಳನ್ನು ಹೊಂದಿದೆ. ಅವರು ಇಲ್ಲಿ ಸಂಘವನ್ನು ತಡೆಯಲು ನಿರ್ಧರಿಸಿದ್ದಾರೆ ಮತ್ತು ಆ ನಿಟ್ಟಿನಲ್ಲಿ ಆಕ್ರಮಣಕಾರಿ ವಿಧಾನಗಳನ್ನು ಅನುಸರಿಸುತ್ತಿದ್ದಾರೆ.

ಸಂಘದಲ್ಲಿ ತಮ್ಮ ಕಂಪನಿಯ ಹೆಸರು ಇರಬಾರದು ಮತ್ತು ಎಸ್.ಐ.ಡಬ್ಲ್ಯು.ಯು. ನ ಅಧ್ಯಕ್ಷರು ಕಾರ್ಮಿಕರಲ್ಲ ಎಂದು ಸ್ಯಾಮ್‌ಸಂಗ್ ಕಂಪನಿಯವರು ತಕರಾರೆತ್ತಿದ್ದಾರಲ್ಲ?

ಕೆಲವನ್ನು ಹೊರತುಪಡಿಸಿ, ದೇಶಾದ್ಯಂತ ಬಹುತೇಕ ಸಂಘಗಳು ಕಂಪನಿಯ ಹೆಸರನ್ನು ಬಳಸುತ್ತವೆ. ಕಂಪನಿಗಳು ಹೊಚ್ಚ ಮಾಲೀಕತ್ವದ ಹಕ್ಕು ಸಾಧಿಸಬಹುದು, ಆದರೆ ಪೂರ್ವನಿದರ್ಶನಗಳಿವೆ. ಕರ್ನಾಟಕದಲ್ಲಿ ತಮ್ಮ ನೌಕರರು ಎಸ್‌ಬಿಐ ಹೆಸರು ಬಳಸುವುದಕ್ಕೆ ಆಕ್ಷೇಪವೆತ್ತಿದರು. ಆದರೆ ನ್ಯಾಯಾಲಯ ಅವರ ತಕರಾರನ್ನು ತಳ್ಳಿಹಾಕಿ ನೌಕರರ ಪರವಾಗಿ ತೀರ್ಪು ನೀಡಿದೆ. ನೌಕರರೇನು ನಿಮ್ಮ ಜತೆ ಪೈಪೋಟಿ ನಡೆಸುತ್ತಾರೆಯೇ ಎಂದು ಪ್ರಶ್ನಿಸಿತು. ನಾವು ಈ ಪ್ರಕರಣವನ್ನು ಉದಾಹರಿಸಿದೆವು. ಅದೇ ಬಹುಮುಖ್ಯ ವಿಷಯ ಎನ್ನುವುದಾದರೆ, ನಾವು 'ಶ್ರೀಪೆರಂಬುದೂರು ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್ ಯೂನಿಯನ್' ಎಂದು ಬದಲಾಯಿಸಲು ಸಿದ್ಧರಿದ್ದೇವೆ. ಅದು ನಮಗೆ ಪ್ರತಿಷ್ಠೆಯ ವಿಷಯವಲ್ಲ.

ಸ್ಯಾಮ್ ಸಂಗ್ ಕಂಪನಿಯು ತಮ್ಮ ಆಕ್ರಮಣಕಾರಿ ವಿಧಾನಗಳಿಂದ ಸಂಘಗಳನ್ನು ತಡೆಯಲು ತೀರ್ಮಾನಿಸಿದೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎ. ಸೌಂದರರಾಜನ್ ಹೇಳುತ್ತಾರೆ.
ದಿ ಸ್ಯಾಮ್‌ಸಂಗ್ ಇಂಡಿಯಾ ವರ್ಕರ್ಸ್ ಯುನಿಯನ್ (ಎಸ್.ಐ.ಡಬ್ಲ್ಯು.ಯು.) ಅಡಿಯಲ್ಲಿರುವ ದಿ ಸ್ಯಾಮ್‌ಸಂಗ್ ಇಂಡಿಯಾ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಮುಷ್ಕರ ಪ್ರಾರಂಭ ಮಾಡಿ ಅಕ್ಟೋಬರ್ 8 ಕ್ಕೆ 30 ದಿನಗಳಾದವು. ಸಂಘವನ್ನು ರಿಜಿಸ್ಟರ್ ಮಾಡಿ ಮಾನ್ಯತೆ ನೀಡಬೇಕು ಎನ್ನುವುದು ಅವರ ಪ್ರಮುಖ ಹಕ್ಕೊತ್ತಾಯವಾಗಿದೆ.

ಇನ್ನು, ಸಂಘಗಳಲ್ಲಿ 'ಹೊರಗಿನವರು' ಎನ್ನುವ ಕುರಿತು 98 ವರ್ಷಗಳ ಹಿಂದಿನಿಂದ ಟ್ರೇಡ್ ಯೂನಿಯನ್ ಆಕ್ಟ್ (ಕಾರ್ಮಿಕ ಸಂಘ ಕಾಯಿದೆ) ಜಾರಿಯಾದಾಗಿನಿಂದ ಚರ್ಚೆ ನಡೆಯುತ್ತಾ ಬಂದಿದೆ. ಕಂಪನಿಗಳು ವೃತ್ತಿಪರರನ್ನು/ಕಾನೂನುಗಳಲ್ಲಿ ಪರಿಣಿತರಾದವರನ್ನು ಸಂಧಾನ ಮಾತುಕತೆಗಳ ಸಂದರ್ಭದಲ್ಲಿ ಬಳಸುತ್ತವೆ. ಅವರಿಗೆ ಸರಿಸಮನಾಗಿ ಹೆಚ್ಚು ವಿದ್ಯಾವಂತರಲ್ಲದ ಕಾರ್ಮಿಕರು ವಾದಮಂಡಿಸಲು ಸಾಧ್ಯವೆ? ಕಾರ್ಮಿಕ ವ್ಯವಹಾರಗಳಲ್ಲಿ ಹೆಚ್ಚು ತಿಳುವಳಿಕೆ ಇರುವವರನ್ನು ಕಾರ್ಮಿಕರು ಬಯಸಿದರೆ, ಕಂಪನಿಯವರು ಅವಕಾಶ ನೀಡಬೇಕಲ್ಲವೆ? ಹೊರಗಡೆಯವರು ಸಂಘದ ಪದಾಧಿಕಾರಿಗಳಾಗಿ ಮಾತುಕತೆಗಳಲ್ಲಿ ಉಪಸ್ಥಿತರಿರಬಹುದೆಂದು ಕಾರ್ಮಿಕ ಸಂಘಗಳ ಕಾಯಿದೆಯು ಅವಕಾಶ ನೀಡಿದೆ. (ಸಂಘದ ಪದಾಧಿಕಾರಿಗಳಲ್ಲಿ ಹೊರಗಿನವರು ಅರ್ಧದಷ್ಟಿರಬಹುದೆಂದು ಕಾಯಿದೆ ಹೇಳುತ್ತದೆ.) ಹಾಗಾಗಿ, ಕಾರ್ಮಿಕರು ಬಯಸುವಷ್ಟು ಕಾಲ ನಾವು ಅವರ ಸಂಘದಲ್ಲಿ ಇರುತ್ತೇವೆ.

ಒಕ್ಕೂಟ ಸರ್ಕಾರವು 29 ಕಾರ್ಮಿಕ ಕಾನೂನುಗಳನ್ನು 4 ಕಾರ್ಮಿಕ ಸಂಹಿತೆಗಳನ್ನಾಗಿ ಕ್ರೋಢೀಕರಿಸಿದೆ. ಇದು "ಹಕ್ಕುಗಳ ಬಗ್ಗೆ ಇರುವ ರಕ್ಷಣಾತ್ಮಕ ಅಂಶಗಳನ್ನು ತೆಗೆದುಹಾಕುತ್ತದೆ" ಎಂದು ಸಿಐಟಿಯು ಅಭಿಪ್ರಾಯಪಡುತ್ತದೆ. ಇದು ಕಾರ್ಮಿಕ ಚಳವಳಿಯ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು?

ಒಂದು ಉದಾಹರಣೆ ತೆಗೆದುಕೊಳ್ಳೋಣ. ಪ್ರಸ್ತುತ 100ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳು ಮುಚ್ಚಬೇಕೆಂದರೆ, ಲೇಆಫ್ ಮಾಡಬೇಕೆಂದರೆ, ಅಥವಾ ಕೆಲಸದಿಂದ ತೆಗೆದುಹಾಕಬೇಕೆಂದರೆ ಕಾರ್ಮಿಕ ಇಲಾಖೆಯ ಅನುಮತಿ ಪಡೆಯಬೇಕು. ಪ್ರಧಾನಿ ನರೇಂದ್ರ ಮೋದಿಯವರ ಕೈಗಾರಿಕಾ ಸಂಬಂಧಗಳ ಸಂಹಿತೆಯು ಈ ಮಿತಿಯನ್ನು 300 ಕಾರ್ಮಿಕರಿಗೆ ಹೆಚ್ಚಿಸಿದೆ. ಶ್ರೀಪೆರಂಬುದೂರಿನಲ್ಲಿ ಕೇವಲ 100 ಕಂಪನಿಗಳು ಮಾತ್ರ ಈ ಮಿತಿಯನ್ನು ಮೀರುತ್ತವೆ. ಸಣ್ಣ ಪೂರೈಕೆದಾರರು ಕಾನೂನಿನ ಈ ಮಿತಿಯಿಂದ ಹೊರಗಿದ್ದು, ಮಾಲೀಕರನ್ನು ಯಾರೂ ತಡೆಯದಂತಾಗಿದೆ. 400 ಕಾರ್ಮಿಕರಿರುವ ಕಂಪನಿಯು 200ರ ಎರಡು ಕಂಪನಿಗಳಾಗಿ ಇಬ್ಭಾಗವಾಗಿ ಕಾನೂನಿನ ಚೌಕಟ್ಟಿನಿಂದ ಹೊರಗುಳಿಯಲು ಅವಕಾಶವಿದೆ. ಇದು ಅನ್ಯಾಯ.

ಹೌದಪ್ಪಗಳ ಸಮಿತಿಯೊಂದನ್ನು ರಚಿಸಲು ಸ್ಯಾಮ್‌ಸಂಗ್ ಆಡಳಿತ ಮಂಡಳಿಗೆ ಸರ್ಕಾರವು ಅವಕಾಶ ಮಾಡಿಕೊಡುವ ಮೂಲಕ, ಮಾಧ್ಯಮಗಳ ಮುಂದೆ ಸಂಧಾನದ ಒಪ್ಪಂದ ಎಂಬ ಭ್ರಮೆಗಳನ್ನು ಸೃಷ್ಟಿಸುತ್ತಿದೆ ಎಂದು ಎ.ಸೌಂದರರಾಜನ್ ಹೇಳುತ್ತಾರೆ.

ಸ್ಯಾಮ್‌ಸಂಗ್ ಕಾರ್ಮಿಕರ ಪ್ರತಿಭಟನೆಯು ತಮಿಳುನಾಡಿನ ಕಾರ್ಮಿಕರ ಚಳವಳಿಯಲ್ಲಿ ಯಾವ ಪಾತ್ರ ವಹಿಸುತ್ತದೆ?


ಸಂಘಗಳನ್ನು ಕಟ್ಟಿಕೊಳ್ಳಲು ಇರುವ ಸಾಂವಿಧಾನಿಕ ಹಕ್ಕುಗಳ ವಿಧಿ 19(1)ರ ಕುರಿತು ಈ ಮುಷ್ಕರ ನಡೆಯುತ್ತಿದೆ. ಅದು ಕೇವಲ ಸಂಬಳಕ್ಕಾಗಿ ಅಲ್ಲ, ಬದಲು ಸಾಮೂಹಿಕ ಚೌಕಾಶಿ ಹಕ್ಕುಗಳ ಬಗ್ಗೆ. ಮಾತುಕತೆ ನಡೆಸುವಾಗ ಸರ್ಕಾರದ ಮೂರು ಸಚಿವರು ಸ್ಯಾಮ್‌ಸಂಗ್ ಕಂಪನಿಯ ವಕ್ತಾರರಂತೆ ವರ್ತಿಸಿರುವುದು ನಮಗೆ ಆಘಾತ ಉಂಟುಮಾಡಿದೆ.

ಸಂಘಗಳ ನೋಂದಾವಣಿಯು ದಿನನಿತ್ಯದ ಕೆಲಸ, ಕಳೆದ ತಿಂಗಳು 25 ಸಂಘಗಳು ನೋಂದಾವಣೆಯಾಗಿವೆ. ಆದರೆ, ತಮಿಳುನಾಡು ಸರ್ಕಾರ ಹಾಗೂ ಕಾರ್ಮಿಕ ಇಲಾಖೆಯ ಮೇಲಿನ ಸ್ಯಾಮ್‌ಸಂಗ್ ಕಂಪನಿಯ ಒತ್ತಡವು, ಎಸ್.ಐ.ಡಬ್ಲ್ಯು.ಯು. ನೋಂದಾವಣೆಯನ್ನು ತಡೆಯುತ್ತಿದೆ. ನೋಂದಾವಣೆಯನ್ನು 45 ದಿನಗಳೊಳಗೆ ಮಾಡಬೇಕೆಂಬುದು ಕಡ್ಡಾಯ, ಆದರೆ ಅವರು ವಿಳಂಬ ಮಾಡುತ್ತಿದ್ದಾರೆ. 60 ದಿನಗಳ ನಂತರ ಆಕ್ಷೇಪಣೆ ಎತ್ತಲು ಸ್ಯಾಮ್‌ಸಂಗ್ ಕಂಪನಿಗೆ ಸರ್ಕಾರ ಹೇಳುತ್ತಿದೆ ಎಂಬುದು ನಮ್ಮ ಅನುಮಾನ. ಅದರೆ ಹಾಗೆ ಮಾಡಲು ಬಿಡಬಾರದು.

ಪುಟ 10 ಕ್ಕೆ

ರತನ್ ಟಾಟಾ ನಿಧನದ ಸಂದರ್ಭದಲ್ಲಿ

ಟಾಟಾ ಸಾಮ್ರಾಜ್ಯದ ಬೆಳವಣಿಗೆಗೆ ಬೆವರು, ರಕ್ತ ಸುರಿಸಿದ ಕೋಟ್ಯಾಂತರ ಜನರ ನೆನಪು



ಜಿ.ಎನ್. ನಾಗರಾಜ್



ಜೆಆರ್‌ಡಿ ಟಾಟಾ, ಜವಾಹರಲಾಲ್ ನೆಹರು, ಇಂದಿರಾ ಗಾಂಧಿ

ಸೀತಾರಾಮ್ ಯೆಚೂರಿ ಅವರು ಬಹಿರಂಗ ಸಭೆಗಳಲ್ಲಿ ಸಾಮಾನ್ಯವಾಗಿ ಒಂದು ಕತೆ ಹೇಳುತ್ತಿದ್ದರು. "ಒಬ್ಬರು ಇಡೀ ತಿಂಗಳು ದುಡಿದದ್ದರ ಸಂಬಳ ತೊಗೊಂಡು ಜೇಬಿನಲ್ಲಿಟ್ಟುಕೊಂಡು ಬಸ್ ಹತ್ತಿದರಂತೆ. ಬಸ್‌ನಲ್ಲಿ ವಿಪರೀತ ರಷ್ಷು. ರಷ್‌ನಲ್ಲೇ ನುಗ್ಗಿ ಒಂದು ಕಡೆ ನಿಂತ್ರು. ಸ್ವಲ್ಪ ಹೊತ್ತಿನ ನಂತ್ರ ಟಿಕೆಟ್ ಟಿಕೆಟ್ ಅಂತ ಬಸ್ ಕಂಡಕ್ಟ್ರು ಬಂದು. ಇವರು ಟಿಕೆಟ್ ದುಡ್ಡು ಕೊಡಲು ಜೇಬಿಗೆ ಕೈ ಹಾಕಿದ್ರು. ಆದರೆ ಅಲ್ಲಿ ದುಡ್ಡೇ ಇಲ್ಲ. ಎಲ್ಲ ಮಾಯ.

ಅವರಿಗೆ ಗಾಬರಿಯಾಯ್ತು. ಅಯ್ಯೋ ನನ್ನ ಸಂಬಳ ಯಾರೋ ಹೊಡೆದುಬಿಟ್ಟವ್ರೆ ಅಂತ ಕಿರುಚಿದರು. ಕಂಡಕ್ಟ್ರು ಎದ್ರುಗೆ ನಿಂತೇ ಇದಾರೆ. ಕಂಡಕ್ಟ್ರ ಹತ್ರ ಸಂಬಳ ಕಾಣೆಯಾಗಿರುವುದನ್ನು ಹೇಳಿದ್ರು. ಆದ್ರೆ ಅವರೇನು ಮಾಡೋಕೆ ಸಾಧ್ಯ. ಟಿಕೆಟ್ ತೊಗೊಳ್ಳಿ, ಇಲ್ಲ ಅಂದ್ರೆ ಇಳೀರಿ ಅಂದ್ರು. ಇವರು ಅಂಗಲಾಚಿದ್ರೂ ಕೇಳಲಿಲ್ಲ. ಇಂತಾ ನಾಟಕ ಭಾಳಾ ನೋಡಿದ್ದೀನಿ ಇಳೀರಿ ಅಂದ್ರು. ಇವರಿಗೆ ಏನು ಮಾಡೋದು ತೋಚಲಿಲ್ಲ. ಇಳಿಯೋಕೆ ಹೊರಟ್ರು. ಆಗ ಬಸ್ನಲ್ಲಿ ಇದ್ದವನೊಬ್ಬ "ಇರಿ ಕಂಡಕ್ಟ್ರೇ, ಅವರ ಟಿಕೆಟ್ ಎಷ್ಟಾಗುತ್ತೆ ಹೇಳಿ, ನಾನು ಕೊಡ್ತೀನಿ. ಅವರೇನ ಇಲ್ಲೇ ಇಳಿಸ್ದ್ರೆ ಏನು ಮಾಡ್ತಾರೆ, ದುಡ್ಡು ಕಳಕೊಂಡ್ರಂತೆ, ಮನೆ ಬೇರೆ ದೂರ ಇದೆ, ನಡಕೊಂಡು ಹೋಗೋಕಾದಾತಾ, ಅವರಿಗೆ ಟಿಕೆಟ್ ಕೊಡಿ "ಅಂತ ದುಡ್ಡು ಕೊಟ್ರು. ಇವರು ಮನೆಗಾದ್ರೂ ಸೇರ್ತೀನಲ್ಲ ಅಂತಾ ಸಮಾಧಾನ ಪಟ್ಕೊಂಡು, "ಸ್ವಾಮಿ ನೀವು ದೇವ್ರಂಗೆ ಸರಿಯಾದ ಸಮಯದಲ್ಲಿ ಸಹಾಯ ಮಾಡಿದ್ರಿ. ತುಂಬಾ ಉಪಕಾರವಾಯ್ತು. "ಅಂತಾ ದುಡ್ಡು ಕೊಟ್ಟವ್ರಿಗೆ ಕೈ ಮುಗಿದ್ರು. ಇಡೀ ಬಸ್ನಲ್ ಇದ್ದೋರೆಲ್ಲ, ದೇವ್ರಂತಾ ಮನಿಷ್ಯ ಅಂತಾ ಹೊಗಳಿದ್ರು.


ಆದ್ರೆ ಸಂಬ್ಳ ಕಳಕೊಂಡ ಇವ್ರ ಮನಸ್ಸು ಸುಮ್ನಿರ್ಬೇಕಲ್ಲ. ಸಂಬ್ಳ ಹೇಂಗೆ ಹೊಡೆದ್ರು, ಏನಾಯ್ತು ಅಂತಾ ಯೋಚನೆ ಮಾಡ್ತಾ, ಸಂಬ್ಳ ತಗೊಂಂಡು ತಮ್ಮ ಆಫೀಸಿಂದ ಹೊರಟಾಗಿಂದ ಇಲ್ಲೀವರೆಗೆ ಏನಾಯ್ತು ಅಂತ ಜ್ಞಾಪಿಸ್ಕೋತಾ ಅವ್ರೆ. ಆಗ ಅವರ ಹಿಂದೇನೇ ದೂರ್ದಲ್ ಒಬ್ಬ ಬತ್ತಾ ಇದ್ದ, ಬಸ್ ವರೆಗೂ ಬಂದಾ ಅಂತ ನೆಪ್ಪಿಗ್ ಬಂತು. ಅವನೇನೆ ನಾನು ಸಂಬ್ಳ ತಗೊಂಡಿದ್ ನೋಡಿ ಹಿಂದೆ ಬಿದ್ದಿದ್ದಾ ಅಂತಾ ಕಾಣುತ್ತೆ. ಬಸ್‌ನಲ್ಲಿ ರಷ್ನಲ್ಲಿ ಹೊಡ್ದು ಬಿಟ್ಟವ್ನೆ. ಯಾರಿರಬೋದು ಅಂತಾ ಅವರಿವ್ರ ಮುಖ ನೋಡ್ತಾ ನೆನಪಿಸ್ಕೋತ ಅವ್ರೆ. ಅಷ್ಟರಲ್ಲೇ ಮುಂದಿನ ಸ್ಟಾಪು ಬಂತು. ಇವರಿಗೆ ದುಡ್ಡು ಕೊಟ್ಟ ಮನಿಷ್ಯಾ ಅವಸರದಲ್ ಇಳಿದೋದ. ಬಸ್ ಹೊರಡ್ತು. ಇವ್ರು ಅವನ ಕಡೆನೇ ನೋಡ್ತಾ ಯೋಚ್ನೇ ಮಾಡ್ತಾ ಇದ್ರು. ಆಗ ಅವರಿಗೆ ನನ್ನ ಹಿಂದೆ ನಿಂತಿದ್ದೋನು ಇವ್ನೇ ಅಲ್ವಾ, ಅದೇ ಬಟ್ಟೆ ಅಂತಾ ನೆನಪಿಸ್ಕೊಂಡು, ಬಸ್‌ನಲ್ಲಿದ್ದವ್ರಿಗೆ, ನೋಡಿ ನನ್ ಹಿಂದೆ ಒಬ್ರು ನಿಂತಿದ್ರು. ರಷ್ನಲ್ಲಿ ಮೇಲೆ ಬಿದ್ರು. ದುಡ್ ಕೊಟ್ರಲ್ಲಾ ಅವರಂಗೆ ಬಟ್ಟೆ, ನನ್ ಸಂಬ್ಳ ಇವರೇ ಹೊಡೆದಿರ್ಬೋದ ಅಂತಾ ಅನ್ಮಾನ ಅಂದ್ರು. ಇವರ ಪಕ್ಕ ನಿಂತಿದ್ದೋರು ಕೆಲವ್ರು, ಹೌದು, ಆ ಮನಿಷ್ಯ ಇವರ ಹಿಂದೆ ನಿಂತಿದ್ರು, ನಾನೂ ನೋಡ್ದೆ ಅಂದ್ರು. ಅವನೇ ಹೊಡೆದಿರ್ಬೋದಾ ಅಂತಾ ಅನ್ಮಾನ ಬಂತು. ಬಾಳಾ ಜನಕ್ಕೆ. ಇನ್ನೊಬ್ರು ಈ ಬಸ್ನಲ್ಲಿ ಇಂತಾವು ಆಗಾಗ್ಗೆ ಆಗ್ತಾ ಇರ್ತಾವೆ. ಪಿಎಂಸಿಯಿಂದ, ಪೇಟೆಯಿಂದ ದುಡ್ಡು ಇಸ್ಕೊಂಡು ಬಂದು ಬಸ್ ಹತ್ತಿರ್ತಾರಲ್ಲಾ, ಅವರನ್ನೇ ಹಿಂಬಾಲಿಸ್ಕೊಂಡು ಬಂದು ದುಡ್ಡು ಹೊಡಿದಿದಾರೆ ಅಂತಾ ವಾರಗಳ ಹಿಂದಿನ ಪ್ರಸಂಗ ನೆನಪಿಸ್ಕೊಂಡ್ರು. ಯಾರು ಟಿಕೆಟ್ ದುಡ್ ಕೊಟ್ನೋ ಅವನೇ ಇವರ ಸಂಬ್ಳ ಹೊಡೆದವ್ನೆ ಅಂತಾ ಜನ ಮಾತಾಡ್ಕೊಳ್ಳೋಕೆ ಶುರು ಮಾಡ್ದ್ರು. ಬಸ್‌ನಲ್ಲೆಲ್ಲಾ ಅದೇ ಚರ್ಚೆ ಶುರುವಾಯ್ತು.

"ನೋಡ್ದ್ರಾ, ಇಡೀ ತಿಂಗ್ಳ ಸಂಬ್ಳ ಹೊಡ್ದು, ಭಾಳಾ ದೊಡ್ಮನಿಷ್ಯನ್ ತರಾ ಒಂದಿಷ್ಟು ದುಡ್ಡು ಕೊಟ್ಟ ಅಂದ್ ಕೂಡ್ಲೇ ದೇವ್ರಂತಾ ಮನಿಷ್ಯಾ ಅಂಗೆ ಇಂಗೆ ಅಂತೆಲ್ಲ ಹೊಗಳಿ ಬಿಟ್ವಲ್ಲಾ. ಎಷ್ಟ್ ಸುಲಬ್ ವಾಗಿ ಮೋಸ ಹೋಗ್ತೀವಿ ಅಲ್ವಾ" ಅಂತಾ ಮಾತಾಡ್ ಕೊಂತಿದ್ರು.

ಈ ಕತೆ ಹೇಳಿ ಸೀತಾರಾಮ್, ನೋಡಿ ಹೀಂಗೇ ಆಳುವ ಸರ್ಕಾರಗಳು, ಕಷ್ಟಪಟ್ಟು ದುಡಿದ ನಿಮ್ಮ ದುಡಿಮೆನೆಲ್ಲಾ ಹೊಡ್ದು ಆಮೇಲೆ ಚುನಾವ್ಣೆ ಬಂದಾಗ ಒಂದಿಷ್ಟು ದುಡ್ಡು ಹಂಚಿ ಅತ್ವಾ ದೇವಸ್ತಾನಕ್ಕೋ, ಕ್ರಿಕೆಟ್ ಟೀಮ್ಗೋ ಒಂದಿಷ್ಟು ದುಡ್ಡು ಕೊಟ್ತಾರೆ. ಅದನ್ ತಗೊಂಡು ಅಯ್ಯೋ ಎಷ್ಟು ಒಳ್ಳೇವ್ರು ಅನ್ಕೊಂಡು ಓಟು ಹಾಕ್ತೀರಿ. ನಿಮ್ ದುಡಿಮೇನೆ ಕದ್ದು ನಿಮ್ಗೆ ಅದ್ರಲ್ಲೇ ಒಂದಿಷ್ಟು ಎಸ್ದು ಮಾಡುವ ಮೋಸಕ್ಕೆ ಬಲಿ ಬೀಳ್ಬೇಡಿ ಅಂತಾ ಹೇಳ್ತಿದ್ರು.

ರತನ್ ಟಾಟಾ ಬಗ್ಗೆ ಕಾರ್ಪೊರೇಟ್ ಒಡೆಯರು, ಆಳುವ ಪಕ್ಷಗಳ ರಾಜಕಾರಣಿಗಳು, ಮಾಧ್ಯಮಗಳು ಅಂತಾ ದಾನಿ, ಇಷ್ಟೊಂದು ದಾನ ಮಾಡಿದ್ದಾರೆ ಅಂತಾ ಹೊಗಳು ಭಟ್ಟರಂತೆ ವಾಚಾಮಗೋಚರ ಹೊಗಳುವಾಗ ಈ ಕತೆ ನೆನಪಿಗೆ ಬಂತು.

ರತನ್ ಟಾಟಾ ಮಹಾದಾನಿ, ಎಷ್ಟೊಂದು ದಾನ ಮಾಡಿದ್ದಾರೆ. ಕೋವಿಡ್‌ಗೆ ಸಾವಿರಾರು ಕೋಟಿ ಕೊಟ್ರು, ಕಲೆ, ಕ್ರೀಡೆಗಳಿಗೆ ಇಷ್ಟೊಂದು ದಾನ ಮಾಡಿದ್ದಾರೆ. ಚಲನ ಚಿತ್ರರಂಗದ ಮಹಾಮಹಿಮರೆಲ್ಲ ಸಾಲುಗಟ್ಟಿ ಸಂತಾಪ ಸೂಚಿಸಿದರು.



ಅವರು ದೊಡ್ಡ ಕೈಗಾರಿಕಾ ಸಾಮ್ರಾಜ್ಯ ಕಟ್ಟಿದವರು, ಟಾಟಾ ಸಾಮ್ರಾಜ್ಯ ಭಾರತದಿಂದ ಬೇರೆ ದೇಶಗಳ ಹಲವು ಕೈಗಾರಿಕೆಗಳನ್ನು ವಶ ಪಡಿಸಿಕೊಂಡು ವಿಶ್ವ ಮಟ್ಟದ ಸಾಮ್ರಾಜ್ಯವಾಗಿ ಮಾಡಿದವರು, ಭಾರತದ ಕೀರ್ತಿ ಮುಗಿಲಿಗೇರಿಸಿದವರು, ಹೊಸ ವಿಜ್ಞಾನ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದರು, ಹಾಗೇ, ಹೀಗೆ ಎಂಬ ಮುತ್ತುಗಳು ಏಕಸ್ವಾಮ್ಯ ಕಾರ್ಪೊರೇಟ್ ಮಾಧ್ಯಮಗಳವರ, ರಾಜಕಾರಣಿಗಳು, ಬಂಡವಾಳಶಾಹಿಗಳ ಬಾಯಿಂದ ಉದುರುತ್ತಿವೆ.

ಇದಕ್ಕೆ ನೀತಿವಂತ ಬಂಡವಾಳಶಾಹಿ (ಎಥಿಕಲ್ ಕ್ಯಾಪಿಟಲಿಸಂ) ಎಂದೂ ನಾಮಕರಣ ಮಾಡಿದ್ದಾರೆ!!!

ಇಂತಹ ನೀತಿವಂತರ ಎಲ್ಲ ಮಹಾದಾನ, ಮಹಾ ಕಾರ್ಯಗಳಿಗೆ ವಿನಿಯೋಗಿಸಿದ ಹಣದ ಮೂಲ ಏನು, ಅದು ಇವರ ಕೈಗೆ ಎಲ್ಲಿಂದ, ಹೇಗೆ ಬಂತು ಎಂಬ ಬಗ್ಗೆ ಒಬ್ಬರಿಂದಲೂ ತಿಳಿಯುತ್ತಿಲ್ಲ. ಮಾಧ್ಯಮಗಳು ನೇರ, ದಿಟ್ಟ, ನಿರಂತರವಾಗಿ ಜನರಿಗೆ ನಿಜ ಸಂಗತಿ ತಿಳಿಸಬೇಕಲ್ಲ, ಯಾವುದ್ಯಾವುದೋ ವಿಷಯಗಳ ಬಗ್ಗೆ ವಾರಗಟ್ಟಲೆ ತನಿಖಾ ವರದಿಗಳನ್ನು ಬಿತ್ತರಿಸುವವರು, ನಾನೇ ಮೊದಲು ಎಂದು ಬೀಗುವವರು ದೇಶದ ಈ ಅತ್ಯಂತ ಮುಖ್ಯ ವಿಷಯದಲ್ಲೇಕೆ ಮೌನ!

ರತನ್ ಟಾಟಾರವರ ವೈಯಕ್ತಿಕ ಸಂಪತ್ತು ಏಳು ಸಾವಿರ ಕೋಟಿ ಎಂದು ಹೇಳಲಾಗುತ್ತಿದೆ. ಹೇಳಿಕೊಳ್ಳುವಂತಹ ಯಾವುದೇ ಪಿತ್ರಾರ್ಜಿತ ಆಸ್ತಿಯ ಆಧಾರ ಇಲ್ಲದ ಕುಟುಂಬದಲ್ಲಿ ಹುಟ್ಟಿದ ಇವರಿಗೆ ಈ ಸಂಪತ್ತು ದೊರಕಲು ಆಧಾರವಾಗಿದ್ದೇ ಇವರು ಟಾಟಾ ಸಾಮ್ರಾಜ್ಯ ಸ್ಥಾಪಿಸಿದ ಜಮ್ ಶೇಟ್ಜಿ ಕುಟುಂಬಕ್ಕೆ ವಾರಸುದಾರರಿಲ್ಲದೆ ಜಮ್ ಶೇಟ್ಜಿಯವರ ಮಗ ಪ್ರಸಿದ್ಧ ಜೆಆರ್‌ಡಿ ಟಾಟಾ ನಿಧನರಾದ ಬಳಿಕ ಅವರ ವಿಧವೆ ಪತ್ನಿ ಈ ರತನ್ ಟಾಟಾರವರನ್ನು ದತ್ತು ತೆಗೆದುಕೊಂಡರು. ಹೀಗೆ ಟಾಟಾ ಕೈಗಾರಿಕಾ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾದ ಮೇಲೆ ಇವರು ಅಪಾರ ಸಂಪತ್ತಿನ ಸಾಮ್ರಾಜ್ಯದ ಮುಖ್ಯಸ್ಥರಾದರು. ಈ ಅಡಿಪಾಯದ ಮೇಲೆ ಈ ಸಾಮ್ರಾಜ್ಯವನ್ನು ವಿಸ್ತರಿಸಿದರು. ಇವರು ಮುಖ್ಯಸ್ಥರಾಗುವ ವೇಳೆಗೆ ಸರಿಯಾಗಿ ಟಾಟಾ ಬಂಡವಾಳಶಾಹಿಗಳ ಒತ್ತಡ, ಸ್ವತಃ ಈ ರತನ್ ಟಾಟಾರವರ ಒತ್ತಡವೂ ಸೇರಿದಂತೆ ಮನಮೋಹನ ಸಿಂಗ್–ಪಿ.ವಿ.ನರಸಿಂಹ ರಾವ್‌ರವರ ಜೋಡಿ ಭಾರತವನ್ನು ಜಾಗತೀಕರಣ, ಖಾಸಗೀಕರಣಕ್ಕೆ ತೆರೆದಿಟ್ಟಿತು. ಭಾರತದ ಅಪಾರ ಜನಸಾಮಾನ್ಯರನ್ನು ಸಂಕಟಕ್ಕೆ, ಮತ್ತಷ್ಟು ಹೆಚ್ಚಿದ ಶೋಷಣೆ, ದಮನ ಮಾಡುತ್ತಿರುವ ಈ ದುರ್ನೀತಿಗಳು ರತನ್ ಟಾಟಾ ಟಾಟಾ ಸಾಮ್ರಾಜ್ಯವನ್ನು ಮತ್ತಷ್ಟು ವೇಗವಾಗಿ ವಿಸ್ತರಿಸಲು ಮಹತ್ತರ ಅವಕಾಶ ನೀಡಿತು. ಈ ಕರಣಗಳು ಕೊನೆಗೆ ಇಂದಿನ ಕೋಮುವಾದಿ ಫ್ಯಾಸಿಸ್ಟ್ ರೀತಿಯ ದಬ್ಬಾಳಿಕೆಗೆ ದೂಡಿವೆ. ಜಾತ್ಯಾತೀತ ಭಾರತವನ್ನು ಬೆಂಬಲಿಸುತ್ತಿದ್ದ ಜಮ್ ಶೇಟ್ಜಿ ಕುಟುಂಬದ ಈ ವಾರಸುದಾರ ರತನ್ ಟಾಟಾರವರ ಕೊಡುಗೆಯೂ ಇದಕ್ಕೆ ಸೇರಿದೆ.

ಹೀಗೆ ರತನ್ ಟಾಟಾರವರ ಮಹಾದಾನದ ಮೂಲವನ್ನು ಬಗೆಯುತ್ತಾ ಹೋದರೆ ಟಾಟಾ ಸಾಮ್ರಾಜ್ಯ ಹುಟ್ಟಿದ, ಬೆಳೆದ ಬಗೆಗಳನ್ನು ಬಗೆದು ನೋಡಬೇಕಾಗುತ್ತದೆ. ಈ ರೀತಿ ಬಗೆಯ ಹೊರಟಾಗ ಭಾರತದಲ್ಲಿ ಬ್ರಿಟನ್ ಮೊದಲಾದ ದೇಶಗಳಿಗಿಂತ ವಿಭಿನ್ನವಾಗಿ ಟಾಟಾರ ಬಂಡವಾಳ, ಒಟ್ಟಾರೆ ಭಾರತದ ಬಂಡವಾಳ ಉದ್ಭವವಾದ ರೀತಿ, ಸ್ವಾತಂತ್ರ್ಯಕ್ಕೆ ಮೊದಲು ಬ್ರಿಟಿಷರ ಈಸ್ಟ್ ಇಂಡಿಯಾ ಕಂಪನಿಯ, ನಂತರ ಬ್ರಿಟಿಷ್ ವಸಾಹತುಗಾರರ ಬಾಲ ಹಿಡಿದು ಬೆಳೆದ ಬಗೆ, ಸ್ವಾತಂತ್ರ್ಯ ಚಳುವಳಿಯಲ್ಲಿ ವಹಿಸಿದ ಪಾತ್ರ, ಭಾರತದ ಸ್ವಾತಂತ್ರ್ಯವನ್ನು, ಸ್ವಾತಂತ್ರ್ಯಾನಂತರದ ಭಾರತವನ್ನೇ ರೂಪಿಸುವ ಶಕ್ತಿಯಾಗಿ ಬೆಳೆದದ್ದು, ಭಾರತದ "ಅಭಿವೃದ್ಧಿ"ಗೆ ಇವರು ನಿರ್ದೇಶನ ಮಾಡಿದ್ದು ಮತ್ತೊಂದು ಪರ್ವ.

ಸ್ವಾತಂತ್ರ್ಯಾನಂತರದ ಭಾರತದ ಪ್ರಭುತ್ವ ಮತ್ತು ಟಾಟಾ ಬಂಡವಾಳಶಾಹಿ ಸಾಮ್ರಾಜ್ಯ ಪರಸ್ಪರ ಜೋಡಿಯಾಗಿ ಹೆಣೆದುಕೊಂಡ ರೀತಿ, ಅದರಿಂದ ಭಾರತದ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಮೇಲೆ, ಕಾರ್ಮಿಕರು, ರೈತರು ಸಾಮಾನ್ಯ ಜನತೆಯ ಮೇಲೆ ಬೀರಿದ ವಿಪರೀತ ಪರಿಣಾಮ ಈ ಮಹಾಭಾರತ ಪರ್ವದ ತಿರುಳು. ಸಾರ್ವಜನಿಕ ಕೈಗಾರಿಕೆ ಮತ್ತಿತರ ಪ್ರಭುತ್ವ ಬಂಡವಾಳಶಾಹಿಯ ಬೆಳವಣಿಗೆಗೆ ಒತ್ತಾಯ ಹಾಕಿದ್ದು, ಈ ಸಾರ್ವಜನಿಕ ರಂಗದ ಮೇಲೆ ಸವಾರಿ ಮಾಡಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತರಿಸಿದ್ದು, ಅಮೆರಿಕ ಮೊದಲಾದ ಸಾಮ್ರಾಜ್ಯಶಾಹಿ ಬಂಡವಾಳಿಗರ ಜೊತೆ ಸಾಹಚರ್ಯ, ಭಾರತದ ಮೊತ್ತ ಮೊದಲ ವಿಶ್ವಬ್ಯಾಂಕ್ ಸಾಲ ಪಡೆದ ಕಂಪನಿಯಾಗಿದ್ದು, ಪಂಚವಾರ್ಷಿಕ ಯೋಜನೆಗಳಿಗೆ ವಿರೋಧ, ಸಾರ್ವಜನಿಕ ರಂಗದ ಮೇಲೆ ಧಾಳಿ ಆರಂಭಿಸಿದ್ದು, ಬ್ಯಾಂಕ್ ರಾಷ್ಟ್ರೀಕರಣದಿಂದ ಪಡೆದ ಅಪಾರ ಪ್ರಯೋಜನ, ತುರ್ತು ಪರಿಸ್ಥಿತಿಗೆ ಬೆಂಬಲ, ಕಾರ್ಮಿಕರ ಮೇಲೆ ಶಿಸ್ತು ಹೇರಲು, ವೇತನ ಸ್ಥಗಿತಗೊಳಿಸಲು ಮಾಡಿದ ಒತ್ತಾಯ, ರೈತರು ಬೆಳೆಯಲು ಬೇಕಾದ ರಸಗೊಬ್ಬರ, ಕೀಟ ಮತ್ತು ರೋಗ ನಾಶಕಗಳು, ಯಂತ್ರಗಳು ಮೊದಲಾದ

ಪುಟ 10 ಕ್ಕೆ

ಸ್ಯಾಮ್ ಸಂಗ್ ಕಾರ್ಮಿಕರ ಹೋರಾಟ.....

ಪುಟ 8 ರಿಂದ

ರಾಜ್ಯಪಾಲ ರವಿಯವರು ವಿಧಾನಸಭೆ ಮಸೂದೆಗಳ ಬಗ್ಗೆ ನಡೆದುಕೊಂಡಂತೆ ಅಂದರೆ, ಸಹಿಯನ್ನೂ ಮಾಡದೆ, ಅತ್ತ ಹಿಂತಿರುಗಿಸದೆ ವಿಳಂಬ ಮಾಡಿದಂತೆ, ಈ ವಿಷಯದಲ್ಲಿ ಸರ್ಕಾರದ ವರ್ತನೆಯು ಹಾಗೆಯೇ ಆಗಿದೆ. ಸ್ಯಾಮ್‌ಸಂಗ್ ಕಂಪನಿಗೆ ಹೌದಪ್ಪಗಳ ಸಮಿತಿ ರಚಿಸಲು ಸಮಯ ನೀಡಿ, ಸಂಧಾನದ ಭ್ರಮೆಯನ್ನು ಮಾಧ್ಯಮಗಳ ಮೂಲಕ ಸೃಷ್ಟಿಸುತ್ತಿದೆ. 14 ಬೇಡಿಕೆಗಳನ್ನು ಒಪ್ಪಲಾಗಿದೆ ಎಂದು ಸಾಧಿಸುತ್ತಿದ್ದಾರೆ, ಆದರೆ ಅದು ಬರೀ ನಾಟಕವಷ್ಟೆ. ನೋಂದಾವಣೆ ವಿಷಯವು ನ್ಯಾಯಾಲಯದಲ್ಲಿದೆ, ಆದ್ದರಿಂದ ಅದರ ಬಗ್ಗೆ ವ್ಯಾಖ್ಯಾನ ಮಾಡಲಾಗದು ಎಂದು ಸರ್ಕಾರ ಹೇಳುತ್ತಿದೆ.

ಮಾತುಕತೆಯ ನಂತರ, ನಮ್ಮನ್ನು ಮತ್ತೆ ಕರೆಯಲಾಗುವುದು ಎಂದು ಹೇಳುತ್ತಿದ್ದಾರೆ. ಬದಲಿಗೆ, ಕಾರ್ಮಿಕರನ್ನು "ಪ್ರತಿನಿಧಿಸುತ್ತಿದ್ದಾರೆ" ಎಂದು ಅವರೊಡನೆ ಫೋಟೋಗಳನ್ನು ತೆಗೆಸಿಕೊಂಡು ಮತ್ತು ಸಹಿಗಳನ್ನು ಹಾಕಿಸಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ಅದರಲ್ಲಿ ಪಾರದರ್ಶಕತೆ ಇಲ್ಲ ಮತ್ತು ನಮ್ಮನ್ನು ಮೋಸ ಮಾಡುವ ಕುತಂತ್ರವದು.

ನಮ್ಮ ಮುಖ್ಯ ಬೇಡಿಕೆ ಸಂಘವನ್ನು ಮಾನ್ಯಮಾಡಬೇಕೆಂಬುದು. ಆ ಬೇಡಿಕೆ ಈಡೇರಿದರೆ ನಾವು ತಕ್ಷಣವೇ ಮುಷ್ಕರ ನಿಲ್ಲಿಸುತ್ತೇವೆ. ಇತರ ವಿಷಯಗಳನ್ನು ನಂತರದಲ್ಲಿ ಚರ್ಚೆ ಮಾಡಬಹುದು. ರೂ.5000 ದ ಆಶ್ವಾಸನೆ ಕೇವಲ ಪ್ರೋತ್ಸಾಹಧನ ಅಷ್ಟೆ. ಅದು ಸಂಬಳ ಹೆಚ್ಚಳವಲ್ಲ. ಅದಕ್ಕೂ ಮುಂಚೆ ಕಾರ್ಮಿಕರನ್ನು ಎಷ್ಟು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು ಎಂಬುದನ್ನು, ಹವಾನಿಯಂತ್ರಿತ ಬಸ್ಸುಗಳು ಮತ್ತು ಲಾಕರುಗಳ ರಿಪೇರಿಯಂತಹ 14 ಬೇಡಿಕೆಗಳನ್ನು ಒಪ್ಪಿರುವುದೇ ತೋರಿಸುತ್ತದೆ.

ಬಾಧಿತ ಕಾರ್ಖಾನೆ ನೌಕರರು 516 ಎಂದು ಸಚಿವರು ಒಪ್ಪಿಕೊಂಡಿರುವುದೇ ಹೇಳುತ್ತದೆ ಹೊರಗಡೆ 1300 ಕಾರ್ಮಿಕರು ಪ್ರತಿಭಟಿಸುತ್ತಿದ್ದಾರೆ ಎನ್ನುವುದನ್ನು. ಪ್ರಜಾಪ್ರಭುತ್ವದಲ್ಲಿ ಈ ಬಹುಮತವನ್ನು ಗೌರವಿಸಬೇಕಾಗುತ್ತದೆ.

ಡಿಎಂಕೆ ಸರ್ಕಾರದ ಕಾರ್ಮಿಕ ಪ್ರಗತಿಪರ ರಂಗವು ಸ್ಯಾಮ್‌ಸಂಗ್ ಕಾರ್ಮಿಕರನ್ನು ಮತ್ತು ಸಿಐಟಿಯುವನ್ನು ಬೆಂಬಲಿಸುತ್ತದೆ. ಹಾಗಿದ್ದ ಮೇಲೆ, ಸಂಘವನ್ನು ನೋಂದಾಯಿಸಲು ಸರ್ಕಾರವನ್ನು ಯಾರು ತಡೆಹಿಡಿದಿದ್ದಾರೆ?

ಹೌದು, ಕಾರ್ಮಿಕ ಪ್ರಗತಿಪರ ರಂಗವು ನಮ್ಮನ್ನು ಬೆಂಬಲಿಸುತ್ತದೆ ಮತ್ತು ಕಾರ್ಮಿಕ ವರ್ಗದ ವಿಷಯಗಳನ್ನು ಒಪ್ಪಿಕೊಳ್ಳುತ್ತದೆ. ಆದರೆ ರಾಜಕೀಯ ಕಾರಣಗಳಿಗಾಗಿ, ಅವರು ಬಹಿರಂಗವಾಗಿ ತಮ್ಮ ಪಕ್ಷವನ್ನು ಪ್ರಶ್ನಿಸುವುದಿಲ್ಲ.

ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಅಮೆರಿಕಾ ಪ್ರವಾಸವು ರೂ.7,000 ಕೋಟಿಗಿಂತಲೂ ಹೆಚ್ಚು ಮೌಲ್ಯದ ಹಣ ಹೂಡಿಕೆಯ ಒಪ್ಪಂದವನ್ನು ಮಾಡಿಕೊಂಡಿದೆ ಎಂದು ವರದಿಯಾಗಿದೆ. ಸ್ಯಾಮ್‌ಸಂಗ್ ಕಾರ್ಮಿಕರ ಪ್ರತಿಭಟನೆಯು ಅಂತಹ ಹಣ ಹೂಡಿಕೆಯನ್ನು ತಡೆಗಟ್ಟುತ್ತದೆ ಎಂದು ಕೆಲವು ಟೀಕಾಕಾರರು ವಾದಿಸುತ್ತಿದ್ದಾರೆ.

ಸಂಭಾವ್ಯ ಲಾಭಗಳು, ಪ್ರೋತ್ಸಾಹಧನ (ಸಬ್ಸಿಡಿಗಳು) ಮತ್ತು ಕಾರ್ಮಿಕರ ಶಿಸ್ತುಗಳ ಬಗ್ಗೆ ಮಾಲೀಕರು ಲೆಕ್ಕಹಾಕುತ್ತಾರೆ. ತಮಿಳುನಾಡು ಈ ಎಲ್ಲವನ್ನೂ ಒದಗಿಸುತ್ತದೆ. ಕೈಗಾರಿಕೆಗಳು ಬರಬೇಕು, ಆದರೆ ಕಾರ್ಮಿಕರ ಹಕ್ಕುಗಳನ್ನೂ ಖಾತರಿಪಡಿಸಬೇಕು. ಮುಷ್ಕರಗಳು ಕಂಪನಿಗಳನ್ನು ಹೆದರಿಸುತ್ತವೆ ಎಂದು ಟೀಕೆಮಾಡುವವರಿಗೆ ನಾನು ಕೇಳುತ್ತೇನೆ: ಈ ಕಂಪನಿಗಳ ಮೂಲ ದೇಶದಲ್ಲಿ ಕಾರ್ಮಿಕ ಸಂಘಗಳಿಲ್ಲವೆ? ಫ್ರಾನ್ಸ್ ಮತ್ತು ಯುಕೆಯಲ್ಲಿ ಶಕ್ತಿಯುತ ಕಾರ್ಮಿಕ ಸಂಘಗಳಿವೆ. ಕಾರ್ಮಿಕ ಸಂಘಗಳಿಲ್ಲದ ದೇಶಗಳಿವೆಯೆ? ಇಲಿಗಳಿಗೆ ಹೆದರಿ ಯಾರೂ ತಮ್ಮ ಮನೆಯನ್ನು ಸುಟ್ಟುಹಾಕುವುದಿಲ್ಲ. ಕಂಪನಿಗಳನ್ನು ಆಕರ್ಷಿಸಲು ಸಂಘಗಳನ್ನು ತಡೆಯುವುದೊಂದೇ ದಾರಿಯಾದರೆ, ಅವರ ಮೇಲೆ ತೆರಿಗೆ ವಿಧಿಸುವುದನ್ನೂ ಏಕೆ ತಡೆಯಬಾರದು? ಅದು ಸಾಧ್ಯವೇ? ತೆರಿಗೆ ಬೇಡಿಕೆಗಳ ವಿಷಯದಲ್ಲೇ ನೋಕಿಯಾ ಚೆನ್ನೈಯನ್ನು ಬಿಟ್ಟು ಹೊರಗೆ ಹೋಯಿತು, 15,000 ಉದ್ಯೋಗ ನಷ್ಟವಾಯಿತು. ಸರ್ಕಾರ ಕಾನೂನನ್ನು ಜಾರಿ ಮಾಡಬೇಕು – ಅದು ತೆರಿಗೆ ಇರಲಿ ಅಥವಾ ಸಂಘ ನೋಂದಾವಣೆ ಇರಲಿ.

ಸ್ಯಾಮ್‌ಸಂಗ್ ಮುಷ್ಕರದ ವಿಚಾರದಲ್ಲಿ ಸಿಐಟಿಯು ನ ಮುಂದಿನ ಕಾರ್ಯಾಚರಣೆಯ ಯೋಜನೆಗಳೇನು?

ಸಂಘವನ್ನು ಸ್ಥಾಪಿಸುವ ತನಕ ನಾವು ನಿಲ್ಲುವುದಿಲ್ಲ. ಸಂಘ ಕಟ್ಟುವುದು ನಮ್ಮ ಹಕ್ಕು. ಕಾರ್ಮಿಕರು ಎರಡಕ್ಕಿಂತ ಹೆಚ್ಚು ತಿಂಗಳು ಗಟ್ಟಿಯಾಗಿ ನಿಂತರೆ, ನೆನಪಿಡಿ: ಯಮಹಾ ಕಾರ್ಮಿಕರು 63 ದಿನಗಳ ಕಾಲ ಮುಷ್ಕರ ಮಾಡಿದರು, ತಮ್ಮ ಸಂಘ ಕಟ್ಟಿದರು. ಸ್ಯಾಮ್‌ಸಂಗ್ ಕಂಪನಿ ಕೂಡ ಬಗ್ಗಲೇಬೇಕು. ಉತ್ಪಾದನೆ ಇಲ್ಲದೆ ಅವರು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಸ್ಪರ್ಧಿಗಳು ಸನ್ನಿವೇಶದ ಉಪಯೋಗ ಪಡೆಯುತ್ತಾರೆ, ನಷ್ಟ ಉಂಟುಮಾಡುತ್ತಾರೆ. ನಮಗೇನೂ ಇದರಿಂದ ಸಂತೋಷವಾಗುತ್ತಿಲ್ಲ. ಈ ಮುಷ್ಕರವು ಕಾರ್ಮಿಕರ ತೀವ್ರ ಮಾನಸಿಕ ಒತ್ತಡವನ್ನು ಮತ್ತಿತರ ಸಮಸ್ಯೆಗಳನ್ನು ಪ್ರತಿಫಲಿಸುತ್ತದೆ. ಸರ್ಕಾರವು ಇದನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

ಮೂಲ: ಸಿದ್ಧಾರ್ಥ್ ಮುರಳೀಧರನ್

ಅನು: ಟಿ. ಸುರೇಂದ್ರ ರಾವ್ (ಕೃಪೆ: ಫ್ರಂಟ್ ಲೈನ್)

ಜಮ್ಮು–ಕಾಶ್ಮೀರ ಮತ್ತು ಹರ್ಯಾಣ ಚುನಾವಣೆಗಳು: ಜಾತ್ಯತೀತ ಶಕ್ತಿಗಳಿಗೆ ಅಮೂಲ್ಯವಾದ ಪಾಠಗಳನ್ನು ಒದಗಿಸಿದೆ

ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ರಾಜ್ಯಗಳ ಚುನಾವಣೆಗಳಿಂದ ಹೊಮ್ಮಿರುವ ತದ್ವಿರುದ್ಧ ಫಲಿತಾಂಶಗಳು, ಜಮ್ಮು ಮತ್ತು ಕಾಶ್ಮೀರದಲ್ಲಿನ ಅದ್ಭುತ ಯಶಸ್ಸು ಮತ್ತು ಹರ್ಯಾಣದಲ್ಲಿ ಅನಿರೀಕ್ಷಿತ ಹಿನ್ನಡೆಯು ಮುಂದಿನ ದಿನಗಳಲ್ಲಿ ಬಿಜೆಪಿ ವಿರುದ್ಧದ ಹೋರಾಟಕ್ಕೆ ಜಾತ್ಯತೀತ ಶಕ್ತಿಗಳಿಗೆ ಅಮೂಲ್ಯವಾದ ಪಾಠಗಳನ್ನು ಒದಗಿಸುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಅದರ ಮಿತ್ರಪಕ್ಷಗಳು ಆರು ವರ್ಷಗಳ ಕೇಂದ್ರ ಸರ್ಕಾರದ ನಿರಂಕುಶ ಆಡಳಿತದ ನಂತರ ಮೊದಲ ಚುನಾಯಿತ ಸರ್ಕಾರವನ್ನು ರಚಿಸಲು ಅನುಕೂಲವಾದ ಬಹುಮತವನ್ನು ಗೆದ್ದಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಜನತೆ ನಿಸ್ಸಂದಿಗ್ಧ ತೀರ್ಪು ನೀಡಿದ್ದಾರೆ– 370ನೇ ವಿಧಿಯನ್ನು ರದ್ದುಪಡಿಸುವ ಮೂಲಕ, ಈ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ಇಭ್ಭಾಗ ಮಾಡಿ, ರಾಜ್ಯದ ದರ್ಜೆಯನ್ನು ರದ್ದು ಮಾಡುವ ಮೂಲಕ ಮತ್ತು ಕ್ಷೇತ್ರಗಳ ಮರುವಿಂಗಡಣೆಯಲ್ಲಿ ಕಪಟೋಪಾಯಗಳ ಮೂಲಕ, ಜನರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ಹಿಸುಕುವ ಬಿಜೆಪಿ ಕೇಂದ್ರ ಸರ್ಕಾರದ ಕುತಂತ್ರಕ್ಕೆ ಈ ಜನಾದೇಶದಿಂದ ಮುಖಭಂಗವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಹರ್ಯಾಣದಲ್ಲಿ ಕಾಂಗ್ರೆಸ್‌ನೊಂದಿಗಿನ ಜಿದ್ದಾಜಿದ್ದಿ ಹೋರಾಟದಲ್ಲಿ ಬಿಜೆಪಿಯು ಬಹುಪಾಲು ಸ್ಥಾನಗಳನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ. ಆದರೆ ಮತಗಳಿಕೆಯಲ್ಲಿ ಅದಕ್ಕೆ ಕಾಂಗ್ರೆಸ್‌ಗಿಂತ ಕೇವಲ ಶೇ. 0.6ರಷ್ಟು ಹೆಚ್ಚು ಮತಗಳಷ್ಟೇ ದಕ್ಕಿದೆ. ಅದರ ಯಶಸ್ಸಿನ ಹಿಂದೆ ಇರುವುದು ಸೂಕ್ಷ್ಮಜಾತಿ–ಅಣಿನೆರಿಕೆ ಮತ್ತು ವಂಚಕ ಕೋಮುವಾದಿ ಅಪಪ್ರಚಾರ. ಈ ತೀರ್ಪಿಗೆ ಕಾರಣವಾದ ಇತರ ಅಂಶಗಳ ಬಗ್ಗೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮೊಹಮ್ಮದ್ ಯೂಸುಫ್ ತರಿಗಾಮಿ ಅವರನ್ನು ಐದನೇ ಬಾರಿಗೆ ಆಯ್ಕೆ ಮಾಡಿದ್ದಕ್ಕಾಗಿ ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಕ್ಷೇತ್ರದ ಜನತೆಗೆ ಪೊಲಿಟ್‌ಬ್ಯುರೊ ಅಭಿನಂದನೆ ಸಲ್ಲಿಸಿದೆ.

ರತನ್ ಟಾಟಾ ನಿಧನ.......

ಪುಟ 9 ರಿಂದ

ಪರಿಕರಗಳನ್ನು ಒದಗಿಸುವಲ್ಲಿ, ಅವರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗದಂತೆ ಮಾಡುವಲ್ಲಿ ಪಡೆದುಕೊಂಡ ದುರ್ಲಾಭ, ನಂತರ ಮೇಲೆ ಹೇಳಿದಂತೆ ಜಾಗತೀಕರಣ, ನೀತಿಗಳಿಗಾಗಿ ಸರ್ಕಾರದ ಮೇಲೆ ಒತ್ತಾಯ, ಮತ್ತಿತರ ಸಂಗತಿಗಳನ್ನೆಲ್ಲ ಪರಿಶೋಧಿಸುವುದು ಅವಶ್ಯ.

ಅದೇ ಸಮಯದಲ್ಲಿ ಸ್ವಾತಂತ್ರ್ಯ ಪಡೆಯಲು ಅವರದೇ ರೀತಿಯ ಕೊಡುಗೆ ಇರುವಂತೆಯೇ ಸ್ವಾತಂತ್ರ್ಯಾನಂತರ ಭಾರತದ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಫ್ಯಾಸಿಸ್ಟ್ ಧಾಳಿ ನಡೆಯುವುದರಲ್ಲಿ ಅವರ ಪಾತ್ರ ಇರುವಂತೆಯೇ ಅದು ಇಲ್ಲಿಯವರೆಗೆ ಪ್ರಜಾಪ್ರಭುತ್ವವಾಗಿ ಉಳಿದಿರುವುದಕ್ಕೂ ಅವರ ಕೊಡುಗೆ ಇದೆ. ಭಾರತದಂತೆಯೇ ವಸಾಹತುಶಾಹಿಗಳಿಂದ ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳ ಕತೆ ನಂತರ ಏನಾಗಿದೆ ನೋಡಿ. ಅವುಗಳಲ್ಲಿ ಹಲ ಹಲವು ದೇಶಗಳು ಹಲವು ದಶಕಗಳ ಸರ್ವಾಧಿಕಾರ, ಮಿಲಿಟರಿ ದಬ್ಬಾಳಿಕೆ, ಅಮೆರಿಕ ಮೊದಲಾದವುಗಳ ಅಧೀನತೆಯನ್ನು ಸ್ವಾತಂತ್ರ್ಯ ಪಡೆದ ಕೆಲ ವರ್ಷಗಳಿಂದಲೇ ಅನುಭವಿಸುತ್ತಿವೆ. ಈ ಅಂಶವನ್ನೂ ಗಮನಿಸಬೇಕು.

ಒಟ್ಟಿನಲ್ಲಿ ಆಧುನಿಕ ಭಾರತದ ಚರಿತ್ರೆಯನ್ನೇ, ನಮಗೆ ಶಾಲೆಗಳಲ್ಲಿ ಉರು ಹೊಡೆಸಿದ ರೀತಿಗಿಂತ ಬೇರೆಯಾಗಿ ದುಡಿಯುವ ಜನರ ಕಣ್ಣಿನಿಂದ ಪುನರ್ ರೂಪಿಸಬೇಕಾಗುತ್ತದೆ. ಮತ್ತೂ ಒಂದು ವಿಶೇಷ: ಬ್ರಿಟನ್ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದ ಶಾಪುರ್ಜಿ ಸಕಲತ್‌ವಾಲಾ ಎಂಬ ಕಮ್ಯೂನಿಸ್ಟ್, ಪಾಕಿಸ್ತಾನದ ಸ್ಥಾಪಕ ಮಹಮದಾಲಿ ಜಿನ್ನಾರ ಹೆಂಡತಿ ಕೂಡಾ ಟಾಟಾ ಕುಟುಂಬದ ಕುಡಿಗಳು.

ಟಾಟಾ ಬಂಡವಾಳದ ಉದ್ಭವ:

ಪರ್ಷಿಯಾದಿಂದ ಹಲವು ಶತಮಾನಗಳ ಹಿಂದೆ ಬಂದು ಗುಜರಾತಿನಲ್ಲಿ ನೆಲಸಿದವರೇ ಪಾರ್ಸಿಗಳು. ಅವರಲ್ಲಿ ಹಲವರು ಹಡಗುಗಳ ಮೂಲಕ ಸಮುದ್ರ ಸಾರಿಗೆ, ವ್ಯಾಪಾರಗಳಲ್ಲಿ ತೊಡಗಿದ್ದರು. ಟಾಟಾ ಉದ್ಯಮ ಸಂಸ್ಥೆಗಳ ಸ್ಥಾಪಕ ಜಮ್‌ಶೆಟ್ಜಿ ಟಾಟಾ ತಮ್ಮ ತಂದೆಯ ಹಡಗು ಸಾರಿಗೆ ವ್ಯಾಪಾರದಲ್ಲಿ ತೊಡಗಿಕೊಂಡರು. ಈ ವ್ಯಾಪಾರ ಭಾರತ, ಚೀನಾ, ಜಪಾನ್, ಅರಬ್ ದೇಶಗಳು, ಈಜಿಪ್ಟ್ ಆಫ್ರಿಕಾದ ದೇಶಗಳಿಗೆಲ್ಲ ವ್ಯಾಪಿಸಿತ್ತು.

ಬ್ರಿಟಿಷರು 1820ರಿಂದ ಚೀನಾದ ಜನತೆಗೆ ವಿಷವುಣಿಸಲು ಅಫೀಮು ವ್ಯಾಪಾರ ಆರಂಭಿಸಿದ್ದರು. ಅದರಿಂದ ಮಿತಿ ಮೀರಿದ ಲಾಭ (ಕೇವಲ 250 ರೂ. ಬೆಲೆಯ ಅಫೀಮನ್ನು 1200 ರೂ.ನಿಂದ 2000 ರೂ.ಗೂ ಹೆಚ್ಚು ಬೆಲೆಗೆ ಮಾರುವ ಮೂಲಕ) ದೊರೆಯುತ್ತಿತ್ತು. ಬ್ರಿಟಿಷರ ಅಧೀನದ ಈ ಅಫೀಮು ವ್ಯಾಪಾರದಲ್ಲಿ ಟಾಟಾ, ಬಿರ್ಲಾ ಮೊದಲಾದ ಹಲವರು ಸೇರಿಕೊಂಡರು.

ಟಾಟಾರವರ ಸಮುದ್ರ ಸಾರಿಗೆ ವ್ಯಾಪಾರ, ಆ ವೇಳೆಗಾಗಲೇ ಅವರು ಹಾಂಗ್‌ಕಾಂಗ್, ಶಾಂಘೈಗಳಲ್ಲಿ ಗೋದಾಮುಗಳು ಉಪಯುಕ್ತವಾದವು. ಈ ಅಫೀಮು ವ್ಯಾಪಾರ ಮೂರು ದೇಶಗಳ ನಡುವಣ ತ್ರಿಕೋಣ ಅಕ್ರಮ ವ್ಯಾಪಾರವಾಗಿತ್ತು. ಭಾರತದಲ್ಲಿ ಅಫೀಮು ಬೆಳೆಸಿ ಚೀನಾದಲ್ಲಿ ಮಾರಿ, ಅಲ್ಲಿಯ ಟೀ, ರೇಷ್ಮೆ ಇತ್ಯಾದಿಗಳನ್ನು ಪಡೆದು ಯುರೋಪಿಗೆ ಸಾಗಿಸಿ ದುರ್ಲಾಭ ಮಾಡಿಕೊಳ್ಳುವ ವ್ಯಾಪಾರ. ಭಾರತದಲ್ಲಿ ಬಿಹಾರ, ಬನಾರಸ್ ಮೊದಲಾದ ಬ್ರಿಟಿಷರ ಆಡಳಿತದ ಪ್ರದೇಶಗಳಲ್ಲಿ, ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರದ ಸಂಸ್ಥಾನಗಳಲ್ಲಿ ಬ್ರಿಟಿಷರು ಒತ್ತಾಯ ಹೇರಿ ಅಫೀಮು ಬೆಳೆಸುತ್ತಿದ್ದರು. ಇದರ ಅಪಾರ ಲಾಭ ರೈತರಿಗೇನೂ ಸಿಗದಿದ್ದರೂ ಅಂದು ಈ ಪ್ರದೇಶಗಳಲ್ಲಿ ಆಹಾರದ ಕೊರತೆಗೆ, ಕ್ಷಾಮಗಳಿಗೆ ಕಾರಣವಾಗಿತ್ತು. ಇದರ ವಿರುದ್ಧ ಝಾನ್ಸಿ ರಾಣಿ, ತಾತ್ಯಾಟೋಪಿ ಮೊದಲಾದ ಸಿಪಾಯಿ ದಂಗೆಯ ನಾಯಕರು ಸಿಡಿದೆದ್ದಿದ್ದರು. ಚೀನಾದಲ್ಲಂತೂ ಅಫೀಮು ಮಾದಕ ವ್ಯಸನ ಕೋಟ್ಯಾಂತರ ಜನರ ಬದುಕು ಮತ್ತು ಆರೋಗ್ಯ ಮೂರಾಬಟ್ಟೆಯಾಗುವಂತೆ ಮಾಡಿತ್ತು. ಚೀನಾದ ಅಂದಿನ ಸಾಮ್ರಾಟರು ಇದನ್ನು ಬಹಿಷ್ಕರಿಸಿದಾಗ ಬ್ರಿಟಿಷರು ಅವರ ಮೇಲೆ ಅಫೀಮು ಯುದ್ಧ (ಒಪಿಯಮ್ ವಾರ್) ಎಂದೇ ಪ್ರಸಿದ್ಧವಾದ ಯುದ್ಧ ಹೂಡಿ ಚೀನಾವನ್ನು ಸೋಲಿಸಿದರು.

ಈ ವ್ಯಾಪಾರವನ್ನು ದಾದಾಭಾಯಿ ನವರೋಜಿಯಂತಹ ಭಾರತ ಸ್ವಾತಂತ್ರ್ಯದ ಮೊದಲ ಹೋರಾಟಗಾರರು, ಅನೇಕ ಬ್ರಿಟಿಷ್ ಮಾನವೀಯವಾದಿಗಳು ಖಂಡಿಸಿದರು. ಪ್ರತಿಭಟನೆಗಳನ್ನೇ ನಡೆಸಿದರು. ಆದರೆ ಟಾಟಾರಂತಹ ಹಲವು ವ್ಯಾಪಾರಿಗಳಿಗೆ ಅದರಿಂದ ದೊರಕುತ್ತಿದ್ದ ಲಾಭವನ್ನು ರಕ್ಷಿಸಲು ದೊಡ್ಡದಾಗಿ ಹಿಂದೂ ಸಂಸ್ಕೃತಿಯ ಬಗ್ಗೆ, ನೈತಿಕತೆಯ ಬಗ್ಗೆ ಮಾತಾಡುತ್ತಿದ್ದ ತಿಲಕರು, ಸುಧಾರಣಾವಾದಿ ಎಂ.ಜಿ.ರಾನಡೆಯವರು, ಬ್ಯಾನರ್ಜಿ ಮೊದಲಾದವರು ಅಫೀಮು ವ್ಯಾಪಾರ ನಿಲ್ಲಿಸಬಾರದು, ಅದರಿಂದ ಭಾರತಕ್ಕೆ ನಷ್ಟ, ಭಾರತದ ಬಜೆಟ್‌ಗೆ ಬಹು ದೊಡ್ಡ ಆದಾಯದ ಮೂಲ ಎಂದು ವಾದಿಸುತ್ತಾ ಬ್ರಿಟಿಷ್ ಸರ್ಕಾರಕ್ಕೆ, ಈಸ್ಟ್ ಇಂಡಿಯಾ ಕಂಪನಿಗೆ ಬೆಂಬಲ ನೀಡಿದರು. ಅಂದು ಭಾರತೀಯ ಬಜೆಟ್‌ಗೆ ಎರಡನೇ ಅತ್ಯಂತ ದೊಡ್ಡ ಆದಾಯ ದೊರಕುತ್ತಿದ್ದುದು ಅಫೀಮು ವ್ಯಾಪಾರದಿಂದ.


ಈ ಅಂಶವೇ ಅದರಲ್ಲಿ ತೊಡಗಿದವರಿಗೆ ಎಷ್ಟು ಲಾಭವಾಗಿರಬಹುದು ಎಂಬುದನ್ನು ಸೂಚಿಸುತ್ತದೆ. ಮತ್ತೂ ಒಂದು ವಿಶೇಷವೆಂದರೆ ಮಧ್ಯ ಭಾರತದಲ್ಲಿ ಬೆಳೆಯುತ್ತಿದ್ದ ಅಫೀಮು ಹೆಚ್ಚು ಗುಣಮಟ್ಟದ್ದಾಗಿತ್ತು. ಎರಡರಷ್ಟು ಬೆಲೆ ಸಿಗುತ್ತಿತ್ತು. ಇದು ರಾಜರ ಸಂಸ್ಥಾನಗಳಲ್ಲಿ ಬೆಳೆಯಲಾಗುತ್ತಿದ್ದುದರಿಂದ ಬ್ರಿಟಿಷರ ಕಣ್ಣು ತಪ್ಪಿಸಿ ಗೋವಾದ ಮೂಲಕ ಸಾಗಿಸಿ, ಬ್ರಿಟಿಷರು ಹೊಡೆದುಕೊಳ್ಳುತ್ತಿದ್ದ ಅತಿ ಲಾಭವನ್ನು ತಾವೇ ಪಡೆದುಕೊಳ್ಳುವ ದಾರಿಯನ್ನೂ ಹಿಡಿಯುತ್ತಿದ್ದರು. ಇದರಿಂದ ಟಾಟಾರಂತಹ ಮುಂಬಯಿ ಭಾಗದಲ್ಲಿದ್ದ ಅಫೀಮು ವ್ಯಾಪಾರಿಗಳಿಗೆ ಅತಿ ಹೆಚ್ಚು ಲಾಭವಾಗುತ್ತಿತ್ತು. ಹೀಗೆ ಅತಿ ಹೆಚ್ಚು ಬಂಡವಾಳ ಶೇಖರವಾಯಿತು. ಮುಂದೆ ಅಫೀಮು ವ್ಯಾಪಾರದಲ್ಲಿ ಲಾಭ ಕಡಿಮೆಯಾಗತೊಡಗಿದಾಗ ಭಾರತದ, ಈಜಿಪ್ಟಿನ ಹತ್ತಿಯನ್ನು ಚೀನಾ ಮೊದಲಾದ ದೇಶಗಳಿಗೆ ಮಾರಿ ಅಲ್ಲಿಂದ ಟೀ, ರೇಷ್ಮೆ ತಂದು ಲಾಭ ಮಾಡಿಕೊಂಡರು.

(ಮುಂದುವರೆಯುತ್ತದೆ.)

ಎರಡು ರಾಜ್ಯಗಳ ವಿಧಾನಸಭಾ ಚುನಾವಣೆ

ಜಾತ್ಯಾತೀತ ಪಕ್ಷಗಳಿಗೆ ಹರಿಯಾಣ ಎಚ್ಚರಿಕೆ, ಜಮ್ಮು–ಕಾಶ್ಮೀರ ಆಶಾಕಿರಣ

ಹರಿಯಾಣ ವಿಧಾನಸಭಾ ಚುನಾವಣಾ ಪಲಿತಾಂಶವು ಎಕ್ಸಿಟ್ ಪೋಲ್ ಗಳು, ಸಮೀಕ್ಷೆಗಳು ಮತ್ತು ಕಾಂಗ್ರೆಸ್ ನ ನಿರೀಕ್ಷೆಗಳು ಎಲ್ಲವನ್ನೂ ಸಂಪೂರ್ಣವಾಗಿ ಸುಳ್ಳಾಗಿಸಿದೆ. ನೀವು ಸರಿಯಾಗಿ ಕೆಲಸ ಮಾಡದಿದ್ದರೆ ಗೆಲುವು ಸಾಧ್ಯವಿಲ್ಲವೆಂದು, ನಿಮ್ಮ ಸ್ವಹಿತಾಸಕ್ತಿ ಪಕ್ಷಕ್ಕೆ ಧಕ್ಕೆ ತಂದಿದೆಯೆಂದು ರಾಹುಲ್ ಗಾಂಧಿ ಸಿಟ್ಟಿಗೆದ್ದಿದ್ದಾರೆ ಎಂದರೆ ಅವರ ಪರಿಸ್ಥಿತಿ ಅರ್ಥವಾಗುತ್ತದೆ. ಜಮ್ಮು–ಕಾಶ್ಮೀರ ರಾಜ್ಯದಲ್ಲಿ ಒಮರ್ ಅಬ್ದುಲ್ಲಾ ಮತ್ತೊಮ್ಮೆ ಮುಖ್ಯಮಂತ್ರಿ ಹುದ್ದೆಯನ್ನು ಅಲಂಕರಿಸಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕ ಫಾರೂಕ್ ಅಬ್ದುಲ್ಲಾ ಘೋಷಿಸಿದ್ದಾರೆ. ಬಿಜೆಪಿ ಜಮ್ಮುವಿನಲ್ಲಿ ಸಂಪೂರ್ಣ ಗೆಲುವು ಸಾಧಿಸಿದೆ ಎಂಬ ಪ್ರಚಾರವೂ ಜೋರಾಗಿ ನಡೆಯುತ್ತಿದೆ.



Party	Won
Bharatiya Janata Party - BJP	48
Indian National Congress - INC	37
Indian National Lok Dal - INLD	2
Independent - IND	3
Total	90

Haryana

Party	Won
Jammu & Kashmir National Conference - JKN	42
Bharatiya Janata Party - BJP	29
Indian National Congress - INC	6
Jammu & Kashmir Peoples Democratic Party - JKPDP	3
Jammu & Kashmir People Conference - JPC	1
Communist Party of India (Marxist) - CPI(M)	1
Aam Aadmi Party - AAAP	1
Independent - IND	7
Total	90

Jammu & Kashmir

ಹರಿಯಾಣ ಮತ್ತು ಜಮ್ಮು–ಕಾಶ್ಮೀರ ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶದಿಂದ ದೇಶದ ರಾಜಕೀಯ ಚರ್ಚೆ ಹೊಸ ತಿರುವು ಪಡೆದುಕೊಂಡಿದೆ. ಕಳೆದ ಲೋಕಸಭೆ ಚುನಾವಣೆಯಲ್ಲಿ ಸೋಲು ಕಂಡಿದ್ದ ಬಿಜೆಪಿ ಹರಿಯಾಣದಲ್ಲಿ ಮಾತ್ರ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿದೆ. ಜಮ್ಮು ಮತ್ತು ಕಾಶ್ಮೀರದ 370 ನೇ ವಿಧಿಯನ್ನು ರದ್ದುಗೊಳಿಸುವ ಮೂಲಕ ಇಡೀ ದೇಶವನ್ನೇ ಗೆಲ್ಲಬಹುದು ಎಂದುಕೊಂಡಿದ್ದ ಬಿಜೆಪಿ ಜಮ್ಮು–ಕಾಶ್ಮೀರದಲ್ಲೇ ಸೋತಿದೆ. ನ್ಯಾಷನಲ್ ಕಾನ್ಫರೆನ್ಸ್ ಬಹಳ ಸಮಯದ ನಂತರ ಮತ್ತೆ ಅಧಿಕಾರಕ್ಕೆ ಬರುತ್ತಿದೆ. ಹರಿಯಾಣ ಪಲಿತಾಂಶ ಪ್ರತಿಪಕ್ಷಗಳಿಗೆ ಒಂದು ಎಚ್ಚರಿಕೆಯಾದರೆ, ಜಮ್ಮು–ಕಾಶ್ಮೀರ ರಾಜ್ಯದ ಫಲಿತಾಂಶ ಹೊಸ ಆಶಾಕಿರಣ ಮೂಡಿಸಿದೆ.

ಕೇಂದ್ರ ಎನ್‌ಡಿಎ ಮೈತ್ರಿಕೂಟದಲ್ಲಿರುವ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಹರಿಯಾಣದ ಗೆಲುವನ್ನು ಶ್ಲಾಘಿಸಿ ದ್ದಾರೆ. ತಿರುಪತಿ ಲಡ್ಡು ವಿವಾದವನ್ನು ಹರಿಯಾಣ ಮತ್ತು ಮಹಾರಾಷ್ಟ್ರ ಚುನಾವಣೆಯ ಸಂದರ್ಭದಲ್ಲಿ ಮುಂದೆ ತರಲಾಗಿದೆ ಎಂಬ ಟೀಕೆಯನ್ನು ತನ್ನ ಸಂಪಾದಕೀಯದಲ್ಲಿ ಪ್ರಸ್ತಾಪಿಸಿರುವ ಹಿಂದೂ ನಿಯತಕಾಲಿಕೆ, ಇದೀಗ ಅದನ್ನು ಕೋಮು ರಾಜಕಾರಣದತ್ತ ಮುಖ ಮಾಡದಿರಲಿ ಎಂದು ಮತ್ತೊಮ್ಮೆ ತನ್ನ ಆಶಯ ವ್ಯಕ್ತಪಡಿಸಿದೆ. ಆಂಧ್ರಪ್ರದೇಶ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರಂತಹವರು ಬಿಜೆಪಿಯನ್ನು ಮೀರಿ ಸನಾತನ ಧರ್ಮ ಮತ್ತು ಹಿಂದುತ್ವದ ವಾದಗಳೊಂದಿಗೆ ತೊಡಗಿಕೊಂಡಿರುವುದಕ್ಕೆ ಕಾರಣಗಳೇನು ಎಂಬ ಬಗ್ಗೆ ರಾಷ್ಟ್ರೀಯ ಮಾಧ್ಯಮಗಳಲ್ಲಿ ಇನ್ನಿಲ್ಲದ ಚರ್ಚೆ ನಡೆಯುತ್ತಿದೆ. ದೇಶದ ಹಿತಕ್ಕೆ ವಿರುದ್ಧವಾಗಿ ನಡೆಯುತ್ತಿರುವ ಷಡ್ಯಂತ್ರಗಳಿಗೆ ಕಾಂಗ್ರೆಸ್ ಸಹಕರಿಸುತ್ತಿದೆ ಎಂದು ಹರಿಯಾಣ ವಿಜಯೋತ್ಸವ ಸಭೆಯಲ್ಲಿ ಪ್ರಧಾನಿ ಮೋದಿ ಮಾಡಿರುವ ಹೇಳಿಕೆಯು ಬಿಜೆಪಿಯ ಮುಂದಿನ ಪ್ರಚಾರಗಳು ಹೇಗಿರಲಿವೆ ಎಂಬುದನ್ನು ಸೂಚಿಸುತ್ತಿದೆ. ಇದಲ್ಲದೇ, ಎಡ ಪಕ್ಷಗಳು ಮತ್ತು ಇತರ ಜಾತ್ಯತೀತ ಪಕ್ಷಗಳ ಮೇಲೆ ಮತ್ತು ಮುಂಬರುವ ದಿನಗಳಲ್ಲಿ ನಡೆಯುವ ಮಹಾರಾಷ್ಟ್ರ ಚುನಾವಣೆಯ ಮೇಲೆ ಹರಿಯಾಣದ ಚುನಾವಣಾ ಫಲಿತಾಂಶಗಳ ಪ್ರಭಾವ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ವಿವಿಧ ಅನಿಸಕೆಗಳು ಕೇಳಿಬರುತ್ತಿವೆ. ಮಹಾರಾಷ್ಟ್ರದಲ್ಲಿ 'ಇಂಡಿಯಾ' ವೇದಿಕೆಯ ಪ್ರಮುಖ ಪಕ್ಷವಾದ ಉದ್ಧವ್ ಠಾಕ್ರೆ ಅವರ ಶಿವಸೇನೆ ಸಂಸದ ಸಂಜಯ್ ರಾವುತ್ ಅವರು ಕಾಂಗ್ರೆಸ್ ನ ಅಹಂಕಾರದ ಕುರಿತು ಎಲ್ಲರಿಗಿಂತ ಅತ್ಯಂತ ಕಟುವಾದ ಟೀಕೆಗಳನ್ನು ಮಾಡಿರುವುದು ಆಕಸ್ಮಿಕವೇನಲ್ಲ.

ಕಾಂಗ್ರೆಸ್ ಪಕ್ಷದ ಸ್ವಯಂಕೃತ ಅಪರಾಧ

ಹರಿಯಾಣದಲ್ಲಿ ಕಾಂಗ್ರೆಸ್ ಸೋಲಿಗೆ ಪ್ರಮುಖ ಕಾರಣ ಆ ಪಕ್ಷದ ಸ್ವಯಂಕೃತ ಅಪರಾಧ ಎಂಬುದು ರಾಹುಲ್ ಗಾಂಧಿಯವರ ಮಾತುಗಳಿಂದ ಸ್ಪಷ್ಟವಾಗಿದೆ. ಉಳಿದ ನಾಯಕರನ್ನು ಪಕ್ಕಕ್ಕೆ ಸರಿಸಿ ಭೂಪೇಂದರ್ ಹೂಡಾ ಅವರೇ ಏಕೈಕ ನಾಯಕನಾಗಿ ಸ್ಪರ್ಧೆ ಮಾಡಬಹುದು ಎಂದುಕೊಂಡದ್ದು ಆ ಪಕ್ಷದ ಮೊದಲ ತಪ್ಪು. ತೆಲಂಗಾಣದಲ್ಲಿ ರೇವಂತ್ ರೆಡ್ಡಿ, ಕರ್ನಾಟಕದಲ್ಲಿ ಡಿ.ಕೆ.ಶಿವಕುಮಾರ್ ಅವರಂತಹ ಬಲಿಷ್ಠ ನಾಯಕರನ್ನು ನೆಚ್ಚಿಕೊಂಡಿದ್ದರಿಂದಲೇ ಗೆದ್ದಿದ್ದೇವೆ ಎಂದು ಕಾಂಗ್ರೆಸ್ ನಾಯಕತ್ವದ ತಂತ್ರಜ್ಞರು ಭಾವಿಸಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ನಾಯಕತ್ವದ ಸುತ್ತ ಸುತ್ತುತ್ತಿರುವ ಆಂತರಿಕ ಕಲಹದಲ್ಲಿ ಮುಳುಗೇಳುವ ಅಂಟು ಜಾಡ್ಯ ಆ ಪಕ್ಷವನ್ನು ಇನ್ನೂ ಬಿಟ್ಟುಹೋಗಿಲ್ಲ. ಬಿಜೆಪಿಯ ಮತೀಯ ತಂತ್ರಗಳು ಮತ್ತು ಜಾತಿ ಆಧಾರಿತ ನಡೆಗಳನ್ನು ದೃಢವಾಗಿ ಎದುರಿಸಲು ಕಾಂಗ್ರೆಸ್ ಹೆಚ್ಚು ಆಸಕ್ತಿ ತೋರಿಸಿಲ್ಲ. ಇದಕ್ಕೆ ಅನುಗುಣವಾಗಿಯೇ ಪ್ರಾದೇಶಿಕ ಪಕ್ಷಗಳು ಮತ್ತು ಸಂಘಟನೆಗಳು ತಮ್ಮ ಅಸ್ತಿತ್ವಕ್ಕಾಗಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಅಡಗಿ ಕುಳಿತುಕೊಳ್ಳುವ ಲಕ್ಷಣವನ್ನು ಮುಂದುವರೆಸುತ್ತಿವೆ. ಇವೆಲ್ಲವೂ ಹರಿಯಾಣದ ಫಲಿತಾಂಶದ ಮೇಲೆ ಪರಿಣಾಮ ಬೀರಿವೆ. ಮತೀಯ ಪ್ರಚೋದನೆಗಳ ಮೂಲಕ ವಿಭಜಕ ತಂತ್ರಗಳ ಮೂಲಕ ಅಧಿಕಾರಕ್ಕೆ ಬರಬೇಕು ಎಂಬ ಬಿಜೆಪಿಯ ತಂತ್ರಗಳನ್ನು ಸಮರ್ಥವಾಗಿ ಎದುರಿಸುದಕ್ಕೆ ಇವುಗಳೇ ಅಡ್ಡಿಯಾಗುತ್ತಿವೆ. ಜಾಟ್ ಪ್ರಬಲ ವರ್ಗಗಳ ಪ್ರತಿಬಿಂಬವಾದ ಹೂಡಾ ರವರನ್ನೇ ನಂಬಿರುವುದರಿಂದ ಇತರ ವರ್ಗಗಳ ಜನರು ದೂರವಾದರು ಎಂದು ಈಗ ಎಲ್ಲರೂ ಗುರುತಿಸುತ್ತಿದ್ದಾರೆ. ಅಷ್ಟೇ ಅಲ್ಲ, ಅವರನ್ನು ಏಕ ಬಿಂದುವನ್ನಾಗಿ ಮಾಡಿಕೊಂಡಿದ್ದರಿಂದ ಉಳಿದ ಪ್ರಮುಖ ನಾಯಕರು ಮತ್ತು ಬಣಗಳು ದೂರ ಸರಿದಿದ್ದಾರೆ. ಲೋಕಸಭೆ ಚುನಾವಣೆ ಮತ್ತು ವಿಧಾನಸಭೆ ಚುನಾವಣೆಗೂ ನಡುವಿನ ಕಾಂಗ್ರೆಸ್ ಮತಗಳಲ್ಲಿ ಬಂದಿರುವ ವ್ಯತ್ಯಾಸ ಅಚ್ಚರಿ ಉಂಟುಮಾಡಿದ್ದರೆ ಇದಕ್ಕೆ ಇವೆಲ್ಲವೂ ಕಾರಣಗಳೆ.

ಹರಿಯಾಣ ಫಲಿತಾಂಶ ವಿಶೇಷಗಳು

ಹರಿಯಾಣ ಚುನಾವಣೆಯ ಫಲಿತಾಂಶದ ಬಗ್ಗೆ ಹಲವು ಪ್ರತಿಕ್ರಿಯೆಗಳು ಬಂದಿವೆಯಾದರೂ, ಲೋಕಸಭೆ ಚುನಾವಣೆಯ ಸಮಯಕ್ಕೂ ಇಂದಿನದಕ್ಕೂ ಕಾಂಗ್ರೆಸ್ ಪಕ್ಷಕ್ಕೆ ಬಂದಿರುವ ಈ ಪ್ರಮಾಣದ ವ್ಯತ್ಯಾಸವು ನಿಜವಾಗಿಯೂ ಆಘಾತಕಾರಿಯಾಗಿದೆ. ಕನಿಷ್ಠ 36 ವಿಧಾನಸಭಾ ಕ್ಷೇತ್ರಗಳಲ್ಲಿ ಅದರ ಮತಗಳು ಅಂದಿಗಿಂತ ಹತ್ತು ಸಾವಿರಕ್ಕೂ ಹೆಚ್ಚು ಕುಸಿದವು. 18 ಸ್ಥಾನಗಳಲ್ಲಿ ಅದು ತಲಾ 20 ಸಾವಿರದಷ್ಟು ಕಡಿಮೆಯಾಗಿದೆ. 28 ಕ್ಷೇತ್ರಗಳಲ್ಲಿ ಐದನೇ ಒಂದು ಭಾಗದಷ್ಟು ಮತ ಕಡಿಮೆಯಾಗಿದೆ. ಅದಕ್ಕಿಂತ ಮುಖ್ಯವಾಗಿ, ಹುಡಾ ಕುಟುಂಬದ ಕ್ಷೇತ್ರವಾದ ರೋಹ್ಟಕ್ ಲೋಕಸಭಾ ಕ್ಷೇತ್ರದ ಒಂಬತ್ತು ವಿಧಾನಸಭಾ ಸ್ಥಾನಗಳಲ್ಲಿ ಆಗ 7.83 ಲಕ್ಷ ಮತಗಳು ಬಂದಿದ್ದರೆ, ಈಗ ಕೇವಲ 5.93 ಲಕ್ಷ ಬಂದಿವೆ. ಅಂದರೆ ಸುಮಾರು ಎರಡು ಲಕ್ಷ ಮತಗಳು ಕಡಿಮೆಯಾಗಿವೆ. ವಾಸ್ತವವಾಗಿ, ಹರಿಯಾಣದಾದ್ಯಂತ ಲೋಕಸಭೆ ಚುನಾವಣೆಗಳಿಗೆ ಹೋಲಿಸಿದರೆ, ವಿಧಾನಸಭೆಯಲ್ಲಿ ಕಾಂಗ್ರೆಸ್ ಕಳೆದ ಎರಡು ಬಾರಿ ಪುನರುತ್ಥಾನಗೊಂಡಿತ್ತು. ಈಗ ಅದು ವ್ಯತಿರಿಕ್ತವಾಗಿದೆ. ಪಕ್ಷದಲ್ಲಿನ ಗುಂಪು ಕಲಹಗಳಿಂದಾಗಿ, ಟಿಕೆಟ್ ಸಿಗದವರು ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರಿಂದ ಅಥವಾ ಮತಗಳನ್ನು ಬೇರೆಡೆಗೆ ತಿರುಗಿಸಿದ್ದರಿಂದ ಇದು ಸಂಭವಿಸಿದೆ ಎಂದು ಭಾವಿಸಬೇಕಿಲ್ಲ. ಮೂಲ ಅಭ್ಯರ್ಥಿಗಳಿಗಿಂತ ಬಂಡಾಯದ ಅಭ್ಯರ್ಥಿಗಳೇ ಹೆಚ್ಚು ಮತ ಪಡೆದ ಕ್ಷೇತ್ರಗಳೂ ಇವೆ. ಬಿಜೆಪಿ ಪಡೆದ ಒಟ್ಟು ಮತಗಳು ಬಹಳಷ್ಟೇನೂ ಹೆಚ್ಚಿಲ್ಲವಾದರೂ ಸೀಟುಗಳು ಭಾರೀ ಪ್ರಮಾಣದಲ್ಲಿ ಹೆಚ್ಚಿದವು. ಕಾಂಗ್ರೆಸ್ ನ ಮತಗಳು ಊಹೆಗೂ ನಿಲುಕದಷ್ಟು ಕುಸಿದಿದೆ. 2014ರಲ್ಲಿ ಗಳಿಸಿದ್ದಕ್ಕಿಂತ ಹೆಚ್ಚು ಸ್ಥಾನಗಳನ್ನು ಅಂದರೆ 48 ಸ್ಥಾನಗಳನ್ನು ಬಿಜೆಪಿ ಗಳಿಸಿದರೆ, ಕಾಂಗ್ರೆಸ್ ಗೆ 37 ಸ್ಥಾನಗಳು ಬಂದವು. ಐಎನ್‌ಎಲ್ಡಿ ಎರಡು ಸ್ಥಾನದಲ್ಲಿ ಗೆಲುವು ಸಾಧಿಸಿದ್ದರೆ, ಮೂವರು ಸ್ವತಂತ್ರ ಅಭ್ಯರ್ಥಿಗಳು ಕೂಡಾ ಗೆದ್ದಿದ್ದಾರೆ.

ಕಾಂಗ್ರೆಸ್‌ನ ಅನೈಕ್ಯತೆ ಮತ್ತು ಎಎಪಿಯಂತಹ ಪಕ್ಷಗಳನ್ನು ದೂರವಿಟ್ಟಿದ್ದು

ಬಿಜೆಪಿ ಶೇಕಡಾ 39.9 ಮತಗಳನ್ನು ಪಡೆದು ಶೇಕಡಾ 53.3 ಸ್ಥಾನಗಳು ದೊರಕಿಸಿಕೊಂಡಿದೆ ಎಂದರೆ, ಐಎನ್‌ಎಲ್ಡಿ, ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮತ್ತು HLP ಮೈತ್ರಿಯ ದೋಷಪೂರಿತ ಅರಿವು ಪ್ರಮುಖ ಪಾತ್ರವನ್ನು ವಹಿಸಿದೆ. ಸಿಸ್ರಾ ಸ್ಥಾನದಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಹಿಂಪಡೆದುಕೊಂಡು ಈ ಮೈತ್ರಿಗೆ ತನ್ನ ಬೆಂಬಲವನ್ನು ಘೋಷಿಸಿತು. ಉಳಿದ ಕಡೆಗಳಲ್ಲಿ ಪರಸ್ಪರ ತಿಳುವಳಿಕೆಯ ಪ್ರಕಾರ ಮತಗಳ ವರ್ಗಾವಣೆ ನಡೆದಿದೆ ಎನ್ನುತ್ತಾರೆ ವೀಕ್ಷಕರು. ಸಿಸ್ರಾ ಲೋಕಸಭೆ ಕ್ಷೇತ್ರವನ್ನೇ ತೆಗೆದುಕೊಂಡರೆ, ಮೂರು ವಿಧಾನಸಭಾ ಸ್ಥಾನಗಳಲ್ಲಿ ಬಿಜೆಪಿಯ ಮತಗಳು ತೀವ್ರವಾಗಿ ಕುಸಿದಿದ್ದರೆ, ಇತರ ಮೂರು ಸ್ಥಾನಗಳಲ್ಲಿ ಅದು ಗಮನಾರ್ಹವಾಗಿ ಹೆಚ್ಚಾಗಿದೆ. ಅಂದರೆ ಇಲ್ಲಿ ಒಂದು ತಿಳುವಳಿಕೆ ಪ್ರಕಾರವೇ ಪರಸ್ಪರ ಗೆದ್ದಿದ್ದಾರೆ ಎಂಬ ಅನುಮಾನ ಮೂಡುವುದು ಸಹಜ. 18 ಸಾವಿರ ಮತಗಳನ್ನು ಕಳೆದುಕೊಂಡ ಕಾಂಗ್ರೆಸ್ ಮೂರು ವಿಧಾನಸಭೆಗಳನ್ನು ಕಳೆದುಕೊಂಡರೆ, ಅದರಲ್ಲಿ ಎರಡು ಐಎನ್‌ಎಲ್‌ಡಿ ಮತ್ತು ಒಂದು ಬಿಜೆಪಿಗೆ ಬಂದವು. ಇನ್ನು ಕೆಲವೆಡೆ ಈ ಮೈತ್ರಿಕೂಟಕ್ಕೆ ಬಂದ ಮತಗಳಲ್ಲಿ ಬಿಜೆಪಿಗೆ ಬಂದ ಮತಗಳಿಗಿಂತ ಹೆಚ್ಚಿಗೆ ಇವೆ. ಹೀಗಾಗಿ ಬೇಕೆಂತಲೇ ಪೈಪೋಟಿಗೆ ಮುಂದಾಗಿದ್ದಾರೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ. ಚುನಾವಣೆಗಳಲ್ಲಿ ಇದೆಲ್ಲವೂ ಅಸಾಮಾನ್ಯವೇನಲ್ಲ, ಆದರೆ ಕಾಂಗ್ರೆಸ್‌ನ ಅನೈಕ್ಯತೆ ಮತ್ತು ಎಎಪಿಯಂತಹ ಪಕ್ಷಗಳನ್ನು ದೂರವಿಡುವಿಕೆಯು ತೀವ್ರ ಹೊಡೆತವನ್ನು ಅನುಭವಿಸಲು ಕಾರಣವಾಯಿತು. ಐಎನ್‌ಎಲ್‌ಡಿ ಜಾಟ್ ರು ಮತ್ತು ದಲಿತರ ಮತಗಳಿಗಾಗಿ ಕಾಂಗ್ರೆಸ್‌ನೊಂದಿಗೆ ಸ್ಪರ್ಧೆ ಉಂಟಾಗಿತ್ತು ಎಂಬುದನ್ನು ನೆನಪಿನಲ್ಲಿಡಬೇಕು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಲ್ಪಸಂಖ್ಯಾತರ ಗುಂಪುಗಳು ಕಾಂಗ್ರೆಸ್ಗೆ ಮತ ನೀಡಿದರೂ ಬಿಜೆಪಿಯ ಕೋಮುವಾದಿ ದಾಳಿಯನ್ನು ಪಕ್ಷ ಪ್ರಬಲವಾಗಿ ಎದುರಿಸಲಿಲ್ಲ ಎಂಬ ಅಸಮಾಧಾನವೂ ಅವರಲ್ಲಿತ್ತು. ಎಎಪಿ 89 ಸ್ಥಾನಗಳಲ್ಲಿ ಸ್ಪರ್ಧಿಸಿ ಶೇ. 1.8ರಷ್ಟು ಮತಗಳನ್ನು ಪಡೆದಿತ್ತು. ಒಂದು ಊಹೆ ಎಂದರೆ ಈ ಎರಡು ಪಕ್ಷಗಳು ಒಂದಾಗಿದ್ದರೆ ಪರಿಸ್ಥಿತಿ ತುಂಬಾ ಬದಲಾಗುತ್ತಿತ್ತು. ಈ ವಿಚಾರದಲ್ಲಿ ಸಮಾಜವಾದಿ ಪಕ್ಷವೂ ಅಸಮಾಧಾನ ವ್ಯಕ್ತಪಡಿಸಿದೆ.



ಇವಿಎಂಗಳು, ಇತರೆ ಪಕ್ಷಗಳು...

ಇನ್ನು ಹತ್ತು ಸ್ಥಾನಗಳಲ್ಲಿ ಇವಿಎಂಗಳನ್ನು ಟ್ಯಾಂಪರಿಂಗ್ ಮಾಡಲಾಗಿದೆ ಎಂದು ಕಾಂಗ್ರೆಸ್ ದೂರಿದೆ. ನಾವು ಈ ಫಲಿತಾಂಶಗಳನ್ನು ಒಪ್ಪಿಕೊಳ್ಳುವುದಿಲ್ಲ

ಪುಟ 14 ಕ್ಕೆ



ಸಿಪಿಐ(ಎಂ) ತನ್ನ ಆಂತರಿಕ ಪ್ರಜಾಪ್ರಭುತ್ವವನ್ನು ಕಟ್ಟುನಿಟ್ಟಿನಿಂದ ಆಚರಿಸುವ ಒಂದು ರಾಜಕೀಯ ಪಕ್ಷ. ಇದರಲ್ಲಿ ಸಮ್ಮೇಳನಗಳು ಪ್ರಮುಖ ಪಾತ್ರ ವಹಿಸುತ್ತವೆ. ಪ್ರತಿ 3 ವರ್ಷಗಳಿಗೊಮ್ಮೆ ನಡೆಯುವ ಪಕ್ಷದ ಮಹಾಧಿವೇಶನಕ್ಕೆ ಮೂರು ತಿಂಗಳ ಮೊದಲು ಕರಡು ರಾಜಕೀಯ ನಿರ್ಣಯವನ್ನು ಪಕ್ಷವು ಸಾರ್ವಜನಿಕಗೊಳಿಸುತ್ತದೆ. ಪಕ್ಷದ ಘಟಕಗಳು ಮತ್ತು ಸದಸ್ಯರು ಕರಡು ರಾಜಕೀಯ ನಿರ್ಣಯದ ಬಗ್ಗೆ ಪ್ರತಿಕ್ರಿಯಿಸಲು ಮತ್ತು ತಿದ್ದುಪಡಿಗಳನ್ನು ಸೂಚಿಸಲು ಅವಕಾಶ ನೀಡಲಾಗುತ್ತದೆ. ಪಕ್ಷದ ರಾಜಕೀಯ ನೀತಿಯನ್ನು ರೂಪಿಸುವಲ್ಲಿ ಎಲ್ಲಾ ಘಟಕಗಳು, ಪಕ್ಷದ ಎಲ್ಲಾ ಸದಸ್ಯರು ಭಾಗವಹಿಸಲು ಅವಕಾಶ ನೀಡಲಾಗುತ್ತದೆ.

ಸಿಪಿಐ(ಎಂ) ಸಮ್ಮೇಳನಗಳು:

ಪಕ್ಷದ ರಾಜಕೀಯ ನೀತಿಗಳನ್ನು ರೂಪಿಸುವ ಮತ್ತು ನಾಯಕತ್ವವನ್ನು ಆಯ್ಕೆ ಮಾಡುವ ಪ್ರಜಾಸತ್ತಾತ್ಮಕ ಪ್ರಕ್ರಿಯೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) (CPIM)ನ 24ನೇ ಮಹಾಧಿವೇಶನ 2025 ಏಪ್ರಿಲ್ 2 ರಿಂದ 6 ರವರೆಗೆ ತಮಿಳುನಾಡಿನ ಮದುರೈನಲ್ಲಿ ನಡೆಯಲಿದೆ. ಮಹಾಧಿವೇಶನದಲ್ಲಿ ಮುಂದಿನ ಮೂರು ವರ್ಷಗಳ ಕಾಲ ಪಕ್ಷದ ರಾಜಕೀಯ ನಿರ್ದೇಶನವನ್ನು ರೂಪಿಸಲಾಗುವುದು. ಮಹಾಧಿವೇಶನದ ಅಂಗವಾಗಿ ರಾಜ್ಯದಾದ್ಯಂತ ಶಾಖೆ (ಪಕ್ಷದ ಪ್ರಾಥಮಿಕ ಘಟಕ) ಗಳಿಂದ ಆರಂಭಿಸಿ ಸ್ಥಳೀಯ ಸಮಿತಿ, ವಯಲ ಸಮಿತಿ, ತಾಲೂಕು ಸಮಿತಿ, ಜಿಲ್ಲಾ ಸಮಿತಿ ಸಮ್ಮೇಳನಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯ ಸಮ್ಮೇಳನವು 29,30,31 ಡಿಸೆಂಬರ್ 2024 ರಂದು ಮೂರು ದಿನಗಳ ಕಾಲ ತುಮಕೂರು ನಗರದಲ್ಲಿ ನಡೆಯಲಿದೆ. 2022ರಲ್ಲಿ ಪಕ್ಷದ ಕೊನೆಯ ಮಹಾಧಿವೇಶನ ನಡೆದಿತ್ತು.

ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ರಚನೆ

ರಷ್ಯಾದ ಕ್ರಾಂತಿಯ ನಂತರ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ)ವನ್ನು ಅಕ್ಟೋಬರ್ 17, 1920ರಂದು ತಾಷ್ಕೆಂಟ್ (ಉಜ್ಬೇಕಿಸ್ತಾನ್ ರಾಜಧಾನಿ)ನಲ್ಲಿ ನಡೆದ ಭಾರತದ ಕ್ರಾಂತಿಕಾರಿಗಳ ಸಭೆಯಲ್ಲಿ ರಚಿಸಲಾಯಿತು. ಪಕ್ಷದ ಮೊದಲ ಕಾರ್ಯದರ್ಶಿಯಾಗಿ ಮೊಹಮ್ಮದ್ ಶಫೀಕ್ ಆಯ್ಕೆಯಾದರು. ಭಾರತದ ನೆಲದಲ್ಲಿ ಮೊದಲ ಕಮ್ಯುನಿಸ್ಟ್ ಪಕ್ಷದ ಸಭೆಯು 1925ರ ಡಿಸೆಂಬರ್ 28ರಿಂದ 30ರವರೆಗೆ ಕಾನ್ಪುರದಲ್ಲಿ ನಡೆಯಿತು. ಆಗ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷರು ಭಾರತದಲ್ಲಿ ಸಮತಾವಾದವನ್ನು ಕಿತ್ತುಹಾಕಲು ದೃಢ ನಿಶ್ಚಯ ಮಾಡಿದ್ದರು. ಚಿಗುರೊಡೆಯುತ್ತಿದ್ದ ಕಮ್ಯೂನಿಸ್ಟ್ ಗುಂಪುಗಳ ಮೇಲೆ ಬ್ರಿಟಿಷರು ತೀವ್ರತರವಾದ ದಮನವನ್ನು ಹರಿಯಬಿಟ್ಟರು. ಇಷ್ಟು ಮಾತ್ರವಲ್ಲ, ಭಾರತದಲ್ಲಿ ಕ್ರಾಂತಿಕಾರಿ ವಿಚಾರಗಳು ಹರಡುವುದನ್ನು ತಡೆಯಲು ಕಮ್ಯುನಿಸ್ಟ್ ಸಾಹಿತ್ಯವನ್ನೇ ನಿಷೇಧಿಸಿದರು. ಕಮ್ಯುನಿಸ್ಟ್ ಆಂದೋಲನದ ಯುವ ನಾಯಕತ್ವದ ವಿರುದ್ಧ ಪೇಶಾವರ್ (1922), ಕಾನ್ಪುರ್ (1924) ಮತ್ತು ಮೀರತ್ (1929) ಪಿತೂರಿ ಮೊಕದ್ದಮೆಗಳ ಸರಣಿಯನ್ನೇ ಹೆಣೆದರು. 1920ರ ದಶಕದಲ್ಲಿ ಪಕ್ಷ ಸ್ಥಾಪನೆಯಾದ ಸ್ವಲ್ಪವೇ ಸಮಯದಲ್ಲಿ ಪಕ್ಷವನ್ನು ಕಾನೂನುಬಾಹಿರ ಎಂದು ಘೋಷಿಸಲಾಯಿತು. ನಂತರದ ಎರಡು ದಶಕಗಳವರೆಗೆ ಪಕ್ಷವು ಕಾನೂನುಬಾಹಿರ ಪರಿಸ್ಥಿತಿಗಳಲ್ಲಿ ಕಾರ್ಯನಿರ್ವಹಿಸಬೇಕಾಯಿತು. (ಸಿಪಿಐ–ಎಂ ಪಕ್ಷದ ಕಾರ್ಯಕ್ರಮ 1.5)

ಆದ್ದರಿಂದ, ಕಮ್ಯೂನಿಸ್ಟ್ ಪಕ್ಷದ ಮೊದಲ ಅಧಿವೇಶನವನ್ನು 1943ರಲ್ಲಿ ಮಾತ್ರ ಕರೆಯಲಾಯಿತು. ಈ ಅಧಿವೇಶನವು ಮೇ 23ರಿಂದ ಜೂನ್ 1 ರವರೆಗೆ ಮುಂಬೈನಲ್ಲಿ ಸಭೆ ಸೇರಿತ್ತು. ಐದು ವರ್ಷಗಳ ನಂತರ, 1948ರಲ್ಲಿ, ಎರಡನೇ ಅಧಿವೇಶನವು ಕಲ್ಕತ್ತಾದಲ್ಲಿ ನಡೆಯಿತು. ಕಲ್ಕತ್ತಾ ಪ್ರಬಂಧಕ್ಕಾಗಿ ಪಕ್ಷವನ್ನು ಬೇಟೆಯಾಡಲಾಯಿತು. ಈ ರೀತಿಯಲ್ಲಿ, ಭಾರತದಲ್ಲಿ ಕಮ್ಯೂನಿಸ್ಟ್ ಚಳವಳಿಯು ಮೊದಲಿನಿಂದಲೂ ಅನೇಕ ಬಿಕ್ಕಟ್ಟುಗಳನ್ನು ನಿವಾರಿಸಿಕೊಂಡು ಬೆಳೆಯಿತು.

1964ರಲ್ಲಿ ಸಿಪಿಐ(ಎಂ) ರಚನೆ

ತೀವ್ರವಾದ ಸೈದ್ಧಾಂತಿಕ ಹೋರಾಟದ ಪರಿಣಾಮವಾಗಿ, ಕ್ರಾಂತಿಯನ್ನು ಉತ್ತೇಜಿಸಲು 1964ರಲ್ಲಿ ಸಿಪಿಐ(ಎಂ)–ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕಿಸ್ಟ್)– ರಚನೆಯಾಯಿತು. ಈ ಹಂತದಲ್ಲಿ, ಪಕ್ಷದ ಸಮ್ಮೇಳನಗಳನ್ನು ಸೇರುವ ಮೂಲಕ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಮುನ್ನಡೆಸಲು ಪಕ್ಷವು ಪ್ರಯತ್ನಿಸುತ್ತಿದೆ. ಏಪ್ರಿಲ್ 2022ರಲ್ಲಿ, 23ನೇ ಪಕ್ಷದ ಮಹಾಧಿವೇಶನ ಕಣ್ಣೂರಿನಲ್ಲಿ ನಡೆಯಿತು. ತದನಂತರದ ರಾಜಕೀಯ ಮತ್ತು ಸಾಂಸ್ಥಿಕ ಸಮಸ್ಯೆಗಳು ಮತ್ತು ಪ್ರತಿಯೊಂದು ಘಟಕಗಳ ಸದಸ್ಯರ ಚಟುವಟಿಕೆಗಳು ಮತ್ತು ದೌರ್ಬಲ್ಯಗಳ ಮೌಲ್ಯಮಾಪನ ಮತ್ತು ಕೂಲಂಕಷವಾಗಿ ಚರ್ಚಿಸಬೇಕಾದ ಸಂದರ್ಭವೇ ಈ 24ನೇ ಪಕ್ಷದ ಮಹಾಧಿವೇಶನ. ಎಲ್ಲಾ ಕಮ್ಯೂನಿಸ್ಟ್ ಪಕ್ಷಗಳಲ್ಲಿರುವಂತೆ, ಈ ಪರೀಕ್ಷೆಗಳನ್ನು ಸ್ವಯಂ ವಿಮರ್ಶೆಯ ತತ್ವದ ಮೇಲೆ ನಡೆಸಲಾಗುತ್ತದೆ.

ಕಮ್ಯೂನಿಸ್ಟ್ ಪಕ್ಷಗಳು ಜನರ ಹಿತಾಸಕ್ತಿಗಳಿಗೆ ಅನುಗುಣವಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ನೀತಿಗಳನ್ನು ರೂಪಿಸುತ್ತವೆ. ಶಾಖಾ ಮಟ್ಟದಿಂದ ಪಕ್ಷದ ಮಹಾಧಿವೇಶನದ ವರೆಗಿನ ಸಮ್ಮೇಳನಗಳು ಅದಕ್ಕೆ ಮುಖ್ಯ ವೇದಿಕೆಗಳಾಗಿವೆ. ಜನರ ವಿಶ್ವಾಸ ಗಳಿಸಲು ಮತ್ತು ಎಡಪಕ್ಷಗಳು ಬೆಳೆಯಲು ಸುಲಭವಾದ ಮಾರ್ಗವಿಲ್ಲ ಎಂಬ ದೃಢ ಮನವರಿಕೆಯೊಂದಿಗೆ ಮುನ್ನಡೆಯಲು ಚರ್ಚೆ ಮತ್ತು ನೀತಿ ನಿರೂಪಣೆಗಾಗಿ ಸಿಪಿಐ(ಎಂ) ಈ ಸಮ್ಮೇಳಗಳನ್ನು ನಡೆಸುತ್ತದೆ.

ಆಂತರಿಕ ಪ್ರಜಾಪ್ರಭುತ್ವವನ್ನು ಕಟ್ಟುನಿಟ್ಟಿನಿಂದ ಆಚರಿಸುವ ಪಕ್ಷ

ಆಂತರಿಕ ಪ್ರಜಾಪ್ರಭುತ್ವವನ್ನು ಕಟ್ಟುನಿಟ್ಟಿನಿಂದ ಆಚರಿಸುವ ರಾಜಕೀಯ ಪಕ್ಷವೆಂದರೆ ಅದು ಸಿಪಿಐ(ಎಂ). ಇದರಲ್ಲಿ ಸಮ್ಮೇಳನಗಳು ಪ್ರಮುಖ ಪಾತ್ರ ವಹಿಸುತ್ತವೆ. ಪ್ರತಿ 3 ವರ್ಷಗಳಿಗೊಮ್ಮೆ ಶಾಖೆಗಳಿಂದ ಆರಂಭಿಸಿ ಎಲ್ಲ ಹಂತದ ಸಮ್ಮೇಳನಗಳು ನಡೆಯುತ್ತವೆ. ಶಾಖೆಗಳ ಸಮ್ಮೇಳನದಲ್ಲಿ ಆ ಶಾಖೆಯ ಎಲ್ಲಾ ಸದಸ್ಯರೂ ಭಾಗವಹಿಸುತ್ತಾರೆ. ಶಾಖಾ ಸಮ್ಮೇಳನದಲ್ಲಿ ನೂತನ ಶಾಖಾ ಕಾರ್ಯದರ್ಶಿಯನ್ನು ಆಯ್ಕೆ ಮಾಡಲಾಗುತ್ತದೆ. ಸ್ಥಳೀಯ, ವಯಲ, ತಾಲೂಕು, ಜಿಲ್ಲಾ ಸಮ್ಮೇಳನಗಳು ತಮ್ಮ ಮಟ್ಟದ ಕಾರ್ಯದರ್ಶಿಗಳನ್ನು ಮತ್ತು ಸಮಿತಿಗಳ ಸದಸ್ಯರನ್ನು ಆಯ್ಕೆಮಾಡಿಕೊಳ್ಳುತ್ತವೆ.

ಶಾಖೆಗಳೂ ಸೇರಿದಂತೆ ಪ್ರತಿಯೊಂದು ಸಮಿತಿಗಳ ಸಮ್ಮೇಳನಗಳಲ್ಲಿ ಮೇಲಿನ ಹಂತದ ಸಮ್ಮೇಳನಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಎಲ್ಲಾ ಸಮ್ಮೇಳನಗಳಲ್ಲಿಯೂ ಸ್ಥಳೀಯ ಜನಸಾಮಾನ್ಯರ ಸಮಸ್ಯೆಗಳ ಕುರಿತಂತೆ, ರಾಜ್ಯ, ದೇಶ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳ ಕುರಿತಂತೆ ಚರ್ಚಿಸಲಾಗುತ್ತದೆ. ಸಮ್ಮೇಳನದಲ್ಲಿ ಕಳೆದ ಮೂರು ವರ್ಷಗಳಿಂದ ಪಕ್ಷದ ಕಾರ್ಯವೈಖರಿಯನ್ನು ಆಧರಿಸಿ ಸಮಿತಿಯ ಕಾರ್ಯದರ್ಶಿ ವರದಿ ಮಂಡಿಸುತ್ತಾರೆ. ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ವರದಿಯ ಮೇಲೆ ಚರ್ಚೆ ನಡೆಸಿದ ನಂತರ ಅದನ್ನು ಅಂಗೀಕರಿಸಲಾಗುತ್ತದೆ. ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಪಕ್ಷವು ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಜನಸಾಮಾನ್ಯರ ಸಮಸ್ಯೆಗಳ ಕುರಿತು ಜನಾಂದೋಲನವನ್ನು ಸಂಘಟಿಸಲು ಸಮ್ಮೇಳನವು ಸ್ಪಷ್ಟ ಕರೆ ನೀಡುತ್ತದೆ.

ಜಿಲ್ಲಾ ಸಮ್ಮೇಳನಗಳದಲ್ಲಿ ರಾಜ್ಯ ಸಮ್ಮೇಳನಕ್ಕೆ ಮತ್ತು ರಾಜ್ಯ ಸಮ್ಮೇಳನವು ಪಕ್ಷದ ಮಹಾಧಿವೇಶನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತವೆ. ರಾಜ್ಯ ಸಮ್ಮೇಳನವು ರಾಜ್ಯದಲ್ಲಿ ಪಕ್ಷದ ರಾಜಕೀಯ ನಿಲುಮೆ ಹಾಗೂ ಸಂಘಟನಾ ಯೋಜನೆಗಳನ್ನು ನಿರ್ಧರಿಸುತ್ತದೆ. ಹಿಂದಿನ ರಾಜಕೀಯ–ಸಂಘಟನಾ ಚಟುವಟಿಕೆಗಳನ್ನು ವಿಮರ್ಶಿಸಿ ವರದಿಯನ್ನು ಅಂಗೀಕರಿಸುತ್ತದೆ. ರಾಜ್ಯ ಸಮಿತಿಯನ್ನು ಆರಿಸುತ್ತದೆ.

ದೇಶಕ್ಕೆ ಪಕ್ಷದ ಅತ್ಯುನ್ನತ ಅಂಗವೆಂದರೆ ಪಕ್ಷದ ಅಖಿಲ ಭಾರತ ಮಹಾಧಿವೇಶನ. ಪಕ್ಷದ ಮಹಾಧಿವೇಶನವನ್ನು ಕೇಂದ್ರ ಸಮಿತಿಯು ಸಾಮಾನ್ಯವಾಗಿ ಮೂರು ವರ್ಷಗಳಿಗೊಮ್ಮೆ ಕರೆಯುತ್ತದೆ. ಮಹಾಧಿವೇಶನ ಪಕ್ಷದ ಕೇಂದ್ರ ಸಮಿತಿಯನ್ನು ಆರಿಸುತ್ತದೆ. ಪಕ್ಷದ ಸಂವಿಧಾನವನ್ನು ಜಾರಿಗೊಳಿಸುವ, ಪಕ್ಷದ ಮಹಾಧಿವೇಶನದಲ್ಲಿ ಸ್ವೀಕರಿಸಲಾದ ರಾಜಕೀಯ ಧೋರಣೆ ಮತ್ತು ನಿರ್ಣಯಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿ ಕೇಂದ್ರ ಸಮಿತಿಯದ್ದಾಗಿರುತ್ತದೆ. ಮುಂದಿನ ಮಹಾಧಿವೇಶನದವರೆಗೆ ಪಕ್ಷದ ರಾಜಕೀಯ ನಿಲುಮೆ, ಸಂಘಟನಾ ಯೋಜನೆಗಳನ್ನು ನಿರ್ಧರಿಸುತ್ತದೆ.

ಕೇಂದ್ರ ಸಮಿತಿಯು ಪ್ರಧಾನ ಕಾರ್ಯದರ್ಶಿಯನ್ನು ಮತ್ತು ಪಾಲಿಟ್ ಬ್ಯೂರೋ (ರಾಜಕೀಯ ಮಂಡಳಿ)ವನ್ನು ಆಯ್ಕೆಮಾಡುತ್ತದೆ. ಕೇಂದ್ರ ಸಮಿತಿಯ ಎರಡು ಸಭೆಗಳ ನಡುವಿನ ಅವಧಿಯಲ್ಲಿ ಕೇಂದ್ರ ಸಮಿತಿಯ ಕೆಲಸ ಕಾರ್ಯಗಳನ್ನು ಪೊಲಿಟ್ ಬ್ಯೂರೋ ನಡೆಸಿಕೊಂಡು ಹೋಗುತ್ತದೆ.

ಕೇಂದ್ರ ಸಮಿತಿಯು ತನ್ನ ಸದಸ್ಯರಿಂದಲೇ ಒಂದು ಕಾರ್ಯದರ್ಶಿ ಮಂಡಳಿಯನ್ನು ಆಯ್ಕೆಮಾಡುತ್ತದೆ. ಇದು ಪೊಲಿಟ್ ಬ್ಯೂರೋ ಮಾರ್ಗದರ್ಶನದಲ್ಲಿ ಪಕ್ಷದ ದೈನಂದಿನ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತದೆ. ಮತ್ತು ಕೇಂದ್ರ ಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲು ಪೊಲಿಟ್ ಬ್ಯೂರೋ ಗೆ ಸಹಾಯ ಮಾಡುತ್ತದೆ.

ಮೂರು ತಿಂಗಳ ಮೊದಲು ಕರಡು ರಾಜಕೀಯ ನಿರ್ಣಯ

ಪಕ್ಷದ ರಾಜಕೀಯ ನೀತಿಯನ್ನು ರೂಪಿಸುವಲ್ಲಿ ಎಲ್ಲಾ ಘಟಕಗಳು, ಪಕ್ಷದ ಎಲ್ಲಾ ಸದಸ್ಯರು ಭಾಗವಹಿಸಲು ಸಿಪಿಐ(ಎಂ) ಅವಕಾಶ ನೀಡುತ್ತದೆ. ಪಕ್ಷದ ಮಹಾಧಿವೇಶನಕ್ಕೆ ಮೂರು ತಿಂಗಳ ಮೊದಲು ಕರಡು ರಾಜಕೀಯ ನಿರ್ಣಯವನ್ನು ಪಕ್ಷವು ಸಾರ್ವಜನಿಕಗೊಳಿಸುತ್ತದೆ. ಪಕ್ಷದ ಘಟಕಗಳು ಮತ್ತು ಸದಸ್ಯರು ಕರಡು ರಾಜಕೀಯ ನಿರ್ಣಯದ ಬಗ್ಗೆ ಪ್ರತಿಕ್ರಿಯಿಸಲು ಮತ್ತು ತಿದ್ದುಪಡಿಗಳನ್ನು ಸೂಚಿಸಲು ಅವಕಾಶ ನೀಡಲಾಗುತ್ತದೆ. ಈ ರೀತಿ ಬಂದ ಎಲ್ಲಾ ತಿದ್ದುಪಡಿಗಳನ್ನು ಪರಿಶೀಲಿಸಿ ಕರಡಿನ ಭಾಗವಾಗಿ ಅಂಗೀಕರಿಸಬೇಕಾದವುಗಳನ್ನು ತೆಗೆದುಕೊಂಡು, ಅಲ್ಲದವುಗಳನ್ನು ತಿರಸ್ಕರಿಸಿದ ನಂತರ, ಕರಡು ರಾಜಕೀಯ ನೀತಿಯನ್ನು ಪಕ್ಷದ ಮಹಾಧಿವೇಶನಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗುತ್ತದೆ. ಪಕ್ಷದ ಮಹಾಧಿವೇಶನವು ಪ್ರತಿನಿಧಿಗಳ ಚರ್ಚೆಯ ಆಧಾರದ ಮೇಲೆ ಈ ನಿರ್ಣಯವನ್ನು ಮತ್ತೊಮ್ಮೆ ನವೀಕರಿಸಲಾಗುತ್ತದೆ. ಹೀಗೆ ಒಪ್ಪಿಕೊಂಡ ರಾಜಕೀಯ ರೇಖೆಯೇ ಮುಂದಿನ ಮೂರು ವರ್ಷಗಳ ಚಟುವಟಿಕೆಗಳಿಗೆ ಆಧಾರವಾಗಲಿದೆ. ಪಕ್ಷದ ರಾಜಕೀಯ ಕಾರ್ಯತಂತ್ರದ ನಿಲುವನ್ನು ರೂಪಿಸುವಲ್ಲಿ, ಪಕ್ಷದೊಳಗಿನ ಈ ಆಂತರಿಕ ಪ್ರಜಾಸತ್ತಾತ್ಮಕ ಕಸರತ್ತು ಸಿಪಿಎಂನ ವಿಶಿಷ್ಟತೆಯಾಗಿದೆ.

ನಾಯಕತ್ವದ ಕೆಲಸವನ್ನು ಕಠಿಣ ಪರಿಶೀಲನೆ ಮತ್ತು ಮೌಲ್ಯಮಾಪನ

ಮೂರು ವರ್ಷಗಳಿಗೊಮ್ಮೆ ನಡೆಯುವ ಪಕ್ಷದ ಈ ಎಲ್ಲಾ ಹಂತಗಳ ಸಮ್ಮೇಳನಗಳಲ್ಲಿ ಜಾಗತಿಕ, ರಾಷ್ಟ್ರೀಯ ಮತ್ತು ಸ್ಥಳೀಯ ಸಮಸ್ಯೆಗಳಲ್ಲದೆ, ನಾಯಕತ್ವದ ಕೆಲಸವನ್ನು ಕೂಡಾ ಕಠಿಣ ಪರಿಶೀಲನೆ ಮತ್ತು ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತದೆ. ಇದು ಪಕ್ಷದ ಸದಸ್ಯರು, ಬೆಂಬಲಿಗರು ಮತ್ತು ಪಕ್ಷವನ್ನು ಪ್ರೀತಿಸುವ ಯುವಜನತೆ ಮತ್ತು ಹಿರಿಯರನ್ನು ಒಳಗೊಂಡ ಅತ್ಯಂತ ವ್ಯಾಪಕವಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಾಗಿದೆ. ಈ ಚರ್ಚೆಗಳು ಮತ್ತು ವಿವಿಧ ಹಂತಗಳಲ್ಲಿನ ಚರ್ಚೆಗಳ ಆಧಾರದ ಮೇಲೆ ಮುಂದಿನ ಮೂರು ವರ್ಷಗಳ ಪಕ್ಷದ ನೀತಿ ವಿಧಾನಗಳನ್ನು ನಿರ್ಧರಿಸಲಾಗುತ್ತದೆ.

ಈ ರೀತಿಯಲ್ಲಿ ವ್ಯಾಪಕವಾದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ಪಕ್ಷದ ರಾಜಕೀಯ ನೀತಿಗಳನ್ನು ರೂಪಿಸುವ ಮತ್ತು ನಾಯಕತ್ವವನ್ನು ಆಯ್ಕೆ ಮಾಡುವ ಪ್ರಕ್ರಿಯೆ ಇತರೆ ಪಕ್ಷಗಳಲ್ಲಿ ಇಲ್ಲ.

ಪುಟ 14 ಕ್ಕೆ

ವಿಶ್ವ ಅರ್ಥವ್ಯವಸ್ಥೆಯ ಮಂದಗತಿ: ವಿಶ್ವದ ಬಹುಪಾಲು ಜನರ ನಿಜ-ಆದಾಯವನ್ನು ಸ್ಥಗಿತಗೊಳಿಸಿರಲೇ ಬೇಕು



ಒಂದು ಸಾಧಾರಣ ಅಂದಾಜಿನ ಪ್ರಕಾರ, ವಿಶ್ವದ ಜನಸಂಖ್ಯೆಯು ಶೇ. 1ಕ್ಕಿಂತಲೂ ಕೆಳಗಿನ ದರದಲ್ಲಿ ಬೆಳೆಯುತ್ತಿದೆ (2022ರಲ್ಲಿ ಶೇ. 0.8 ಎಂದು ಅಂದಾಜಿಸಲಾಗಿದೆ) ಮತ್ತು ವಿಶ್ವ ತಲಾ ಆದಾಯವು ವಾರ್ಷಿಕ ಶೇ. 1ಕ್ಕಿಂತ ತುಸು ಹೆಚ್ಚಿನ ಮಟ್ಟದಲ್ಲಿ ಬೆಳೆಯುತ್ತಿದೆ. ವಿಶ್ವದಲ್ಲಿ ಆದಾಯಗಳ ನಡುವಿನ ಅಸಮತೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ, ಸರಾಸರಿಯಾಗಿ ಹೇಳುವುದಾದರೆ, ವಿಶ್ವದ ಜನಸಂಖ್ಯೆಯ ಬಹುಪಾಲು ಮಂದಿಯ ನಿಜ ಆದಾಯವು ಸ್ಥಗಿತಗೊಂಡಿರಲೇ ಬೇಕು. ಇಂತಹ ಸನ್ನಿವೇಶದಲ್ಲಿ ಬಂಡವಾಳಶಾಹಿಯನ್ನು ಸಮಾಜವಾದಿ ಕ್ರಾಂತಿಯು ಹಿಂದಿಕ್ಕದಂತೆ, ಅದನ್ನು ಉನ್ನತ ಮಟ್ಟದ ಚಟುವಟಿಕೆಗಳಲ್ಲಿ ಸ್ಥಿರಗೊಳಿಸಬಯಸಿದ ಖ್ಯಾತ ಅರ್ಥಶಾಸ್ತ್ರಜ್ಞ ಕೀನ್ಸ್ ಅವರ ಜೀವಮಾನದ ಯೋಜನೆಯು ಒಂದು ಭ್ರಾಂತಿಯಾಗಿದೆ ಎಂಬುದನ್ನು ನವ-ಉದಾರವಾದಿ ಬಂಡವಾಳಶಾಹಿಯ ಪ್ರಸ್ತುತ ಸ್ಥಿತಿಯು ಬಹಳಷ್ಟು ಮಟ್ಟಿಗೆ ಸ್ಪಷ್ಟಪಡಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

2008ರ ಆರ್ಥಿಕ ಬಿಕ್ಕಟ್ಟಿನ ನಂತರ ವಿಶ್ವ ಅರ್ಥವ್ಯವಸ್ಥೆಯು ನಿಧಾನಗೊಂಡಿದೆ ಎಂಬ ಅಂಶವು ವಿವಾದಾತೀತವಾಗಿದೆ. ವಿಶ್ವ ಅರ್ಥವ್ಯವಸ್ಥೆಯ ಪ್ರಸ್ತುತ ಪರಿಸ್ಥಿತಿಯನ್ನು ವಿವರಿಸಲು ಅಮೆರಿಕದ ಸಂಪ್ರದಾಯವಾದಿ ಅರ್ಥಶಾಸ್ತ್ರಜ್ಞರೂ ಸಹ 'ಸೆಕ್ಯುಲರ್ ಸ್ಟಾಗ್ನೇಷನ್' (ಅನಿಯಮಿತ ಸ್ಥಗಿತತೆ) ಎಂಬ ಪದವನ್ನು ಬಳಸಲಾರಂಭಿಸಿದ್ದಾರೆ. ಅದಕ್ಕೆ ಅವರು ತಮ್ಮದೇ ಆದ ಒಂದು ವಿಶಿಷ್ಟ ವ್ಯಾಖ್ಯಾನವನ್ನು ಹೊಂದಿದ್ದಾರೆ ಎಂಬುದು ಬೇರೆ ಮಾತು. ಅರ್ಥವ್ಯವಸ್ಥೆಯ ಬೆಳವಣಿಗೆ ದರದ ಕೆಲವು ಅಂಕಿ-ಅಂಶಗಳ ಮೂಲಕ ಈ ನಿರ್ದಿಷ್ಟ ಅಂಶವನ್ನು ಸ್ಪಷ್ಟಪಡಿಸುವುದು ಈ ಟಿಪ್ಪಣಿಯ ಉದ್ದೇಶ.

ಜಿಡಿಪಿಯನ್ನು ಲೆಕ್ಕ ಹಾಕುವ ವಿಷಯದಲ್ಲಿ ಕೆಲವು ದೇಶಗಳು ಅನುಸರಿಸುವ ವಿಧಾನಗಳು ವಿಶ್ವಾಸಾರ್ಹವಲ್ಲ ಎಂಬುದು ಕುಖ್ಯಾತ ಸಂಗತಿ; ಒಟ್ಟು ವಿಶ್ವದ ಜಿಡಿಪಿಯ ಅಂಕಿ-ಅಂಶಗಳಲ್ಲಿ ಇದು ಇನ್ನಷ್ಟು ನಿಜ. ಭಾರತದಲ್ಲಿ ಕಳೆದ ಹಲವಾರು ವರ್ಷಗಳಿಂದಲೂ ಅಧಿಕೃತವಾಗಿ ಹೇಳುವ ವಾರ್ಷಿಕ ಶೇ. 7 ಅಥವಾ ಅದಕ್ಕಿಂತಲೂ ಮೇಲಿನ ಸಂಖ್ಯೆಯ ಬೆಳವಣಿಗೆ ದರವು ವಾಸ್ತವವಾಗಿ ಶೇ. 4ರಿಂದ 4.5ಕ್ಕಿಂತ ಹೆಚ್ಚು ಇದ್ದಿರಲಾರದು ಎಂದು ಹಲವರು ಸೂಚಿಸುತ್ತಾರೆ. ನಿಯಂತ್ರಣ ನೀತಿಗಳ (ಡಿರಿಜಿಸ್ಟೆ) ಅವಧಿಗೆ ಹೋಲಿಸಿದರೆ ನವ-ಉದಾರವಾದಿ ಅವಧಿಯಲ್ಲಿ ಸಾಧಿಸಿದ ಜಿಡಿಪಿ ಬೆಳವಣಿಗೆಯ ವೇಗದ ಬಗ್ಗೆ ವ್ಯಕ್ತಪಡಿಸುವ ಹರ್ಷೋನ್ಮಾದವು ಸರಿಯಾದುದಲ್ಲ. ಅಸಮಾನತೆಗಳು ಗಮನಾರ್ಹವಾಗಿ ವಿಸ್ತರಿಸುತ್ತಿರುವಾಗ, ಜಿಡಿಪಿ ಬೆಳವಣಿಗೆಯ ದರವು ಹಿಂದಿನ ಅವಧಿಗೆ ಹೋಲಿಸಿದರೆ ಹೆಚ್ಚಿಲ್ಲವೆಂದಾದರೆ, ನವ-ಉದಾರವಾದಿ ಅವಧಿಯಲ್ಲಿ ದುಡಿಯುವ ಜನರ ಸ್ಥಿತಿಯು ಹದಗೆಟ್ಟಿದೆ ಎಂಬ ಪ್ರತಿಪಾದನೆಯನ್ನು ಪೌಷ್ಟಿಕಾಂಶ ಸೇವನೆಯಂತಹ ಕೆಲವು ಸೂಚಕಗಳ ಅಂಕಿ-ಅಂಶಗಳು ಇನ್ನಷ್ಟು ದೃಢವಾಗಿ ಸಮರ್ಥಿಸುತ್ತವೆ. ಜಿಡಿಪಿಯ ಅಂಕಿ-ಅಂಶಗಳು ಅತ್ತ ಇತ್ತ ಓಲಾಡುತ್ತಿರುವುದರ ಹೊರತಾಗಿಯೂ, ವಿಶ್ವ ಜಿಡಿಪಿಯ ಪರಿಸ್ಥಿತಿ ಹೇಗಿದೆ ಎಂಬುದನ್ನು ಪರಿಶೀಲಿಸೋಣ.

ಈ ಉದ್ದೇಶಕ್ಕಾಗಿ ನಾನು ವಿಶ್ವ ಬ್ಯಾಂಕಿನ ಅಂಕಿ-ಅಂಶಗಳನ್ನು ಬಳಸುತ್ತೇನೆ. ಪ್ರತಿ ದೇಶದ 'ನಿಜ' ಜಿಡಿಪಿಯನ್ನು 2015ರ ಬೆಲೆಗಳಲ್ಲಿ, 2015ರ ವಿದೇಶಿ ವಿನಿಮಯ ದರಗಳಲ್ಲಿ ಮತ್ತು ಡಾಲರ್ ಕರೆನ್ಸಿಯ ಮೂಲಕ ಒಟ್ಟುಗೂಡಿಸಿ, ವಿಶ್ವ ಜಿಡಿಪಿಯ ಅಂಕಿ-ಅಂಶಗಳನ್ನು ಅಂದಾಜು ಮಾಡಲಾಗಿದೆ. 1961ರಿಂದ ಹಿಡಿದು 2018ರ ವರೆಗಿನ ಅವಧಿಯನ್ನು ಉಪ-ಅವಧಿಗಳಾಗಿ ವಿಭಜಿಸುವುದು ಮತ್ತು ಈ ಉಪ-ಅವಧಿಗಳ ನಡುವೆ ಹೋಲಿಕೆ ಮಾಡುವ ಕೆಲಸವು ಸಾಕಷ್ಟು ಕ್ಲಿಷ್ಟಕರವಾಗಿದೆ. ದಶಮಾನಗಳ ಕಾಲಮಾನದ ಬೆಳವಣಿಗೆ ದರಗಳನ್ನು ತೆಗೆದುಕೊಳ್ಳುವ ಕ್ರಮವೂ ಸಹ ಸಮಸ್ಯಾತ್ಮಕವಾಗಿದೆ. ಏಕೆಂದರೆ, ದಶಕದ ಆರಂಭವು ಅರ್ಥವ್ಯವಸ್ಥೆಯು ತಳ ಮಟ್ಟವನ್ನು (trough) ತಲುಪಿದ ವರ್ಷವಾಗಿದ್ದರೆ, ಆ ದಶಕದ ಬೆಳವಣಿಗೆಯ ದರವು ಉತ್ಪ್ರೇಕ್ಷಿತಗೊಳ್ಳುತ್ತದೆ ಮತ್ತು ಅದು ನೀಡುವ ಚಿತ್ರಣವು ವಿಕೃತವಾಗಿರುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ, ಅರ್ಥವ್ಯವಸ್ಥೆಯು ಗರಿಷ್ಠ ಮಟ್ಟ ತಲುಪಿದ ವರ್ಷಗಳನ್ನು ನಾನು ತೆಗೆದುಕೊಂಡಿದ್ದೇನೆ ಮತ್ತು ವಿಶ್ವ ಅರ್ಥವ್ಯವಸ್ಥೆಯು ಒಂದು ಗರಿಷ್ಠ ಮಟ್ಟದಿಂದ ಮತ್ತೊಂದು ಗರಿಷ್ಠ ಮಟ್ಟದವರೆಗಿನ ಅವಧಿಯ ಬೆಳವಣಿಗೆ ದರಗಳನ್ನು ಲೆಕ್ಕ ಹಾಕಿದ್ದೇನೆ. ಈ ಕ್ರಮವು ಬೆಳವಣಿಗೆ ದರದಲ್ಲಿನ (ಅನಿಯಮಿತ) ಬದಲಾವಣೆಯ ಬಗ್ಗೆ ಒಂದು ಹೆಚ್ಚು ವಿಶ್ವಾಸಾರ್ಹ ಚಿತ್ರವನ್ನು ನೀಡುತ್ತದೆ. ಈ ಉದ್ದೇಶಕ್ಕಾಗಿ ತೆಗೆದುಕೊಂಡ ನಿರ್ದಿಷ್ಟ ವರ್ಷಗಳೆಂದರೆ, 1961, 1973, 1984, 1997, 2007 ಮತ್ತು 2018. ಈ ಕೊನೆಯ 2018ರ ವರ್ಷವು ಕೊರೊನಾ ಸಾಂಕ್ರಾಮಿಕವು ಪ್ರಾರಂಭವಾಗುವ ಮೊದಲು ಅರ್ಥವ್ಯವಸ್ಥೆಯು ತಲುಪಿದ ಗರಿಷ್ಠ ಮಟ್ಟದ ಕೊನೆಯ ವರ್ಷವಾಗಿತ್ತು. ಈ ವರ್ಷಗಳು ವ್ಯಾಖ್ಯಾನಿಸುವ ಉಪ ಅವಧಿಗಳಲ್ಲಿ ವಿಶ್ವ ಜಿಡಿಪಿ ಬೆಳವಣಿಗೆಯ ದರಗಳು ಈ ಕೆಳಗಿನಂತಿವೆ:

ಅವಧಿ	ವಾರ್ಷಿಕ ಬೆಳವಣಿಗೆ ದರ
1961–1973:	ಶೇ. 5.4
1973–1984:	ಶೇ. 2.9
1984–1997:	ಶೇ. 3.1
1997–2007:	ಶೇ. 3.5
2007–2018:	ಶೇ. 2.7


ತಪ್ಪು ಅನಿಸಿಕೆ

ಈ ಅಂಕೆ-ಸಂಖ್ಯೆಗಳಲ್ಲಿ ಮೂರು ಮುಖ್ಯವಾದ ಅಂಶಗಳು ಎದ್ದು ಕಾಣುತ್ತವೆ. ಮೊದಲನೆಯದು, ಡಿರಿಜಿಸ್ಟ್ (ನಿಯಂತ್ರಣ ನೀತಿ) ಅವಧಿಯಲ್ಲಿ ವಿಶ್ವ ಅರ್ಥವ್ಯವಸ್ಥೆಯ ಬೆಳವಣಿಗೆ ದರವು ಒಟ್ಟಾರೆಯಾಗಿ ನವ-ಉದಾರವಾದಿ ಅವಧಿಯಲ್ಲಿ ದಾಖಲಾದ ದರಕ್ಕಿಂತಲೂ ಅಧಿಕವಾಗಿದೆ. ಆದರೆ, "ಮಾರುಕಟ್ಟೆಯ ಶ್ರೇಷ್ಠತೆ"ಯ ಅಂಶವನ್ನು ಹಾಡಿ ಹೊಗಳುವವರು ನವ-ಉದಾರವಾದಿ ಯುಗದಲ್ಲಿ ವಿಶ್ವ ಅರ್ಥವ್ಯವಸ್ಥೆಯು ವೇಗವಾಗಿ ಬೆಳೆದಿರಲೇಬೇಕು ಎಂದು ಭಾವಿಸುತ್ತಾರೆ ಮತ್ತು ಹಿಂದಿನ ಅವಧಿಯು ದಾಖಲಿಸಿದ ಬೆಳವಣಿಗೆ ದರವನ್ನು ಕಡೆಗಣಿಸುತ್ತಾರೆ. ಅವರ ಈ ಅನಿಸಿಕೆಯು ಸಂಪೂರ್ಣವಾಗಿ ತಪ್ಪು. ವಾಸ್ತವವು ಅದಕ್ಕೆ ತದ್ವಿರುದ್ಧವಾಗಿದೆ. ಅಂದರೆ, ನವ-ಉದಾರವಾದಿ ಅವಧಿಯಲ್ಲಿ ವಿಶ್ವ ಅರ್ಥವ್ಯವಸ್ಥೆಯ ಬೆಳವಣಿಗೆಯು ಗಮನಾರ್ಹವಾಗಿ ನಿಧಾನಗೊಂಡಿದೆ.

ಎರಡನೆಯದು, ನಿಯಂತ್ರಣಗಳ ಅವಧಿ ಮತ್ತು ನವ-ಉದಾರವಾದಿ ಅವಧಿಯ ನಡುವಿನ ಮಧ್ಯಂತರದ ಅವಧಿಯಲ್ಲಿ ವಿಶ್ವ ಅರ್ಥವ್ಯವಸ್ಥೆಯ ಬೆಳವಣಿಗೆಯು ನಿಧಾನಗತಿಯಲ್ಲಿತ್ತು. ಬೆಳವಣಿಗೆಯ ದರವು ಶೇ. 5.4ರಿಂದ ಶೇ. 2.9ಕ್ಕೆ ಇಳಿಯಿತು. ಈ ನಿಧಾನಗತಿಯು, ಬಂಡವಾಳಶಾಹಿ ಜಗತ್ತಿನಲ್ಲಿ 60ರ ದಶಕದ ಉತ್ತರಾರ್ಧದಲ್ಲಿ ಮತ್ತು 70ರ ದಶಕದ ಆರಂಭದಲ್ಲಿ ಸಂಭವಿಸಿದ ಹಣದುಬ್ಬರದ ವೇಗವರ್ಧನೆಯನ್ನು ಎದುರಿಸಲು ಬಂಡವಾಳಶಾಹಿಯು ಅನುಸರಿಸಿದ ತಂತ್ರದ ಪರಿಣಾಮವಾಗಿತ್ತು ಮತ್ತು ಇದು ನಿಯಂತ್ರಣಗಳ ಅವಧಿಯ ಅಂತ್ಯವನ್ನು ಗುರುತಿಸಿತು. ವಿಶ್ವ ಜಿಡಿಪಿ ಬೆಳವಣಿಗೆಯ ನಿಧಾನಗತಿಯ ಈ ಮಧ್ಯಂತರದ ಅವಧಿಯು, ನವ-ಉದಾರವಾದಿ ಆಳ್ವಿಕೆಯನ್ನು ಜಾರಿಗೊಳಿಸಲು ಒಂದು ಸನ್ನಿವೇಶವನ್ನು ಸೃಷ್ಟಿಸಿತು. ಗಾತ್ರದಲ್ಲಿ ಹೆಚ್ಚುತ್ತಿದ್ದ ಮತ್ತು ಅಂತಾರಾಷ್ಟ್ರೀಯವಾಗಿ ಬೆಳೆಯುತ್ತಿದ್ದ ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಯನ್ನು ನವ-ಉದಾರವಾದದತ್ತ ಹೊರಳುವಂತೆ ಒತ್ತಾಯಿಸಿತು. ಸರ್ಕಾರದ ವೆಚ್ಚಗಳನ್ನು ಕಡಿತಗೊಳಿಸುವ ಮೂಲಕ ಮತ್ತು ಸಾಮೂಹಿಕ ನಿರುದ್ಯೋಗ ಸೃಷ್ಟಿಸುವ ಮೂಲಕ ಹಣದುಬ್ಬರನ್ನು ತಗ್ಗಿಸುವ ನೀತಿಯನ್ನು ಬಂಡವಾಳಶಾಹಿ ಜಗತ್ತು ಅಧಿಕೃತವಾಗಿ ಹೊಂದಿತ್ತು. ಮೊದಲು ಹಣದುಬ್ಬರದ ಏರಿಕೆಯ ಮೂಲಕ, ನಂತರ ಬೆಳವಣಿಗೆಯ ನಿಧಾನಗತಿಯ ಮೂಲಕ, ಪ್ರಕಟಗೊಂಡ ನಿಯಂತ್ರಣಗಳ ಅವಧಿಯ ಬಿಕ್ಕಟ್ಟಿನಿಂದ ಹೊರ ಬರಲು, ಅರ್ಥವ್ಯವಸ್ಥೆಯನ್ನು ನವ-ಉದಾರವಾದತ್ತ ಹೊರಳುವಂತೆ ಮಾಡುವ ಹಣಕಾಸು ಬಂಡವಾಳದ ಒತ್ತಡವು ಅಂತಿಮವಾಗಿ ಫಲ ನೀಡಿತು.

ಯಾವ ಉತ್ತೇಜನವೂ ಇಲ್ಲ

ಮೂರನೆಯದು, ನವ-ಉದಾರವಾದದ ಅಡಿಯಲ್ಲಿ ಯುಎಸ್‌ನಲ್ಲಿ ವಸತಿ ಗುಳ್ಳೆಗಳು ಒಡೆದ ನಂತರ ಅರ್ಥವ್ಯವಸ್ಥೆಯು ಸುದೀರ್ಘವಾಗಿ ನಿಧಾನಗತಿಗೆ ಒಳಗಾಯಿತು ಎಂಬುದು. ಈ ನಿಧಾನಗತಿಯು ಬಂಡವಾಳಶಾಹಿ ಜಗತ್ತಿನಲ್ಲಿ ಒಂದು ಹಣಕಾಸಿನ ಬಿಕ್ಕಟ್ಟನ್ನು ಸೃಷ್ಟಿಸಿತು. ಪ್ರಭುತ್ವದ ಹಸ್ತಕ್ಷೇಪದ ("ಮಾರುಕಟ್ಟೆಯು ದಕ್ಷತೆ"ಗೆ ಈ ಪುರಾವೆ ಸಾಕು) ಮೂಲಕ ಹಣಕಾಸು ವ್ಯವಸ್ಥೆಯನ್ನು ಬಿಕ್ಕಟ್ಟಿನಿಂದ ಪಾರುಮಾಡಲಾಯಿತು. ಆದರೆ, ನಿಜ ಅರ್ಥವ್ಯವಸ್ಥೆಗೆ ಯಾವ ಉತ್ತೇಜನವೂ ದೊರಕಲಿಲ್ಲ. ಮತ್ತು, ಪ್ರಭುತ್ವದ ಬೃಹತ್ ವೆಚ್ಚಗಳ ಮೂಲಕವಾಗಲಿ ಅಥವಾ ವಸತಿ ಗುಳ್ಳೆಗೆ ಹೋಲಿಸಬಹುದಾದ ಹೊಸ ಗುಳ್ಳೆಯ ಸೃಷ್ಟಿಯ ಮೂಲಕವಾಗಲಿ, ಅರ್ಥವ್ಯವಸ್ಥೆಯ ಬೆಳವಣಿಗೆಯ ದರವನ್ನು ಪುನರುಜ್ಜೀವನಗೊಳಿಸುವ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ.



ನಾವು ಉದ್ದೇಶಪೂರ್ವಕವಾಗಿ 2018ಅನ್ನು ಹೋಲಿಕೆಯ ಕೊನೆಯ ವರ್ಷವಾಗಿ ತೆಗೆದುಕೊಂಡಿದ್ದೇವೆ. ಏಕೆಂದರೆ, ಇದು ಗರಿಷ್ಠ ಮಟ್ಟದ ಬೆಳವಣಿಗೆಯ ದರವನ್ನು ದಾಖಲಿಸಿದ ವರ್ಷವನ್ನು ಪ್ರತಿನಿಧಿಸುತ್ತದೆ. 2018ರ ನಂತರದ ಅವಧಿಯು ವಿಶ್ವ ಅರ್ಥವ್ಯವಸ್ಥೆಯ ಪಾಲಿಗೆ ನಿರಾಶಾದಾಯಕವಾಗಿ ಪರಿಣಮಿಸಿದೆ. ವಾಸ್ತವವಾಗಿ 2018 ಮತ್ತು 2022 (ಜಿಡಿಪಿ ಅಂಕಿಅಂಶಗಳು ಲಭ್ಯವಿರುವ ಇತ್ತೀಚಿನ ವರ್ಷ) ನಡುವಿನ ವರ್ಷಗಳ ಜಿಡಿಪಿ ಬೆಳವಣಿಗೆ ದರವು, ವಾರ್ಷಿಕ ಶೇ. 2.1ರಷ್ಟು ಕೆಳ ಮಟ್ಟದಲ್ಲಿದೆ. ವಿಶ್ವ ಜನಸಂಖ್ಯೆಯ ಅಂಕಿ-ಅಂಶಗಳೂ ಸಹ ಹೆಚ್ಚು ವಿಶ್ವಾಸಾರ್ಹತೆ ಹೊಂದಿಲ್ಲ. ಭಾರತದಂತಹ ಒಂದು ದೊಡ್ಡ ದೇಶವೂ ಸಹ 2021ರಲ್ಲಿ ನಡೆಸಬೇಕಿದ್ದ ತನ್ನ ದಶವಾರ್ಷಿಕ ಜನಗಣತಿಯನ್ನು ನಡೆಸಿಲ್ಲ ಮತ್ತು ತದನಂತರವೂ ನಡೆಸಿಲ್ಲ. ಒಂದು ಸಾಧಾರಣ ಅಂದಾಜಿನ ಪ್ರಕಾರ, ವಿಶ್ವದ ಜನಸಂಖ್ಯೆಯು ಶೇ. 1ಕ್ಕಿಂತಲೂ ಕೆಳಗಿನ ದರದಲ್ಲಿ ಬೆಳೆಯುತ್ತಿದೆ (2022ರಲ್ಲಿ ಶೇ. 0.8 ಎಂದು ಅಂದಾಜಿಸಲಾಗಿದೆ) ಮತ್ತು ವಿಶ್ವ ತಲಾ ಆದಾಯವು ವಾರ್ಷಿಕ ಶೇ. 1ಕ್ಕಿಂತ ತುಸು ಹೆಚ್ಚಿನ ಮಟ್ಟದಲ್ಲಿ ಬೆಳೆಯುತ್ತಿದೆ.

ವಿಶ್ವದಲ್ಲಿ ಆದಾಯಗಳ ನಡುವಿನ ಅಸಮತೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ, ಸರಾಸರಿಯಾಗಿ ಹೇಳುವುದಾದರೆ, ವಿಶ್ವದ ಜನಸಂಖ್ಯೆಯ ಬಹುಪಾಲು ಮಂದಿಯ ನಿಜ ಆದಾಯವು ಸ್ಥಗಿತಗೊಂಡಿರಲೇ ಬೇಕು. ಒಂದು ವಿವರಣಾತ್ಮಕ ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ವಿಶ್ವದ ಜನಸಂಖ್ಯೆಯ ಮೇಲ್ತುದಿಯ ಶೇ. 10ರಷ್ಟು ಮಂದಿಯು ವಿಶ್ವದ ಪ್ರಸ್ತುತ ಒಟ್ಟು ಆದಾಯದ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಪಡೆಯುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಈ ಶೇ. 10ರಷ್ಟು ಮಂದಿಯ ಆದಾಯವು ಒಂದು ವೇಳೆ ವಾರ್ಷಿಕ ಶೇ. 2ರಷ್ಟು ವೃದ್ಧಿಯಾಗಿದ್ದರೆ, ಉಳಿದ ಶೇ. 90ರಷ್ಟು ಮಂದಿಯ ಆದಾಯವು, ಸರಾಸರಿಯಾಗಿ, ಸಂಪೂರ್ಣವಾಗಿ ಸ್ಥಗಿತವಾಗಿರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ತನ್ನ ಇತ್ತೀಚಿನ ನವ-ಉದಾರವಾದಿ ಹಂತದಲ್ಲಿ ವಿಶ್ವದ ಜನಸಂಖ್ಯೆಯ ಒಂದು ಬೃಹತ್ ಜನಸಮೂಹವನ್ನು ಆದಾಯ ಸ್ಥಗಿತತೆಯ ಪರಿಸ್ಥಿತಿಗೆ ತಂದಿದೆ ಎಂಬ ತೀರ್ಮಾನವು ಅನಿವಾರ್ಯವಾಗುತ್ತದೆ. ಈ ವಿದ್ಯಮಾನವು ವಸಾಹತುಶಾಹಿ ಕಾಲವನ್ನು ನೆನಪಿಗೆ ತರುತ್ತದೆ. ಅಂದರೆ, ವಿಶ್ವದ ಜನಸಂಖ್ಯೆಯ ಒಂದು ಬಹುದೊಡ್ಡ ಭಾಗದ ಜನರ ನಿಜ ಆದಾಯವು ಕುಸಿದಿರಲೇಬೇಕು ಎಂದಾಗುತ್ತದೆ.

ತಾತ್ಕಾಲಿಕ ವಿದ್ಯಮಾನವಲ್ಲ

ಅದಕ್ಕಿಂತಲೂ ಮಿಗಿಲಾಗಿ, ಪುಟ 14 ಕ್ಕೆ

ವಿಶ್ವ ಅರ್ಥವ್ಯವಸ್ಥೆಯ ಮಂದಗತಿ...... ಪುಟ 13 ರಿಂದ

ಇದು ಕಾಲಾನಂತರದಲ್ಲಿ ನಶಿಸುವ ಒಂದು ತಾತ್ಕಾಲಿಕ ವಿದ್ಯಮಾನವಲ್ಲ. ಈ ಆದಾಯ ಕುಸಿತವೇ ನವ–ಉದಾರವಾದವು ವಿಶ್ವದ ಒಂದು ಬಹುದೊಡ್ಡ ಸಂಖ್ಯೆಯ ಜನರಿಗೆ ಕರುಣಿಸಿರುವ ಒಂದು ಉಡುಗೊರೆ. ಹಾಗಾಗಿ, ಪ್ರಸ್ತುತ ಹಂತದಲ್ಲಿ ಸ್ಥಗಿತಗೊಂಡಿರುವ ಬೆಳವಣಿಗೆಯನ್ನು ಚುರುಕುಗೊಳಿಸಬೇಕು ಎಂದಾದರೆ, ವಿಶ್ವ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವುದು ಅಗತ್ಯವಾಗುತ್ತದೆ. ಈ ಉದ್ದೇಶಕ್ಕಾಗಿ ಪ್ರಭುತ್ವದ ಹಸ್ತಕ್ಷೇಪವು ಅಗತ್ಯವಾಗುತ್ತದೆ. ಅಂದರೆ, ಪ್ರಭುತ್ವವು ಬೃಹತ್ ಪ್ರಮಾಣದ ವೆಚ್ಚಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ವೆಚ್ಚಗಳಿಗೆ ಬೇಕಾಗುವ ಹಣವನ್ನು ವಿತ್ತೀಯ ಕೊರತೆಯ ಮೂಲಕ ಅಥವಾ ಬಂಡವಾಳಗಾರರು ಮತ್ತು ಶ್ರೀಮಂತರ ಮೇಲೆ ವಿಧಿಸುವ ತೆರಿಗೆಯನ್ನು ಹೆಚ್ಚಿಸುವ ಮೂಲಕ ಒದಗಿಸಿಕೊಂಡರೆ ಮಾತ್ರ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಬಹುದು. ಆದರೆ, ವಿತ್ತೀಯ ಕೊರತೆಯ ಮೂಲಕ ಅಥವಾ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಮೂಲಕ ಹಣ ಒದಗಿಸಿಕೊಳ್ಳುವ ಈ ಎರಡೂ ವಿಧಾನಗಳನ್ನು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ವಿರೋಧಿಸುತ್ತದೆ. ಮತ್ತು, ಪ್ರಭುತ್ವವು ರಾಷ್ಟ್ರ–ಪ್ರಭುತ್ವವಾಗಿರುವ ಮತ್ತು ಹಣಕಾಸು ಬಂಡವಾಳವು ಜಾಗತೀಕರಣಗೊಂಡಿರುವ ಸನ್ನಿವೇಶದಲ್ಲಿ, ಹಣಕಾಸು ಬಂಡವಾಳವು ಒಂದು ಸಣ್ಣ ಕಾರಣದ ಮೇಲೆ ಯಾವುದೇ ಒಂದು ದೇಶದಿಂದ ಸಾಮೂಹಿಕವಾಗಿ ಹೊರ ಹೋಗಬಹುದು. ಬಂಡವಾಳವು ಹೀಗೆ ಹೊರ ಹೋಗುವುದನ್ನು ತಡೆಯಲು ಪ್ರಭುತ್ವವು ಹಣಕಾಸು ಬಂಡವಾಳದ ಮರ್ಜಿಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ, ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವುದಕ್ಕಾಗಿ ಮತ್ತು ಆ ಮೂಲಕ ಅರ್ಥವ್ಯವಸ್ಥೆಯ ಬೆಳವಣಿಗೆ ದರವನ್ನು ಹೆಚ್ಚಿಸುವುದಕ್ಕಾಗಿ ಯಾವುದೇ ಒಂದು ನಿರ್ದಿಷ್ಟ ರಾಷ್ಟ್ರ–ಪ್ರಭುತ್ವವು ಹಸ್ತಕ್ಷೇಪ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಲವಾರು ಪ್ರಭುತ್ವಗಳು ಸಂಘಟಿತವಾಗಿ ಏಕಕಾಲದಲ್ಲಿ ಇಲ್ಲಿ ಸೂಚಿಸಿದ ವಿಧಾನಗಳ ಮೂಲಕ ತಮ್ಮ ವೆಚ್ಚಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳುವ ಮೂಲಕ ಅರ್ಥವ್ಯವಸ್ಥೆಯನ್ನು ಉತ್ತೇಜಿಸಬಹುದು. ಇದು ಈ ಇಡೀ ದೇಶಗಳ ಗುಂಪಿನಿಂದ ಹಣಕಾಸು ಬಂಡವಾಳವು ಪಲಾಯನ ಮಾಡುವುದನ್ನು ತಡೆಯಬಹುದು. ಇಂತಹ ಒಂದು ಪ್ರಯತ್ನದ ಬಗ್ಗೆ ಚರ್ಚೆಯೂ ಸಹ ಇನ್ನೂ ನಡೆದಿಲ್ಲ.

ಈ ಸನ್ನಿವೇಶದಲ್ಲಿ ಹಣಕಾಸು ನೀತಿ ಮಾತ್ರವೇ ಪ್ರಭುತ್ವಕ್ಕೆ ಲಭ್ಯವಿರುವ ಹಸ್ತಕ್ಷೇಪದ ಏಕೈಕ ಸಾಧನವಾಗಿ ಬಿಡುತ್ತದೆ. ಈ ವಿಷಯದಲ್ಲೂ ಸಹ, ಮುಂದುವರಿದ ದೇಶಗಳಲ್ಲಿ, ವಿಶೇಷವಾಗಿ ಯುಎಸ್‌ನಲ್ಲಿ ಚಾಲ್ತಿಯಲ್ಲಿರುವ ಬಡ್ಡಿ ದರಕ್ಕೆ ಹೋಲಿಸಿದರೆ, ಯಾವುದೇ ದೇಶದ ಬಡ್ಡಿ ದರವು ಅತಿ ಕಡಿಮೆ ಇರುವಂತಿಲ್ಲ. ಏಕೆಂದರೆ, ಆಗ ಹಣಕಾಸು ಬಂಡವಾಳವು ಆ ದೇಶವನ್ನು "ಆಕರ್ಷಕವಲ್ಲದ" ತಾಣ ಎಂದು ಭಾವಿಸುತ್ತದೆ ಮತ್ತು ಆ ದೇಶದಿಂದ ಸಾಮೂಹಿಕವಾಗಿ ಹೊರಹೋಗುತ್ತದೆ. ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸಲು ತಾನು ಸೂಕ್ತವೆಂದು ಪರಿಗಣಿಸುವ ಯಾವುದೇ ಮಟ್ಟದ ಬಡ್ಡಿ ದರಗಳಿಗೆ ಸ್ವಾಯತ್ತವಾಗಿ ತನ್ನ ಬಡ್ಡಿ ದರಗಳನ್ನು ಇಳಿಕೆ ಮಾಡುವ ಸಾಮರ್ಥ್ಯವನ್ನು ಯುಎಸ್ ಮಾತ್ರ ಹೊಂದಿದೆ (ಇದು, ಇತರ ದೇಶಗಳಿಗೂ ತಮ್ಮ ಬಡ್ಡಿ ದರಗಳನ್ನು ಇಳಿಕೆ ಮಾಡುವ ಅವಕಾಶವನ್ನು ಕಲ್ಪಿಸುತ್ತದೆ). ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಯುಎಸ್‌ನಲ್ಲಿ ಬಡ್ಡಿ ದರಗಳು ಶೂನ್ಯದ ಸಮೀಪದಲ್ಲಿವೆ. ಆದಾಗ್ಯೂ, ವಿಶ್ವ ಅರ್ಥವ್ಯವಸ್ಥೆಯಲ್ಲಿ ಪುನರುಜ್ಜೀವನ ಕಂಡುಬಂದಿಲ್ಲ. ಅದಕ್ಕೆ ಬದಲಾಗಿ, ಬಹಳ ವರ್ಷಗಳಿಂದಲೂ ಜಾರಿಯಲ್ಲಿದ್ದ ಇಂತಹ ಕಡಿಮೆ ಬಡ್ಡಿ ದರಗಳು ಆ ದೇಶದ ಕಾರ್ಪೊರೇಟ್‌ಗಳಿಗೆ ತಮ್ಮ ಲಾಭದ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಧೈರ್ಯವನ್ನು ಕೊಟ್ಟವು ಮತ್ತು ಹಣದುಬ್ಬರವು ವೇಗ ಪಡೆಯಲು ಕಾರಣವಾದವು.

ಬಂಡವಾಳಶಾಹಿಯನ್ನು ಸಮಾಜವಾದಿ ಕ್ರಾಂತಿಯು ಹಿಂದಿಕ್ಕದಂತೆ ಅದನ್ನು ಉನ್ನತ ಮಟ್ಟದ ಚಟುವಟಿಕೆಗಳಲ್ಲಿ ಸ್ಥಿರಗೊಳಿಸ ಬಯಸಿದ ಖ್ಯಾತ ಅರ್ಥಶಾಸ್ತ್ರಜ್ಞ ಕೀನ್ಸ್ ಅವರ ಜೀವಮಾನದ ಯೋಜನೆಯು ಹೀಗೆ ಒಂದು ಭ್ರಾಂತಿಯಾಗಿದೆ ನವ–ಉದಾರವಾದಿ ಬಂಡವಾಳಶಾಹಿಯ ಪ್ರಸ್ತುತ ಸ್ಥಿತಿಯು ಈ ಸಂಗತಿಯನ್ನು ಬಹಳಷ್ಟು ಮಟ್ಟಿಗೆ ಸ್ಪಷ್ಟಪಡಿಸುತ್ತದೆ. ❍

ಸಿಪಿಐ(ಎಂ) ಸಮ್ಮೇಳನಗಳು...... ಪುಟ 12 ರಿಂದ

ಆಳುವ ಪಕ್ಷಗಳು ಎಂದು ಕರೆಸಿಕೊಳ್ಳುವ ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಅಧಿಪತ್ಯ ಚಾಲ್ತಿಯಲ್ಲಿದೆ. ಕಾಂಗ್ರೆಸ್ ನ ಹೈಕಮಾಂಡ್ ಎಂದರೆ ಅದು ನೆಹರು ಕುಟುಂಬ. ಪಕ್ಷದ ನೀತಿ ಹೇಗಿರಬೇಕು, ಯಾವ ರಾಜ್ಯದಲ್ಲಿ ಯಾರು ನಾಯಕತ್ವ ವಹಿಸಬೇಕೆಂಬುದನ್ನು ಆ ಕುಟುಂಬ ನಿರ್ಧರಿಸುತ್ತದೆ. ಮತ್ತೊಂದೆಡೆ, ಬಿಜೆಪಿಯಲ್ಲಿ, ಮಾತೃ ಸಂಸ್ಥೆ ಆರ್.ಎಸ್.ಎಸ್.ನ ಸಿದ್ಧಾಂತದ ಪ್ರಕಾರ ನೀತಿ ಮತ್ತು ನಾಯಕತ್ವವನ್ನು ನಿರ್ಧರಿಸಲಾಗುತ್ತದೆ. ಸಿಪಿಐ(ಎಂ) ಸಂಪೂರ್ಣವಾಗಿ ವಿಭಿನ್ನ ರೀತಿಯಲ್ಲಿ ನೀತಿ ಮತ್ತು ನಾಯಕತ್ವವನ್ನು ನಿರ್ಧರಿಸುವ ಪಕ್ಷವಾಗಿದೆ.

18ನೇ ಲೋಕಸಭೆ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವಗಳ ಮೇಲಿನ ದಾಳಿಗಳನ್ನು ಸಮರ್ಥವಾಗಿ ಎದುರಿಸಲು, ಹಿಂದುತ್ವದ ಅಜೆಂಡಾದ ವಿರುದ್ಧ ವಿಶಾಲವಾದ ಒಗ್ಗಟ್ಟನ್ನು ರೂಪಿಸಲು, ಎಡಪಕ್ಷಗಳ ವಿಶಾಲ ಏಕತೆಯನ್ನು ಉತ್ತೇಜಿಸಲು, ಸಿಪಿಐ–ಎಂ ಅನ್ನು ಮತ್ತಷ್ಟು ಬಲಪಡಿಸಲು 24ನೇ ಪಕ್ಷದ ಮಹಾಧಿವೇಶನ ಅಗತ್ಯವಾದ ನೀತಿಗಳನ್ನು ರೂಪಿಸಲಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಾರತದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಮುಂಚೂಣಿಯಾಗಿದೆ. ಶ್ರಮಜೀವಿ ಸರ್ವಾಧಿಕಾರದ ಪ್ರಭುತ್ವವನ್ನು ಸ್ಥಾಪಿಸುವ ಮೂಲಕ ಸಮಾಜವಾದ ಮತ್ತು ಸಮತಾವಾದವನ್ನು ಸಾಧಿಸುವುದು ಅದರ ಗುರಿಯಾಗಿದೆ. ಪಕ್ಷವು ತನ್ನ ಎಲ್ಲಾ ಚಟುವಟಿಕೆಗಳಲ್ಲಿ ಮಾರ್ಕ್ಸ್‌ವಾದ–ಲೆನಿನ್ ವಾದದ ತತ್ವ ಮತ್ತು ನೀತಿಗಳಿಂದ ಮಾರ್ಗದರ್ಶನ ಪಡೆಯುತ್ತದೆ. ಆ ತತ್ವವು ಶ್ರಮಜೀವಿಗಳಿಗೆ ಮನುಷ್ಯನಿಂದ ಮನುಷ್ಯನ ಶೋಷಣೆಯನ್ನು ಕೊನೆಗೊಳಿಸಿ, ಅವರ ಸಂಪೂರ್ಣ ವಿಮೋಚನೆಗೆ ಸರಿಯಾದ ಮಾರ್ಗವನ್ನು ತೋರಿಸುತ್ತದೆ. ಪಕ್ಷವು ಶ್ರಮಜೀವಿ ವರ್ಗದ ಅಂತರಾಷ್ಟ್ರೀಯತೆಯ ಪತಾಕೆಯನ್ನು ಎತ್ತಿ ಹಿಡಿಯುತ್ತದೆ.

–ಸಿಚಿ

ಉಪವಾಸ ಸತ್ಯಾಗ್ರಹದಲ್ಲಿರುವ ಲಡಾಖಿ ಕಾರ್ಯಕರ್ತರಿಗೆ ಬೆಂಬಲ



ಲಡಾಖ್‌ನ ಸೋನಮ್ ವಾಂಗ್‌ಚುಕ್ ಮತ್ತು ಹಲವಾರು ಇತರರು ದಿಲ್ಲಿಯಲ್ಲಿ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸ್ಥಳಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಮತ್ತು ಸಂಸದ ಡಾ. ಜಾನ್ ಬ್ರಿಟಾಸ್ ಭೇಟಿ ನೀಡಿ ಅವರ ಹೋರಾಟದೊಂದಿಗೆ ಸಿಪಿಐ(ಎಂ)ನ ಸೌಹಾರ್ದವನ್ನು ವ್ಯಕ್ತಪಡಿಸಿದರು.

ಲಡಾಖ್‌ನಿಂದ ಶಾಂತಿಯುತ ಪಾದಯಾತ್ರೆ ಮೂಲಕ ರಾಜಧಾನಿಯವರೆಗೂ ಬಂದ 150 ಕಾರ್ಯಕರ್ತರಿಗೆ ರಾಜಧಾನಿಯಲ್ಲಿ ಧರಣಿ ನಡೆಸಲು ಅವಕಾಶ ನೀಡದಿರುವುದು ಮೋದಿ ಸರ್ಕಾರದ ಸರ್ವಾಧಿಕಾರಿ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಧರಣಿಗೆ ಅವಕಾಶ ಕೊಡುವ ಬದಲು ಅವರನ್ನು ಬಂಧಿಸಲಾಯಿತು, ಕೆಟ್ಟದಾಗಿ ನಡೆಸಿಕೊಳ್ಳಲಾಯಿತು ಮತ್ತು ಈಗ ಲಡಾಖ್ ಭವನಕ್ಕೆ ಸೀಮಿತಗೊಳಿಸಲಾಗಿದೆ, ಅಲ್ಲಿ ಅವರು ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಬುಡಕಟ್ಟು ಜನಗಳ ಒಪ್ಪಿಗೆಯಿಲ್ಲದೆ ಕಾರ್ಪೊರೇಟ್ ಗಣಿಗಾರಿಕೆ ಕಂಪನಿಗಳು ಮತ್ತು ಇತರ ಖಾಸಗಿ ಯೋಜನೆಗಳಿಂದ ಲಡಾಖ್ ಭೂಮಿಯನ್ನು ರಕ್ಷಿಸಲು ಸಂವಿಧಾನದ ಆರನೇ ಷೆಡ್ಯೂಲಿನ ಸ್ಥಾನಮಾನವನ್ನು ಲಡಾಖಿಗೆ ನೀಡಬೇಕು ಎಂಬುದು ಅವರ ಪ್ರಮುಖ ಬೇಡಿಕೆಯಾಗಿದೆ. ಈ ಬಗ್ಗೆ ಸ್ವತಃ ಬಿಜೆಪಿ ತನ್ನ 2019ರ ಪ್ರಣಾಳಿಕೆಯಲ್ಲಿ ಭರವಸೆ ನೀಡಿತ್ತು.

ಆರನೇ ಶೆಡ್ಯೂಲ್ ಸ್ಥಾನಮಾನದ ಬೇಡಿಕೆಗೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ), ಸಂಬಂಧಪಟ್ಟ ಸರ್ಕಾರದ ಸಚಿವರು ತಕ್ಷಣವೇ ಸೋನಮ್ ವಾಂಗ್ಚುಕ್ ಮತ್ತು ಅವರ ತಂಡವನ್ನು ಭೇಟಿ ಮಾಡಿ ಪ್ರಶ್ನೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದೆ.

ಎರಡು ರಾಜ್ಯಗಳ ವಿಧಾನಸಭಾ ಚುನಾವಣೆ...... ಪುಟ 11 ರಿಂದ

ಎಂದು ಮೊದಲಿಗೆ ಜೈರಾಮ್ ರಮೇಶ್ ಅವರಂತಹವರು ಘೋಷಿಸಿದರು. ಈ ಬಗ್ಗೆ ಚುನಾವಣಾ ಆಯೋಗಕ್ಕೂ ದೂರು ನೀಡಲಾಗಿದೆ. ಆದರೆ ಜನರ ತೀರ್ಪನ್ನು ಒಪ್ಪುವುದಿಲ್ಲ ಎಂದು ಹೇಳುವುದು ಪ್ರಜಾಸತ್ತಾತ್ಮಕವಲ್ಲ ಎಂದು ಆ ಪಕ್ಷದ ಆರೋಪಕ್ಕೆ ಚುನಾವಣಾ ಆಯೋಗ ತಿರುಗೇಟು ನೀಡಿದೆ. ಕೆಲವೆಡೆ ಆರೋಪಿಸಿದಂತೆ ಇವಿಎಂಗಳ ಬ್ಯಾಟರಿಗಳನ್ನು ಹೆಚ್ಚು ಚಾರ್ಜ್ ಮಾಡಿದ್ದರಿಂದ ದೋಷ ಉಂಟಾಗಿದೆ ಎಂದು ಆರೋಪಿಸಿರುವುದು ಸರಿಯಲ್ಲ ಎಂದು ಸಮರ್ಥಿಸಿಕೊಂಡಿದೆ. ಸದ್ಯ ಈ ವಿಚಾರದಲ್ಲಿ ಇನ್ನಷ್ಟು ಆಳವಾದ ಅಧ್ಯಯನದ ನಂತರವೇ ಮುಂದುವರಿಯಲು ಕಾಂಗ್ರೆಸ್ ನಿರ್ಧರಿಸಿದೆ. ಆದಾಗ್ಯೂ, ಜಾತ್ಯತೀತ ಪಕ್ಷಗಳನ್ನು 'ಇಂಡಿಯಾ' ಪಾಲುದಾರರನ್ನಾಗಿ ಸೇರಿಸುವಲ್ಲಿನ ವಿಫಲತೆ, ಅದರ ಚುನಾವಣಾ ನಡೆಗಳು ಮತ್ತು ಘೋಷಣೆಗಳ ಬಗ್ಗೆ ಇದುವರೆಗೆ ಮಾತನಾಡಲಾಗಿಲ್ಲ. ಈ ಹಿಂದೆ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ನಡೆದ ತಪ್ಪುಗಳೇ ಇಲ್ಲಿಯೂ ಪುನರಾವರ್ತನೆಯಾಗಿದೆ ಎಂಬ ಹಲವು ಕಡೆಯಿಂದ ಬಂದ ಟೀಕೆಗಳನ್ನು ಕಾಂಗ್ರೆಸ್ ಪಕ್ಷ ಪರಿಗಣಿಸುತ್ತಿಲ್ಲ. ಒಂದು ರೀತಿಯ ಹತಾಶ ಅಸಹನೆಯಲ್ಲಿ, ಅನೈಕ್ಯತೆಯು ಬೆಳೆಯುತ್ತಿರುವ ಸ್ಥಿತಿಯಲ್ಲಿ ಉಳಿದುಹೋಗಿದೆ.

ಬಿಜೆಪಿಯ ಎಂಟು ಸಚಿವರು ಸೋತಿದ್ದಾರೆ

ಈ ಫಲಿತಾಂಶದ ನಂತರ ದೆಹಲಿಯಲ್ಲಿ ತಾನು ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಎಎಪಿ ಘೋಷಿಸಿದೆ. ಉತ್ತರಪ್ರದೇಶದಲ್ಲಿ ಮುಂಬರುವ ಉಪಚುನಾವಣೆಯಲ್ಲಿಯೂ ಸಮಾಜವಾದಿ ಪಕ್ಷ (ಎಸ್.ಪಿ.) ಕಾಂಗ್ರೆಸ್ಸಿಂದ ದೂರವಾಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ, ನಾವು ಒಟ್ಟಾಗಿ ಹೋರಾಡುತ್ತೇವೆ ಎಂದು ಅಖಿಲೇಶ್ ಯಾದವ್ ಸ್ಪಷ್ಟಪಡಿಸಿದ್ದಾರೆ. ಆ ಪಕ್ಷದ ನಾಯಕತ್ವ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದೂ ಸಿಪಿಎಂ ಕೂಡಾ ಸಲಹೆ ನೀಡಿದೆ. ಮಹಾರಾಷ್ಟ್ರದಲ್ಲೂ ಇದೇ ರೀತಿಯ ಟೀಕೆ ಇದಕ್ಕೂ ಮೊದಲೇ ಇದೆ. ಹರಿಯಾಣದಲ್ಲಿ ಎಂಟು ಜನ ಬಿಜೆಪಿ ಸಚಿವರು ಸೋತಿದ್ದಾರೆ ಎಂದರೆ ಜನರ ವಿರೋಧ ಕಡಿಮೆ ಇಲ್ಲ ಎಂಬುದು ತಿಳಿಯುತ್ತದೆ. ಜಾತ್ಯತೀತ ಪಕ್ಷಗಳು ಒಗ್ಗೂಡಿ ಹೋರಾಡುವ ಅಗತ್ಯವನ್ನು ಹರ್ಯಾಣ ಫಲಿತಾಂಶಗಳು ನೆನಪಿಸುತ್ತವೆ.

ಕಾಶ್ಮೀರದಲ್ಲಿ ನಡೆಯಬೇಕಾದ್ದೇನು?

ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಅದರ ಮಿತ್ರಪಕ್ಷಗಳು ಸಂಪೂರ್ಣ ಬಹುಮತ ಸಾಧಿಸಿವೆಯಾದರೂ, ಕಾಂಗ್ರೆಸ್ ಸ್ಥಾನಗಳು ಕಡಿಮೆಯಾಗಿವೆ. ನ್ಯಾಷನಲ್ ಕಾನ್ಫರೆನ್ಸ್ 42, ಬಿಜೆಪಿ 29, ಕಾಂಗ್ರೆಸ್ 6, ಪಿಡಿಪಿ 3, ಸಿಪಿಐ(ಎಂ) 1, ಎಎಪಿ 1, ಜೆಪಿಸಿ 1 ಮತ್ತು ಪಕ್ಷೇತರರು 7 ಸ್ಥಾನ ಪಡೆದಿದ್ದಾರೆ. ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಪಿಡಿಪಿಯನ್ನು ಮತದಾರರು ತಿರಸ್ಕರಿಸಿ, ನ್ಯಾಷನಲ್ ಕಾನ್ಫರೆನ್ಸ್ ಗೆ ಆಡಳಿತವನ್ನು ಒಪ್ಪಿಸಿದ್ದಾರೆ. ಜಮ್ಮುವಿನಲ್ಲಿ ಬಿಜೆಪಿಗೆ ಸ್ಥಾನಗಳು, ಮತಗಳು ಉತ್ತಮವಾಗಿಯೇ ಬಂದಿವೆ. ಈ ಎರಡು ಪ್ರಾಂತ್ಯಗಳ ಜನರ ಆಕಾಂಕ್ಷೆಗಳು ಮತ್ತು ಅಗತ್ಯಗಳನ್ನು ಪೂರೈಸುವುದು ಈಗ ಒಮರ್ ಅಬ್ದುಲ್ಲಾ ನಾಯಕತ್ವದಲ್ಲಿ ರಚನೆಯಾಗಲಿರುವ ಸರ್ಕಾರದ ಮುಂದೆ ಇರುವ ಸವಾಲಾಗಿದೆ. ಸಂಪೂರ್ಣ ರಾಜ್ಯದ ಸ್ಥಾನಮಾವನ್ನು ಮರುಸ್ಥಾಪಿಸುವುದು ತಮ್ಮ ಆದ್ಯ ಕರ್ತವ್ಯ ಎಂದು ಒಮರ್ ಘೋಷಿಸಿದ್ದಾರೆ. ಅದೇ ಸಮಯದಲ್ಲಿ ವೈಯಕ್ತಿಕವಾಗಿ ಪ್ರಧಾನಿ ಮೋದಿಯವರ ಬಗ್ಗೆ ಸಕಾರಾತ್ಮಕ ಧೋರಣೆಯಲ್ಲಿ ಮಾತನಾಡುವುದು ಕಾಶ್ಮೀರದ ಅವಲಂಬನೆಗೆ ಒಂದುನಿದರ್ಶನವಾಗಿದೆ. ಆದರೆ, ಕಾಶ್ಮೀರದಲ್ಲಿ ಮತ ವಿಭಜನೆಗೆ ಬಿಜೆಪಿ ಹಲವು ಪ್ರತ್ಯೇಕತಾವಾದಿ ಪಕ್ಷಗಳನ್ನು ಬಳಸಿಕೊಂಡಿದೆ ಎಂಬ ಆರೋಪಗಳಿವೆ. ಇದಲ್ಲದೆ, ಲೆಫ್ಟಿನೆಂಟ್ ಗವರ್ನರ್ ಅವರಿಗೆ ಮಂಚೆಯೇ ವ್ಯಾಪಕವಾದ ಅಧಿಕಾರವನ್ನು ನೀಡುವ ಮೂಲಕ ಐವರು ಶಾಸಕರನ್ನು ನಾಮನಿರ್ದೇಶನ ಮಾಡುವ ಸೂಚನೆಯನ್ನು ಸಹ ನೀಡಿದರು. ಈ ರೀತಿಯಲ್ಲಿ ಬಿಜೆಪಿಯ ಕುತಂತ್ರ ಮುಂದುವರಿದಿದೆ. ನಾಲ್ವರು ಸ್ವತಂತ್ರ ಶಾಸಕರು ತಮ್ಮ ಬೆಂಬಲವನ್ನು ಘೋಷಿಸಿದ್ದರಿಂದ, ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರ ರಚಿಸುವಲ್ಲಿ ಮೇಲುಗೈ ಸಾಧಿಸಿದೆ. ಕಾಂಗ್ರೆಸ್, ಸಿಪಿಎಂ ಮತ್ತು ಸ್ವತಂತ್ರ ಸದಸ್ಯರನ್ನು ಸೇರಿಸಿದರೆ 53 ಸ್ಥಾನಗಳ ಪ್ರಬಲ ಬೆಂಬಲವಿದೆ. ಜನರ ತೀರ್ಪಿಗೆ ಅನುಗುಣವಾಗಿ ಕ್ಷಿಪ್ರ ಕ್ರಮ ಕೈಗೊಳ್ಳುವುದು ಅಬ್ದುಲ್ಲಾ ಅವರ ಕರ್ತವ್ಯವಾಗಿದ್ದು, ಅದಕ್ಕೆ ಸಂಪೂರ್ಣ ಸಹಕಾರ ನೀಡುವುದು, ತನ್ನ ಏಕಪಕ್ಷೀಯ ನಿರಂಕುಶ ಪ್ರವೃತ್ತಿಯನ್ನು ಬದಲಾಯಿಸುವುದು ಕೇಂದ್ರದ ಜವಾಬ್ದಾರಿಯಾಗಿದೆ.

ಕೃಪೆ: ಪ್ರಜಾಶಕ್ತಿ (ಕನ್ನಡಕ್ಕೆ: ಸಿಚಿ)





ಕಾಶ್ಮೀರದ ಕೆಂಪು ದ್ವೀಪದಲ್ಲಿ ಐದನೇ ಬಾರಿಗೆ ಮೊಹಮ್ಮದ್ ಯೂಸುಫ್ ತರಿಗಾಮಿ ಗೆಲುವು

ಕಾಶ್ಮೀರದ ಕೆಂಪು ದ್ವೀಪದಲ್ಲಿ ಇಸ್ಲಾಮಿಸ್ಟ್ ಮತ್ತು ಕಮ್ಯುನಿಸ್ಟರ ನಡುವಿನ ಯುದ್ಧ ಎಂದು ಹೇಳಲಾಗುವ ದಕ್ಷಿಣ ಕಾಶ್ಮೀರದ ಕುಲ್ಗಾಮ್ ವಿಧಾನಸಭಾ ಸ್ಥಾನವು ಸಿಪಿಐ(ಎಂ) ನ ಭದ್ರಕೋಟೆಯಾಗಿದೆ. ಪಕ್ಷದ ನಾಯಕ ಮೊಹಮ್ಮದ್ ಯೂಸುಫ್ ತರಿಗಾಮಿ 1996 ರಿಂದ ಇಲ್ಲಿ ಚುನಾಯಿತರಾಗುತ್ತಿದ್ದಾರೆ. ತರಿಗಾಮಿ ಅವರು ಈಗ ಐದನೇ ಬಾರಿಗೆ ಗೆದ್ದಿದ್ದಾರೆ. ನಿಷೇಧಿತ ಜಮಾತ್-ಎ-ಇಸ್ಲಾಮಿ (ಜೆಐ) ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಸಯರ್ ಅಹ್ಮದ್ ರೇಶಿ ಅವರನ್ನು ಸೋಲಿಸುವ ಮೂಲಕ ತರಿಗಾಮಿ ಈ ಗೆಲುವು ಸಾಧಿಸಿದ್ದಾರೆ. 1996 ರಿಂದ, ಕುಲ್ಗಾಮ್ ಜಿಲ್ಲೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸಿಪಿಐಎಂ ನ ರಾಜಕೀಯ ಭದ್ರಕೋಟೆಯಾಗಿದೆ. 1996, 2002, 2008 ಮತ್ತು 2014 ರಲ್ಲಿ ರಾಜ್ಯದ ವಿಧಾನಸಭೆಗೆ ಸತತ ನಾಲ್ಕು ಅವಧಿ ತರಿಗಾಮಿ ಅವರು ಗೆಲುವು ಸಾಧಿಸಿದ್ದರು. ಈ ಬಾರಿ ನಿಷೇದಿತ ಸಂಘಟನೆಯ ಪುನರುತ್ಥಾನದೊಂದಿಗೆ, ತರಿಗಾಮಿ ಅವರು ಸಾಕಷ್ಟು ಸವಾಲನ್ನು ಎದುರಿಸಬೇಕಾಯಿತು.

ಸಿ.ಸಿದ್ದಯ್ಯ

'ಕಮ್ಯುನಿಸಂ ಮಾಯವಾಗಿದೆ ಮತ್ತು ಕುಲ್ಗಾಮ್ನ ಜನರು ಕಮ್ಯೂನಿಸ್ಟರಿಗೆ ತಮ್ಮ ಸ್ಥಾನವನ್ನು ತೋರಿಸುವ ಸಮಯ ಬಂದಿದೆ. ಇನ್ನು ಕುಲ್ಗಾಂನಲ್ಲಿ ಕಮ್ಯುನಿಸ್ಟರಿಗೆ ಸ್ಥಾನವಿಲ್ಲ. ಜಮಾತ್-ಎ-ಇಸ್ಲಾಮಿಯ ಮೇಲೆ ನಿರಂತರ ನಿಷೇಧವಿರುವುದು ದುಃಖಕರವಾಗಿದೆ ಆದರೆ ನಾವು ನಿದ್ದೆ ಮಾಡಲು ಸಾಧ್ಯವಿಲ್ಲ, ನಾವು ಮುಂದುವರಿಯಬೇಕಾಗಿದೆ, ಒಂದು ವೇಳೆ ನನಗೆ ಸೋಲುಂಟಾದರೆ ಅದನ್ನು ಇಸ್ಲಾಮಿನ ಸೋಲು ಎಂದು ನೋಡಬಹುದು.' ಇದು ಪುಲ್ಗಾಮ್ ವಿಧಾನಸಭಾ ಕ್ಷೇತ್ರದಲ್ಲಿ ಮಹಮ್ಮದ್ ಯೂಸುಫ್ ತರಿಗಾಮಿ ವಿರುದ್ದ ಸ್ಪರ್ಧಿಸಿದ್ದ, ನಿಷೇಧಿತ ಜಮಾತ್-ಎ-ಇಸ್ಲಾಮಿ ಬೆಂಬಲವನ್ನು ಹೊಂದಿರುವ ಸ್ವತಂತ್ರ ಅಭ್ಯರ್ಥಿ ಸಾಯರ್ ಅಹ್ಮದ್ ರೇಶಿ ಅವರ ಮಾತು.

'ಕೆಂಪು ಕೋಟೆ' ಕುಲ್ಗಾಮ್ ನಲ್ಲಿ ಯಾವುದೇ "ಹಸಿರು ಅಲೆ" ಇಲ್ಲ

ಇವರಿಗೆ ತಿರುಗೇಟು ನೀಡಿದ ತರಿಗಾಮಿ ಅವರು, "ಸಯಾರ್ ಮತ್ತು ಜಮಾತ್-ಎ-ಇಸ್ಲಾಮಿ ಅನ್ನು "ಕಳೆ". ಚುನಾವಣಾ ರಾಜಕೀಯಕ್ಕೆ ಪ್ರವೇಶಿಸುವ ವಿಷಯದಲ್ಲಿ ಜಮಾತ್ ಯು-ಟರ್ನ್ ಮಾಡಿರುವುದು ಇದೇ ಮೊದಲಲ್ಲ, 'ಕೆಂಪು ಕೋಟೆ' ಕುಲ್ಗಾಮ್ ನಲ್ಲಿ ಯಾವುದೇ "ಹಸಿರು ಅಲೆ" ಇಲ್ಲ" ಎಂದು ಪ್ರತಿಸ್ಪರ್ಧಿಯನ್ನು ನೇರವಾಗಿ ಉಲ್ಲೇಖಿಸಿ ಹೇಳಿದರು.

"ಧರ್ಮ ಆಧಾರಿತ ರಾಜಕಾರಣಕ್ಕೆ ಇಲ್ಲಿ ಅವಕಾಶವಿಲ್ಲ. ನನ್ನ ಕಾರ್ಯಕರ್ತರ ಹತ್ಯೆ ಹಿಂದೆ ಜಮಾತೆ ಇಸ್ಲಾಮಿ ಕೈವಾಡವಿದೆ, ಅವರು ಜನರ ಮುಂದೆ ಬಂದು ಕ್ಷಮೆ ಕೇಳಲಿ, ಕೊಲೆಗಾರರನ್ನು ಬೆಂಬಲಿಸಿದ್ದು ಮಾತ್ರವಲ್ಲದೆ ಬಹಿರಂಗವಾಗಿ ಜನರನ್ನು ಕೊಂದಿದ್ದಾರೆ, ಇಲ್ಲಿ ನಡೆದಿರುವ ಹತ್ಯೆಗಳ ಬಗ್ಗೆ ತನಿಖೆ ನಡೆಸಿ ಹಂತಕರ ವಿರುದ್ಧ ಪ್ರಕರಣ ದಾಖಲಿಸಬೇಕು" ಎಂದು ಕೋಪಗೊಂಡ ತರಿಗಾಮಿ ಹೇಳಿದರು.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇರವಾಗಿ ಸ್ಪರ್ಧಿಸಲು ಸಾಧ್ಯವಾಗದೆ, ಭಿನ್ನ ಹಿನ್ನೆಲೆಯಿಲ್ಲದ ಪ್ರಾಕ್ಸಿ ಪಕ್ಷಗಳನ್ನು ಕಣಕ್ಕಿಳಿಸಿತ್ತು. ಚುನಾವಣಾ ಪ್ರಚಾರದ ಬಹಿರಂಗ ಸಭೆಯೊಂದರಲ್ಲಿ ತರಿಗಾಮಿ ಅವರು ಒಂದು ರೂಪಕದ ಮೂಲಕ ಜನರನ್ನು ಎಚ್ಚರಿಸಿದ ರೀತಿ ಹೀಗಿತ್ತು: "ಮಾರುಕಟ್ಟೆಯಲ್ಲಿ ಈಗಾಗಲೇ ಮರಿಗಳನ್ನು ತೆಗೆದುಕೊಂಡು ಹೋಗಿರುವ ಹೊಸ ಹದ್ದು ಬಂದಿದೆ. ಜನರು ತಮ್ಮ ಮರಿಗಳನ್ನು ರಕ್ಷಿಸಬೇಕು, ಏಕೆಂದರೆ ಈ ಹದ್ದು ಅವುಗಳನ್ನು ಕಸಿದುಕೊಳ್ಳುವ ಅಭ್ಯಾಸವನ್ನು ಹೊಂದಿದೆ. ಈ ಹದ್ದು ದೊಡ್ಡ ಹದ್ದಿನೊಂದಿಗೆ ಮೈತ್ರಿ ಮಾಡಿಕೊಂಡಿದೆ ಎಂಬುದನ್ನು ಕುಲ್ಗಾಮ್ ನ ಜನರು ಮರೆಯಬಾರದು."

"ಕೇಂದ್ರದ ಬಿಜೆಪಿ ಸರ್ಕಾರವು ಎಫ್ಐಆರ್ ಗಳನ್ನು ಹೊರತುಪಡಿಸಿ ಯುವಕರಿಗೆ ನೀಡಲು ಏನೂ ಇಲ್ಲ. ಇದು ಎಫ್ಐಆರ್ ಸರ್ಕಾರವಾಗಿ ಮಾರ್ಪಟ್ಟಿದೆ ಮತ್ತು ನಮ್ಮ ಯುವಕರು ಮತ್ತು ಅವರ ಭವಿಷ್ಯಕ್ಕೆ ಅವರು ಮಾಡಿದ ತಪ್ಪುಗಳಿಗೆ ಹೊಣೆಗಾರಿಕೆಯನ್ನು ಒತ್ತಾಯಿಸಲು ನಾವು ಅವರನ್ನು ವಿಧಾನಸಭೆಯಲ್ಲಿ ಎದುರಿಸುತ್ತೇನೆ" ಎಂದು ಅವರು ಜನರಿಗೆ ಭರವಸೆ ನೀಡಿದರು.

ಸಿಪಿಐ(ಎಂ) ನ ಭದ್ರಕೋಟೆ

ದಕ್ಷಿಣ ಕಾಶ್ಮೀರದಲ್ಲಿ ಅತ್ಯಂತ ನಿಕಟವಾಗಿ ವೀಕ್ಷಿಸಲ್ಪಡುವ ಕ್ಷೇತ್ರಗಳಲ್ಲಿ ಒಂದಾದ ಕುಲ್ಗಾಮ್ ಕ್ಷೇತ್ರವು ಸಿಪಿಐ(ಎಂ)ಗೆ ಬಹುಕಾಲದಿಂದ ಭದ್ರಕೋಟೆಯಾಗಿದೆ. ಅನುಭವಿ ನಾಯಕ ಮೊಹಮ್ಮದ್ ಯೂಸುಫ್ ತರಿಗಾಮಿ ಸುಮಾರು ಮೂರು ದಶಕಗಳಿಂದ ಅಸೆಂಬ್ಲಿ ಸ್ಥಾನವನ್ನು ಹೊಂದಿದ್ದಾರೆ. ಇದೂ ಸೇರಿದಂತೆ 1996ರಿಂದ ಸತತ ಐದು ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿದ್ದಾರೆ. ಈ ಬಾರಿ ಕೇಂದ್ರಾಡಳಿತ ಪ್ರದೇಶದಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಎನ್ಸಿ)-ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿಯಾಗಿ ಸಿಪಿಐಎಂ ನಿಂದ ತರಿಗಾಮಿ ಸ್ಪರ್ಧಿಸಿದ್ದರು. ತರಿಗಾಮಿ ಅವರನ್ನು ಸೋಲಿಸಲು ನಿಷೇಧಿತ ಜಮಾತ್-ಎ-ಇಸ್ಲಾಮಿಯಿಂದ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಸಯ್ಯರ್ ಅಹ್ಮದ್ ರೇಶಿ ಇನ್ನಿಲ್ಲದ ಪ್ರಯತ್ನ ಮಾಡಿದ್ದರು. ಈ ಚುನಾವಣೆಯಲ್ಲಿ, ಜಮಾತ್-ಎ-ಇಸ್ಲಾಮಿ ಬೆಂಬಲಿತ ಅಭ್ಯರ್ಥಿಯ ಪ್ರವೇಶದೊಂದಿಗೆ ತರಿಗಾಮಿ ಅವರ ಪರಂಪರೆಗೆ ಅಪಾಯವಿದೆ ಎಂದು ಹಲವು ವಿಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ ಎಂದು 'ಕಾಶ್ಮೀರ್ ಅಬ್ಸರ್ವರ್' ಪತ್ರಿಕೆ ವರದಿ ಮಾಡಿತ್ತು. ಇದು ಕಾಶ್ಮೀರದ ಏಕೈಕ ಕೆಂಪು ದ್ವೀಪದಲ್ಲಿ ಇಸ್ಲಾಮಿಸ್ಟ್ ಮತ್ತು ಕಮ್ಯುನಿಸ್ಟರ ನಡುವಿನ ಯುದ್ಧ ಎಂದು ಕೆಲವರು ಹೇಳುತ್ತಾರೆ ಎಂದು ಆ ಪತ್ರಿಕೆ ಹೇಳಿತ್ತು.

"ಜಮ್ಮು-ಕಾಶ್ಮೀರದ ರಾಜಕೀಯ ಮತ್ತು ಚುನಾವಣಾ ಭೂದೃಶ್ಯವು 1990ರ ದಶಕದಿಂದಲೂ ಬಾರೀ ಬದಲಾವಣೆಗೆ ಒಳಗಾಗಿದೆ. ನಿರಂತರವಾಗಿ ಬದಲಾಗುತ್ತಿರುವ ಕಾಶ್ಮೀರದ ರಾಜಕೀಯ ಕ್ಷೇತ್ರದಲ್ಲಿನ ಕೆಲವೇ ಸ್ಥಿರ ವ್ಯಕ್ತಿಗಳಲ್ಲಿ ಒಬ್ಬರು ಮೊಹಮ್ಮದ್ ಯೂಸುಫ್ ತರಿಗಾಮಿ, ಅವರು ಹಸಿರು ಕಣಿವೆಗೆ ಕಮ್ಯೂನಿಸ್ಟ್ ಕೆಂಪು ಬಣ್ಣದ ಚುಕ್ಕೆ ತಂದಿದ್ದಾರೆ" ಎನ್ನುತ್ತಾರೆ 'ಇಂಡಿಯಾ ಟುಡೆ' ಪತ್ರಿಕೆಯ ಲೇಖಕ ಸುಶಿಮ್ ಮುಕುಲ್.

ಮಾಜಿ ಮಿತ್ರಪಕ್ಷಗಳೊಂದಿಗೂ ಸ್ಪರ್ಧೆ ಎದುರಿಸಬೇಕಾಗಿತ್ತು

ಮೆಹಬೂಬಾ ಮುಫ್ತಿ ನೇತೃತ್ವದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಮೊಹಮ್ಮದ್ ಅಮೀನ್ ದಾರ್ ಪ್ರತಿನಿಧಿಸುತ್ತಿದ್ದ ಅಪ್ನಿ ಪಕ್ಷದ ಇಂಜಿನಿಯರ್ ಮೊಹಮ್ಮದ್ ಅಕಿಬ್ ಕೂಡ ಸ್ಪರ್ಧೆಯಲ್ಲಿದ್ದರು. ತರಿಗಾಮಿ ಅವರು ರೇಶಿಯೊಂದಿಗೆ ಮಾತ್ರವಲ್ಲದೆ, ಮಾಜಿ ಮಿತ್ರಪಕ್ಷಗಳೊಂದಿಗೂ ಸ್ಪರ್ಧೆ ಎದುರಿಸಬೇಕಾಗಿತ್ತು. ಒಂದು ಕಾಲದಲ್ಲಿ ಅವರ ಆಪ್ತರಾಗಿದ್ದ ಮೊಹಮ್ಮದ್ ಅಕಿಬ್ ದಾರ್ ಅವರು ಈಗ ಇತರ ಪಕ್ಷಗಳನ್ನು ಪ್ರತಿನಿಧಿಸಿದ್ದರು. ಪೀಪಲ್ಸ್ ಕಾನ್ಫರೆನ್ಸ್ (ಪಿಸಿ)ನ ನಜೀರ್ ಲಾವೇ ಅವರು 2008 ರಿಂದ ತರಿಗಾಮಿ ವಿರುದ್ಧ ಸ್ಪರ್ಧಿಸಿದ್ದರು. ಅವರು ಜಮಾತ್-ಎ-ಇಸ್ಲಾಮಿ ಕಾರ್ಯಕರ್ತರಿಂದ ಗಣನೀಯ ಬೆಂಬಲವನ್ನು ಪಡೆಯುತ್ತಿದ್ದರು ಮತ್ತು ನಜೀರ್ ಲಾವೇ 2014ರಲ್ಲಿ ಪಿಡಿಪಿ ಅಭ್ಯರ್ಥಿಯಾಗಿದ್ದಾಗ ಕೇವಲ 334 ಮತಗಳಿಂದ ಸೋತರು. ನಂತರ ಲಾವೇ ಪಿಡಿಪಿಯ ನಾಮನಿರ್ದೇಶಿತ ರಾಜ್ಯಸಭಾ ಸದಸ್ಯರಾಗಿದ್ದರು, ಆದರೆ 2019ರ ನಂತರ ಅವರು ಪಿಡಿಪಿ ತೊರೆದು ಸಜಾದ್ ಲೋನ್ ನೇತೃತ್ವದ ಪಿಸಿಗೆ ಸೇರಿದರು.

ಈ ಬಾರಿ 10 ಅಭ್ಯರ್ಥಿಗಳು ಕುಲ್ಗಾಮ್ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದರು. ತಾರಿಗಾಮಿ ಮತ್ತು ರೇಶಿ ನಡುವೆ ನೇರ ಸ್ಪರ್ಧೆ ಇತ್ತು. ತರಿಗಾಮಿ ಅವರು 33,634 ಮತಗಳನ್ನು ಪಡೆದು, 7838 ಮತಗಳ ಅಂತರದಿಂದ ಸ್ಥಾನವನ್ನು ಗೆದ್ದರು, ಅವರ ಸಮೀಪದ ಪ್ರತಿಸ್ಪರ್ಧಿ ರೇಶಿ 25,796 ಮತಗಳನ್ನು ಪಡೆದರು. ರೇಶಿ ಮೊದಲ ಬಾರಿಗೆ ಚುನಾವಣೆಗೆ ಸ್ಪರ್ಧಿಸಿದ್ದರು.

"ಹಕ್ ಕಾ ಹಮಿ, ತರಿಗಾಮಿ"

"ಹಕ್ ಕಾ ಹಮಿ, ತರಿಗಾಮಿ" (ನ್ಯಾಯದ ಚಾಂಪಿಯನ್ ತರಿಗಾಮಿ) ಚುನಾವಣಾ ಪಲಿತಾಂಶ ಹೊರಬಂದು ತರಿಗಾಮಿ ಗೆಲುವು ಸಾಧಿಸಿದ ಸುದ್ದಿ ಹೊರಬರುತ್ತಿದ್ದಂತೆ ಕುಲ್ಗಾಮ್ ನ ಬೀದಿಗಳಲ್ಲಿ ಪ್ರತಿಧ್ವನಿಸಿದ ಹರ್ಷದ ಘೋಷಣೆಗಳಿವು. ಪಟಾಕಿ ಸಿಡಿಸಿ ಹರ್ಷೋದ್ಗಾರದಿಂದ ತರಿಗಾಮಿ ಅವರನ್ನು ಜನಸಮೂಹವು ಸ್ವಾಗತಿಸಿತು. ತರಿಗಾಮಿ ಕಾರಿನ ಮೇಲಿಂದ ತಮ್ಮ ಬೆಂಬಲಿಗರತ್ತ ಕೈ ಬೀಸಿದರು.

ನಿಷೇಧಿತ ಸಂಘಟನೆ

1980ರ ದಶಕದ ನಂತರ ಜಮಾತ್-ಎ-ಇಸ್ಲಾಮಿ ಸಂಘಟನೆಯು ತನ್ನ ಸಾಮಾಜಿಕ-ಧಾರ್ಮಿಕ ಮೂಲಭೂತವಾದಕ್ಕೆ ಹೆಸರುವಾಸಿಯಾಗಿದ್ದು, ಈ ಪ್ರದೇಶದಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು ಇದೇ ಮೊದಲು. ಈ ಹಿಂದೆ ಅಮೂಲಾಗ್ರ ಸಂಘಟನೆಯು ಸುಮಾರು ಮೂರು ದಶಕಗಳ ಕಾಲ ಚುನಾವಣಾ ಪ್ರಜಾಪ್ರಭುತ್ವವನ್ನು ಬಹಿಷ್ಕರಿಸಿತು. ಈ ಸಂಘಟನೆಯನ್ನು 2019ರಲ್ಲಿ ಕೇಂದ್ರ ಸರ್ಕಾರ ನಿಷೇಧಿಸಿತು. 2024ರ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ 10 ಜಮಾತ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳಲ್ಲಿ ಕುಲ್ಗಾಮ್ ನಲ್ಲಿ ಸ್ಪರ್ಧಿಸಿದ್ದ ರೇಶಿ ಕೂಡ ಸೇರಿದ್ದಾರೆ ಎಂದು ದಿ ಇಂಡಿಯನ್ ಎಕ್ಸ್ ಪ್ರೆಸ್ ವರದಿ ಮಾಡಿದೆ.

2008 ಮತ್ತು 2014ರ ಹಿಂದಿನ ಎರಡು ಅಸೆಂಬ್ಲಿ ಚುನಾವಣೆಗಳಲ್ಲಿ, PDP ಅಭ್ಯರ್ಥಿಗಳು ಜಮಾತ್-ಎ-ಇಸ್ಲಾಮಿ ಕಾರ್ಯಕರ್ತರಿಂದ ಗಣನೀಯ ಬೆಂಬಲವನ್ನು ಪಡೆದ ಕಾರಣ, ತರಿಗಾಮಿ ಕಡಿಮೆ ಅಂತರದಿಂದ ಗೆಲುವು ಸಾಧಿಸಿದರು. ದಕ್ಷಿಣ ಕಾಶ್ಮೀರದ ಇತರ ಪ್ರದೇಶಗಳಿಗಿಂತ ಭಿನ್ನವಾಗಿ, ಕುಲ್ಗಾಮ್ ಸಾಮಾನ್ಯವಾಗಿ ಹೆಚ್ಚಿನ ಮತದಾನವನ್ನು ಕಂಡಿದೆ, 2014 ರ ಕೊನೆಯ ಅಸೆಂಬ್ಲಿ ಚುನಾವಣೆಯಲ್ಲಿ ಶೇ.56.5 ಅನ್ನು ದಾಖಲಿಸಿತ್ತು.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ನೇರವಾಗಿ ಸ್ಪರ್ಧಿಸಲು ಸಾಧ್ಯವಾಗದೆ, ಭಿನ್ನ ಹಿನ್ನೆಲೆಯಿಲ್ಲದ ಪ್ರಾಕ್ಸಿ ಪಕ್ಷಗಳನ್ನು ಕಣಕ್ಕಿಳಿಸಿತ್ತು. ಚುನಾವಣಾ ಪ್ರಚಾರದ ಬಹಿರಂಗ ಸಭೆಯೊಂದರಲ್ಲಿ ತರಿಗಾಮಿ ಅವರು ಒಂದು ರೂಪಕದ ಮೂಲಕ ಜನರನ್ನು ಎಚ್ಚರಿಸಿದ ರೀತಿ ಹೀಗಿತ್ತು: "ಮಾರುಕಟ್ಟೆಯಲ್ಲಿ ಈಗಾಗಲೇ ಮರಿಗಳನ್ನು ತೆಗೆದುಕೊಂಡು ಹೋಗಿರುವ ಹೊಸ ಹದ್ದು ಬಂದಿದೆ. ಜನರು ತಮ್ಮ ಮರಿಗಳನ್ನು ರಕ್ಷಿಸಬೇಕು, ಏಕೆಂದರೆ ಈ ಹದ್ದು ಅವುಗಳನ್ನು ಕಸಿದುಕೊಳ್ಳುವ ಅಭ್ಯಾಸವನ್ನು ಹೊಂದಿದೆ. ಈ ಹದ್ದು ದೊಡ್ಡ ಹದ್ದಿನೊಂದಿಗೆ ಮೈತ್ರಿ ಮಾಡಿಕೊಂಡಿದೆ ಎಂಬುದನ್ನು ಕುಲ್ಗಾಮ್ ನ ಜನರು ಮರೆಯಬಾರದು."

NEW No. MAG(3)/NPP/205/2021-2022
JANASHAKTHI KANNADA VARA PATRIKE October 14-20, 2024 Price: Rs. 10/- Date of Publication: 11 October 2024 RNI No. KARKAN /2006/17926 Posted on 16-10-2024
Posted at BG PSO, BG - 560026 **Posted at Periodical Rate -** Rs. 2



ಸಂಖ್ಯೆ: CPRO/PR/PA/14/24-25
ದಿನಾಂಕ:09–10–2024

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**